ಅರೆಬಾಸೆ

(ಗೌಡ ಕನ್ನಡ) ವ್ಯಾಕರಣ

ಪ್ರೊ. ಕೆ. ಕುಶಾಲಪ್ಪ ಗೌಡ

ಕರ್ನಾಟಕ ಅರೆಭಾಷೆ ಸಂಸ್ಕೃತಿ ಮತ್ತು ಸಾಹಿತ್ಯ ಅಕಾಡೆಮಿ

ಅರೆಬಾಸೆ

(ಗೌಡ ಕನ್ನಡ) ವ್ಯಾಕರಣ

ಲೇಖಕ

ಪ್ರೊ. ಕೆ. ಕುಶಾಲಪ್ಪ ಗೌಡ

ಕರ್ನಾಟಕ ಅರೆಭಾಷೆ ಸಂಸ್ಕೃತಿ ಮತ್ತು ಸಾಹಿತ್ಯ ಅಕಾಡೆಮಿ

ಮಡಿಕೇರಿ

Arebase (Gowda Kannada) Vyakarana

A descriptive grammar of Arebase, a dailect of Kannada spoken by the Community called Gowda, settled in some parts of Kodagu and the Eastern parts of DakshinaKannada.

Written by
Prof. K. Kushalappa Gowda
Rtd. Professor of Kannada
University of Madras

Published by
Registrar
Karnataka Arebhase Samskrithi Mattu Sahithya Academy
Coffee Kripa Building, Mahatma Gandhi Road, Madikeri
Phone : 08272 - 223055

First Impression : 2019

Size : Demy 1/8 Copies : 1000

Paper Used : 70 GSM Maplitho

Pages : 132 Price : Rs. 80.00

DTP : **Vinoo Enterprises,** J.C. Road, Sullia

Cover Design : **Kallur Nagesh**

Page Designed & Printed at
AAKRITHI PRINTS
Light House Hill Road
Mangaluru - 575 001
Tel.: 0824 2443002

ಪುಸ್ತಕ ದೊರೆಯುವ ಸ್ಥಳ
ಕರ್ನಾಟಕ ಅರೆಭಾಷೆ ಸಂಸ್ಕೃತಿ ಮತ್ತು ಸಾಹಿತ್ಯ ಅಕಾಡೆಮಿ
ಕಾಫಿ ಕೃಪಾ ಬಿಲ್ಡಿಂಗ್, ಮಹಾತ್ಮ ಗಾಂಧಿ ರಸ್ತೆ, ಮಡಿಕೇರಿ
ದೂರವಾಣಿ : 08272 – 223055

ಅಧ್ಯಕ್ಷರ ಮಾತ್

ಪ್ರೊ. ಕೋಡಿ ಕುಶಾಲಪ್ಪ ಗೌಡ್ರು ನಮ್ಮ ಅರೆಬಾಸೆ ಜನಸಮುದಾಯದ ಬಾರೀ ದೊಡ್ಡ ಸಂಪತ್ತ್. ಅರೆಬಾಸೆನ ಒಳ್ಳಿ ಬೆಳ್ಸುವ ವಿಷಯಲಿ ಅವರ ಕೊಡುಗೆ ಬಾರೀ ದೊಡ್ಡದ್. ಕನ್ನಡ (ಶಿಷ್ಟ)ದ ಪ್ರಾಧ್ಯಾಪಕರಾಗಿ ಸಾಹಿತ್ಯನ ಬೆಳ್ಸಿದೊವು. ಅಂದ್‌ನ ಮದ್ರಾಸ್ ವಿಶ್ವವಿದ್ಯಾನಿಲಯಲಿ ಉನ್ನತ ಸ್ಥಾನಮಾನಗಳ ಪಡ್ಕಂಡವು. ಸಾವಿರಾರ್ ಮಕ್ಕಳಿಗೆ ಭಾಷಾ ಸಾಹಿತ್ಯನ ಪಾಠ ಮಾಡಿ, ದೇಶ ವಿದೇಶಗಳ ಸುತ್ತಿ ಉಪನ್ಯಾಸ ಮಾಡ್ತಾ, ಅಧ್ಯಯನ–ಅಧ್ಯಾಪನ ಮಾಡಿ ನಮ್ಮ ಸಮುದಾಯಕ್ಕೆ ಕೀರ್ತಿ ತಂದ್‌ಕೊಟ್ಟೊವು.

ಅವರ ಸಾಧನೆನ ಕಂಡ್ ಕರ್ನಾಟಕ ಅರೆಬಾಸೆ ಸಂಸ್ಕೃತಿ ಮತ್ತೆ ಸಾಹಿತ್ಯ ಅಕಾಡೆಮಿ ಅವುಕೆ 2018ರ ಗೌರವ ಪ್ರಶಸ್ತಿ ಕೊಟ್ಟ್ ಸನ್ಮಾನಿಸಿಟು. ಅವು ಕಂಡ್‌ಹಿಡ್ದ ಅರೆಬಾಸೆ ಲಿಪಿ ಮತ್ತೆ ಸಾಹಿತ್ಯದ ಬಗ್ಗೆ ಅರೆಬಾಸೆ ಅಕಾಡೆಮಿ ಒಂದು ದಿನದ ರಾಷ್ಟ್ರ ಮಟ್ಟದ ಸಮಾವೇಶನ ಯಶಸ್ವಿಯಾಗಿ ನಡ್ಸಿಟು. ಅವು ಅರೆಬಾಸೆಗೆ ಜೋಡ್ಸಿ ಕೊಟ್ಟ ಧ್ವನಿಮಾ ಲಿಪಿನ ಪ್ರತೀ ಶಾಲೆಗಳ್ಲಿ ಕಲ್ಸುವ ಯೋಜನೆನ ಅಕಾಡೆಮಿ ಹಾಕ್ಯಂಟು. ಅದ್ಕೆ ಅಗತ್ಯ ಉಟ್ಟುಂತೇಳುವ ದೃಷ್ಟಿಲಿ ಅವ್ವೇ ಬರ್ದ 'ಅರೆಬಾಸೆ (ಗೌಡಕನ್ನಡ) ವ್ಯಾಕರಣ' ಪುಸ್ತಕನ ಅಚ್ಚ್ ಹಾಕ್ಸಿ ಪಾಠಪುಸ್ತಕದ ರೂಪಲಿ ಬಳ್ಸಿಕೆ ನಿರ್ಧಾರ ಮಾಡಿಟು. ಅಕಾಡೆಮಿ ಮೂಲಕ ವ್ಯಾಕರಣ ಪುಸ್ತಕ ಮುದ್ರಣ ಮಾಡಿಕೆ ಅವಕಾಶ ಮಾಡಿಕೊಟ್ಟ ಪ್ರೊ. ಕೋಡಿಯವುಕ್ಕೆ ನಾವು ಕೃತಜ್ಞತೆ ತಿಳ್ಸಿವೆ. ನಾವು ಈಗಾಗ್ಲೆ ಪ್ರತೀ ಹೈಸ್ಕೂಲು ಕೋಲೆಜ್‌ಲಿ ಅರೆಬಾಸೆ ಸಂಘನ ರಚನೆ ಮಾಡಿಕೆ ಶುರು ಮಾಡ್ಯೊಲೊ. ಅಲ್ಲೆಲ್ಲಾ ಈ ಪುಸ್ತಕ ಬಳಕೆ ಆಕು. ಈ ಮೂಲಕ ಅರೆಬಾಸೆನ ಉಳ್ಸಿಕೆ ಮತ್ತೆ ಬೆಳ್ಸಿಕೆ ವ್ಯಾಕರಣ ಪುಸ್ತಕ ಸಹಾಯ ಆದು. ಮಕ್ಕಳ ಮಟ್ಟಲಿ ಅರೆಬಾಸೆನ ಗಟ್ಟಿಮಾಡಿಕೆ, ಸಾಹಿತ್ಯ ರಚೆನೆ ಮಾಡೊವುಕೆ ಕೋಡಿಯವರ ಮಾಹಿತಿ ಒಂದು ಬಾಷಾಶಿಸ್ತ್‌ನ ಕಲ್ಸಿಕೊಟ್ಟದೆಂತೇಳುವ ವಿಶ್ವಾಸ ನಮ್ಮೊದ್. ಬೇರೆ ಯಾವ ಬಾಸೆಗಳಿಗೂ ಸಿಕ್ಕದ ಒಬ್ಬ ವ್ಯಾಕರಣತಜ್ಞ ಅರೆಬಾಸೆಲೇ ಇರ್ದು ನಮ್ಮೆಲ್ಲ ಪುಣ್ಯ. ಅವರ ಅಧ್ಯಯನದ ಸತ್ವಗ ಅರೆಬಾಸೆನ ಗಟ್ಟಿ ಮಾಡ್ದರ್ಲಿ ಏನೂ ಅನುಮಾನ ಇಲ್ಲೆ. ಅವರ ಸಾಧನೆಗೆ ಅಭಿನಂದನೆಗ,

ಎಲ್ಲೊವೂ ಈ ಪುಸ್ತಕದ ಪ್ರಯೋಜನ ಪಡ್ಕಣೊಕೂಂತ ಹೇಳಿವೆ.

ಇತಿ,

ಪಿ ಸಿ ಜಯರಾಮ

ಅಧ್ಯಕ್ಷರು

ಕರ್ನಾಟಕ ಅರೆಬಾಸೆ ಸಂಸ್ಕೃತಿ ಮತ್ತು ಸಾಹಿತ್ಯ ಅಕಾಡೆಮಿ

ಮುನ್ನುಡಿ

ಅರೆಬಾಸೆಲಿ ಅಡಿಗಡಿಗೆ ಕೇಳಿಬಾವ ಅಕ್ಷರ 'ಅ'ಕ್ಕೆ ಹಕ್ಕಲಿರುವ ಆದರೆ, ಅದರ್‌ಂದ ಎತ್ತರಲಿ ಉಚ್ಚಾರ ಆವ ಸ್ವರ. 'ಎ' 'ಒ'ಗಳ ಮಧ್ಯದ್ದ್. ಹಿಂದೆ ಮೊಳೆ ಜೋಡ್ಸಿ ಅಕ್ಷರ ಜೋಡಣೆ ಮಾಡುವ ಕಾಲಲಿ ಇಂಗ್ಲಿಷ್‌ನ e ಅಕ್ಷರನ ತಿರ್ಗ್‌ಸಿ ಹಾಕಿ ಸುಲಭಲಿ ಸುಧಾರ್ಸಿಕಾತಿತ್ತ್. ಆದರೆ ಕಂಪ್ಯೂಟರ್ಲಿ ಈ ಸೌಲಭ್ಯ ಇಲ್ಲೆ. ಹಾಂಗೆ ಹಿಂದೆ ನನ್ನ 'ಮಾನಸ ಮಹಾಭಾರತ'ನ ಅಚ್ಚಿ ಮಾಡ್‌ಕನ /ė/ ಚಿಹ್ನೆ ಹಾಕಿ ಸುಧಾರ್ಸಿದೆ. ಆದರೆ ಬಹು ಜನಕೆ ಅದ್ ಹಿತ ಆತ್‌ಲೆಂತ ಗೊತ್ತಾತ್. ಬೇರೆ ಬರಹಗಾರ್ರ್ ಈ ವ್ಯತ್ಯಾಸನ ಗಮನಿಸದೆ ಅದರ 'ಅ'ಂತಳೇ ತೋರ್ಸುವೆ. ಆದರೆ 'ಅ'ಕ್ಕೂ ಇದ್ಕೂ ಧ್ವನಿಮಾ ವ್ಯತ್ಯಾಸ ಉಟ್ಟು. ಉದಾ: /ಕರಿ/'call'/ಕ.·.ರಿ/ 'charcoal' ಕೊಡವ ಮಾತ್‌ಲಿ ಈ ಉಚ್ಚಾರಣೆ ನಿಯತ ಸ್ಥಾನಲಿ ಮಾತ್ರ ಬಾವ ಕಾರಣ ಅಂದರೆ ಮೂರ್ಧನ್ಯಾಕ್ಷರಗಳೆದ್‌ರ್ – ಉದಾ: ಕೇಟ್ಟೀರ್‌ಂತ ಖಾಯಂ ಬಾದರ್‌ಂದಾಗಿ ಅಲ್ಲಿ ಅದರ ಬರ್ದ್ ತೋರ್ಸುವ ಅಗತ್ಯ ಬಾದುಲೆ. ಇಲ್ಲಿ ಹಾಂಗಲ್ಲ. ಬೇರೆ ದಾರಿ ಇಲ್ಲದ ಕಾರಣ ಇದರ ಮೂರು ಚುಕ್ಕೆ .·. ಹಾಕಿ ತೋರ್ಸಿಯೊಳೆ.

ಕೊಡ್‌ಗ್ ಮತ್ತೆ ದಕ್ಷಿಣ ಕನ್ನಡ ಜಿಲ್ಲೆಗಳ ಕೆಲೊವು ತಾಲೂಕುಗಳ್ಳಿ ಹತ್ತ್ ಕುಟುಂಬ, ಹದ್ನೆಂಟ್ ಗೋತ್ರಕ್ಕೆ ಸೇರ್ದೊವುಂತೇಳ್ವ ಗೌಡ ಜನಾಂಗಕ್ಕೆ ಸೇರ್ದವರಲ್ಲಿ ಸುಮಾರ್ ಅರ್ಧಾಂಶ ಸಂಖ್ಯೆನ ಜೆನ ಕನ್ನಡದ ಒಂದು ಪ್ರಭೇದನ ತಾಯ್ನುಡಿಯಾಗಿ ಮಾತಾಡುವೆ. ಇನ್ನರ್ಧ ಸಂಖ್ಯೆನ ಜೆನ, (ಮುಖ್ಯವಾಗಿ ದ.ಕ. ಜಿಲ್ಲೆನ ಪಶ್ಚಿಮ ಭಾಗ .·. ಲಿ) ತುಳು ತಾಯ್ನುಡಿಯಾಗಿರುವ ಬೇರೆ ಜಾತಿ, ಜನಾಂಗದೊವು ಬೇಕಷ್ಟ್ ಒಳೊ. ಆದರೆ ಕನ್ನಡದ ಈ ಪ್ರಬೇಧನ ಮಾತಾಡೊವು ಈ ಗೌಡರಲ್ಲದೆ ಬೇರೆ ಯಾರೂ ಇಲ್ಲೆ.

ಈ ಜನಾಂಗದೊವು ಸುಮಾರ್ ಕ್ರಿ.ಶ. ಹದಿನೈದನೇ ಶತಮಾನಂದ ಐಗೂರು ಸೀಮೆದ ಗಟ್ಟ ಇಳ್ದ್ ಈ ಕಡೆಗೆ ವಲಸೆ ಬಂದೊವು; ಹಾಂಗೆ ಬಂದ್ ಕೆಲೊವು ಪಂಗಡಂಗ ದಕ್ಷಿಣ ಕನ್ನಡಕ್ಕೆ, ಇನ್ನ್ ಕೆಲೊವು ಪಂಗಡದೊವು ಕೊಡ್‌ಗ್‌ಗೆ ಹರ್‌ಂಡಿಕಂಡ ಹಾಂಗೆ ಹೋಗಿ ನೆಲೆಯೂರಿಕಂಡೊಂತ ಪಂಡಿತರ ಅಭಿಪ್ರಾಯ. ಇದರ ಬಲಪಡ್ಸುವ ತಾಂತ್ರಿಕ, ಚಾರಿತ್ರಿಕ, ಆಧಾರಗೇನೂ ಸಿಕ್ಕುದುಲೆ. ಕೊಡ್‌ಗ್ ರಾಜರ ಕಾಲ.·.ಲಿ ಟಿಪ್ಪೂನ ದಬ್ಬಾಳಿಕೆಂದಾಗಿ ಅಲ್ಲಿನ ಜನ ವಸತಿ ಕೆಲೊವು ಕಡೆ ನಿರ್ನಾಮವಾಗಿ ಬೇಸಾಯ ಇಲ್ಲದೆ ಭೂಮಿ ಬಂಜರ್ ಬೀಳ್‌ಕನ ಅರಸ.·.ರ್ ದಕ್ಷಿಣ ಕನ್ನಡಲಿದ್ದ ಗೌಡ ಕುಟುಂಬಗಳ ಕೊಡ್ಗಿಗೆ ಕರ್ಸಿ ಅಲ್ಲಿ ಅವರ ಸ್ಥಾಪಿಸಿದೊಂತ ಕಂಡದೆ. ಈ ಜೆನಂಗ ಬುಟ್ಟ್ ಬಂದೊಂತ ಹೇಳುವ ಅವರ ಮೂಲ ನೆಲೆಯಾದ ಐಗೂರು ಸೀಮೆಲಿ ಈ ಬಾಸೆನ ಯಾವ ಕುರುಹೂ ಸಿಕ್ಕುದುಲೆ.

ಹಾಂಗಿರ್ಕನ ಈ ಬಾಸೆ ಎಲ್ಲಿ ಉದ್ಭವ ಆತ್, ಯಾಗ ಉದ್ಭವ ಆತ್‌ಂತ ಹೇಳಿಕೆ ಆದುಲೆ.

ದ್ರಾವಿಡ ಬಾಸೆಗಳ ಕೆಲೊವು ಭಾಷಿಕ ಸಂಗತಿಗಳ ತೌಲನಿಕ ಅಧ್ಯಯನ ಮಾಡ್‌ಕನ, ಈ ಕನ್ನಡದ ಪ್ರಭೇದ ಉತ್ತರ ದ್ರಾವಿಡ ಗುಂಪುನ ಬ್ರಾಹೂಯಿ ಬಾಸೆನ ಸಮಾನಾಂತರ ಕಾಲದ (ಅಂದರೆ ಸಾಧಾರಣ ಹನ್ನೆರಡನೇ ಶತಮಾನದ) ಲಕ್ಷಣನ ತೋರ್ಸಿದೆಂತ ನನ್ನ ಮಿತ್ರ ಡಾ. ಎಸ್.ವಿ. ಷಣ್ಮುಗಂ(ಅಣ್ಣಾಮಲೈ ಯೂನಿವರ್ಸಿಟಿ) ತೋರ್ಸಿಯೊಳೊ.

ಬಾಸೆನ ಪರೀಕ್ಷಿಸಿರೆ ಶಿಷ್ಟ ಕನ್ನಡದ ಸ್ವರೂಪಕ್ಕೆ ಹೋಲಿಕೆ ಕಂಡದೆ. ಕೆಲೊವು ಪದಗ ಹಳಗನ್ನಡದ ಸ್ವರೂಪನ ತೋರ್ಸುವೆ. ಸ್ತ್ರೀಲಿಂಗಕ್ಕೂ ನಪುಂಸಕ ಲಿಂಗಕ್ಕೂ ವ್ಯತ್ಯಾಸ ಇಲ್ಲದ ರಚನೆಗ ತುಂಬ ಕಂಡವೆ. ಪೂರ್ಣ ಕ್ರಿಯಾಪದ.:.ಲಿ ಏಕವಚನ.:.ಲಿ ನಪುಂಸಕ ಲಿಂಗ ಮಾತ್ರ ಪ್ರಯೋಗ ಆದೆ. ಕ್ರಿಯಾಪದ.:.ಲಿ ವಚನ ವ್ಯತ್ಯಾಸ ಅಂದರೆ ಬಹುವಚನ ಮಾತ್ರ ಬಂದದೆ. ಲಿಂಗ ವ್ಯತ್ಯಾಸ ಇಲ್ಲೆ.

ಈ ಬಾಸೆಗೆ ಅಥವಾ ಉಪಬಾಸೆಗೆ ಹೆಸ್‌ರೇನಂತ ಕೇಳಿರೆ ಹೇಳಿಕೆ ಕಷ್ಟ ಉಟ್ಟು, ಹೋಲಿಕೆಲಿ ಕನ್ನಡದಾಂಗೆ ಕಂಡರೂ ಕನ್ನಡಂತ ಹೇಳಿರೆ ಸ.:.ರಿ ಆದುಲೆ. ಇದರ ಮಾತ್ರ ಮಾತಾಡುವ ಅಜ್ಜ, ಅಜ್ಜಿಕ.:.ಳಿಗೆ ಕನ್ನಡ ಮಾತಾಡಿಕೆ ಗೋತ್ತಾದುಲೆ. ಜಾತಿನ ಮೇಲೆ ಹೆಸರ್ ಇಸಿ (ಉದಾ: ಹವ್ಯಕ ಕನ್ನಡದಾಂಗೆ) ಗೌಡ ಕನ್ನಡಂತೇಳಿರೆ ತುಳು ಮಾತಾಡುವ ಅರ್ಧಾಂಶ ಸಂಖ್ಯೆನ ಗೌಡರ್ ಅಡ್ಡಿ ಮಾಡುವೆ. ಹೀಂಗಿರ್‌ಕನ ಯಾರೋ ಬುದ್ಧಿವಂತ.:.ರ್ ಇದರ ಅರೆಬಾಸೆಂತ ಕರಿಯಕೆ ಸುರು ಮಾಡ್ಡೊ. ಬಾಸೆನ ಅರ್ದ, ಕಾಲ್‌ಂತೆಲ್ಲ ವಿಂಗಡ್ಸುದು ತೊಪ್ಪು. ಅದೊಂದು ಹಿಂದೆನ ಸಂಸ್ಕೃತ ಬಾಸೆನ ಪಂಡಿತರ ಕುಹಕ ವೃತ್ತಿಂತ ಈ ಬಾಸೆನ ಭಕ್ತರ್ ವಾದಿಸಿರೆ, ಇದಿಕ್ಕೊಂದು ಎಕಾಡೆಮಿಂತ ಮಾಡಿ, ಇದರ ಸಂಸ್ಕೃತಿ, ಸಾಹಿತ್ಯ ಎಲ್ಲ ಉದ್ಧಾರ ಆಗ.:.ಲಿಂತ ಬೇಕಷ್ಟ್. (ಅಂದರೆ ಬೇರೆ ಬಾಸೆಗ.:.ಳಿಗೆ ಕೊಟ್ಟಸ್ಟ್) ದುಡ್ಡ್ ಕೊಟ್ಟ್, ಅರೆ ಬಾಸೆಂತ ಸರ್ಕಾರ ಶ್ರೀಮುದ್ರೆಯೊತ್ತಿದ ಮೇಲೆ ಇದರ ಭಕ್ತ.:.ರೆಲ್ಲ 'ಮೌನಂ ಪಂಡಿತ ಲಕ್ಷಣಂ'ತ 'ಪಂಡಿತ'ರಾಗೊಳೊ. ಇದರ ಅಚ್ಚಿನ ಕಾರ್ಯಕೆ ಅತಿವ ಸಾಹಸ ಪಟ್ಟ ಎಕಾಡೆಮಿನ ಸಂಚಾಲಕರ್ ಶ್ರೀ ಎ.ಕೆ. ಹಿಮಕರ ಅವರ ಅಭಿಮಾನಂದನೆನ್ನಿನೆ.

ಎಲ್ಲ ಕಾಲಕು ಒಳಿಯೊಕುಂತೇಳ್ವ, ಎಲ್ಲೊವುಕು ತಿಳಿಯೊಕುಂತೇಳ್ವ ಆಸೆಂದ ಸರಳವಾದ ಈ ಅರೆಬಾಸೆಗೆ ಒಂದು ವ್ಯಾಕರಣ ಬರ್ದ್ ನೀವ್ಗೆ ಈಗ ಒಪ್ಪುಸೊಕೂಂತ ಒಳೆ. ಇದರ ಪ್ರಕಟ ಮಾಡುವೆಂತ, ಎಕಾಡೆಮಿನ ಅಧ್ಯಕ್ಷರಾದ ಸನ್ಮಾನ್ಯ ಶ್ರೀ ಪಿ.ಸಿ. ಜಯರಾಮಣ್ಣ ಒಪ್ಪಿಕಂಡೊಳೊ. ಅವ್ರೂ ರಿಜಿಸ್ಟ್ರಾರ್ ಶ್ರೀ ಬಿ. ಚಂದ್ರಹಾಸ ರೈಗಳಿಗೂ ಮತ್ತೆ ಎಕಾಡೆಮಿನ ಸದಸ್ಯ ವೃಂದಕ್ಕು ನನ್ನ ಧನ್ಯವಾದಗ. ಈ ಉಪಬಾಸೆನ ಉದ್ಧಾರಕ್ಕೆ ಎಷ್ಟೋ ಕೆಲ್ಸಗ ಆಕೆ ಉಟ್ಟು. ಅದರೆಲ್ಲ ಹುರುಪುಲಿ ಮಾಡಿ ಮುಗ್ಸುವಾಂಗೆ ದೇವ್ರು ನೀವ್ಗೆಲ್ಲ ಶಕ್ತಿ, ಉತ್ಸಾಹನ ಕೊಡ.:.ಲಿ.

ಕೋಡಿಮನೆ, ಪೆರಾಜೆ ಗ್ರಾಮ **ಕೆ. ಕುಶಾಲಪ್ಪ ಗೌಡ**

12–2–2019

ಕೃತಜ್ಞತೆಗಳು

ಅರೆಬಾಸೆ (ಗೌಡ ಕನ್ನಡ) ವ್ಯಾಕರಣವನ್ನು ಅರೆಬಾಸೆ ಎಕಾಡೆಮಿಯ ಪ್ರಕಾಶನದ ಅಡಿಯಲ್ಲಿ ಅಚ್ಚು ಹಾಕಲು ಒಪ್ಪಿಕೊಂಡ ಎಕಾಡೆಮಿಯ ಅಧ್ಯಕ್ಷರಾದ ಸನ್ಮಾನ್ಯ ಶ್ರೀ ಪಿ.ಸಿ. ಜಯರಾಮ ಅವರಿಗೆ, ರಿಜಿಸ್ಟ್ರಾರ್ ಶ್ರೀ ಬಿ. ಚಂದ್ರಹಾಸ ರೈಗಳಿಗೂ

ಮುದ್ರಣ ಕಾರ್ಯವನ್ನು ಭರದಿಂದ ಸಿದ್ಧಗೊಳಿಸಿದ ಪ್ರಕಟಣ ಸಂಚಾಲಕರಾದ ಮಿತ್ರ ಶ್ರೀ ಎ.ಕೆ. ಹಿಮಕರ ಅವರಿಗೆ,

ಆಕೃತಿ ಪ್ರಿಂಟ್ಸ್‌ನ ಮಾಲಕರಾದ ಶ್ರೀ ಕಲ್ಲೂರು ನಾಗೇಶ ಅವರು ಕವರ್ ಡಿಸೈನ್, ಪೇಜ್ ಡಿಸೈನ್ ಮಾಡಿ ಗ್ರಂಥವನ್ನು ಸರ್ವಾಂಗ ಸುಂದರವಾಗಿ ಮುದ್ರಿಸಿಕೊಟ್ಟುದಕ್ಕೆ ಅವರಿಗೂ ಅವರ ಸಿಬ್ಬಂದಿ ವರ್ಗದವರಿಗೂ,

ಕ್ಲಪ್ತ ಸಮಯದಲ್ಲಿ ಡಿ.ಟಿ.ಪಿ.ಯನ್ನು ಮಾಡಿಕೊಟ್ಟು ಸುಳ್ಯದ ವಿನೂ ಎಂಟರ್‌ಪ್ರೈಸಸ್ ಅವರಿಗೆ,

ನನ್ನ ದೇಹಾಲಸ್ಯದಿಂದಾಗಿ ನನ್ನಿಂದ ಬರೆಯಲಾಗದೆಂದು ಇರುವಾಗ ನಾನಾ ರೀತಿಯಿಂದ ಒತ್ತಾಯದಿಂದ ಉತ್ತೇಜಿಸಿದ ಅಳಿಯ (ತಂಗಿಯ ಮಗ) ಡಾ. ಎನ್.ವಿ. ಕರುಣಾಕರನಿಗೆ,

ನನ್ನ ಪ್ರೀತಿಪೂರ್ವಕ ಕೃತಜ್ಞತೆಗಳು.

ಕೋಡಿಮನೆ, ಪೆರಾಜೆ ಗ್ರಾಮ **ಕೆ. ಕುಶಾಲಪ್ಪ ಗೌಡ**

12–2–2019

ಸಂಚಾಲಕರ ಮಾತ್

ಅರೆಬಾಸೆನ ಹಿರಿತಲೆ ಪ್ರೊ. ಕುಶಾಲಪ್ಪ ಗೌಡ

ದೊಡ್ಡ ಬಾಸೆಗ ಸಣ್ಣ ಬಾಸೆಗಳ ತಿಂದ್‌ಕಂಡ್ ಬಂದದ್ ಇದುವರೆಗೆನ ಸಂಗತಿ. ಇಂಗ್ಲಿಷ್ ಕನ್ನಡನ, ಕನ್ನಡ ಅರೆಬಾಸೆನ ಹಿಡ್ದ್ ತಿಂಬ ಪ್ರಯತ್ನ ನಡ್ಯೆತಾನೇ ಉಟ್ಟು. ಇಂತ ಸ್ಥಿತಿಲಿ, ಸುಮಾರು 50 ವರ್ಸದಸ್ಟ್ ಹಿಂದೆನೇ ಪ್ರೊ. ಕೋಡಿ ಕುಶಾಲಪ್ಪ ಗೌಡ್ರು ಅರೆಬಾಸೆನ ಏಳಿಗೆಗೆ ಕೈ ಹಾಕಿದೊವು. ಆಗಳೇ ಅವರ ದೂರದೃಷ್ಟಿ ಹಾಂಗಿತ್ತ್.

ಅವು ಇಂಗ್ಲಿಷ್‌ಲಿ ಬರ್ದ ಗೌಡಕನ್ನಡ ವ್ಯಾಕರಣ ಪುಸ್ತಕನ (1970) ಸುಮಾರ್ 20 ವರ್ಸಗಳಷ್ಟ್ ಹಿಂದೆ ನಂಗೆ ಕೊಟ್ಟಿದ್ದೊ. ಅವು ಅರೆಬಾಸೆಗೆ ಜೋಡ್ಸಿದ್ದ ಧ್ವನಿಮಾ ಲಿಪಿನ ಊರ್ಜಿತಕ್ಕೆ ತರುವ ಉದ್ದೇಶಲಿ ಆ ಕಾಲಕ್ಕೆ ಬಾರೀ ಚಟಕ್ಕ್ ಬಿದ್ದ್ ಅರೆಬಾಸೆಲಿ ಪದ್ಯ ಬರೀತಿದ್ದ ಕುಡಕಲ್ಲ್ ಯಶವಂತನ ಕೋಡಿಯವರಲ್ಲಿಗೆ ಕಳ್ಸಿದ್ದೆ. ಇದರ ಫಲ ಆಗಿ 2007ರ್ಲಿ 'ಜೇನೆರಿ' ಪುಸ್ತಕ ಬಂಟಮಲೆ ಪ್ರಕಾಶನಲಿ ಅಚ್ಚಾತ್. ಕೋಡಿಯವರ ಲಿಪಿ ಬಳ್ಸಿ ಅರೆಬಾಸೆಲಿ ಬರ್ದ ಸುರೂನ ಪುಸ್ತಕ ಅದ್.

ಪ್ರೊ. ಕುಶಾಲಪ್ಪ ಗೌಡ್ರು ಅರೆಬಾಸೆ (ಗೌಡಕನ್ನಡ)ಗೆ ಕೊಟ್ಟ ಮಹತ್ವನ ಆ ಬಾಸೆನ ಮನೆಮಾತಾಗಿ ಮಾತಾಡೊವು ಒಸಿ ಕೈಂಪೆ ಇರುವ ರೀತಿಲಿ ತಕಂಬ ಅಗತ್ಯ ಉಟ್ಟು. ವ್ಯಾಕರಣಂತೇಳುದು ಬಾಸೆಗೊಂದು ಸೊಯೆ ನರ ಇದ್ದಾಂಗೆ. ವ್ಯಾಕರಣ ಇಲ್ಲದ ರೀತಿಲಿ ಯಾವ ಬಾಸೆನೊಳೂ ಮಾತಾಡಿಕಾದುಲೆ. ಅರೆಬಾಸೆಗೊಂದು 'ಶಾಸ್ತ್ರೀಯ' ಚೌಕಟ್ಟ್ ಬೇಕೂಂತ ಗ್ರಹಿಸಿದೊವು ಪ್ರೊ. ಗೌಡ್ರು.

ಇಂತಹ ಹಿನ್ನೆಲೆಲಿ ನಮ್ಮ ಪಿ.ಸಿ. ಜಯರಾಮನವರ ಅಧ್ಯಕ್ಷತೆಲಿ ರಚನೆಯಾದ ಈಗನ ಅಕಾಡೆಮಿನ ಆಡಳಿತ ತಂಡ ಕೋಡಿಯವರ ಸಮಗ್ರ ಸಾಹಿತ್ಯ, ಅವರ ಅಧ್ಯಯನ, ಸಂಶೋಧನೆಗಳ ಬಗ್ಗೆ ದೂರ ದೂರಂದ ತಜ್ಞರ, ವಿದ್ವಾಂಸರ ಕರ್ಸಿ ಸುಳ್ಯಲಿ (2018) ಒಂದು ದಿನದ ವಿಚಾರ ಸಂಕಿರಣ ನಡ್ಸುದು ಸಾಧ್ಯ ಆತ್, ಮತ್ತೆ ಅರೆಬಾಸೆ ಲಿಪಿ ಕಲಿಕೆ ಕಾರ್ಯಾಗಾರಕ್ಕೆ ಚಾಲನೆ ಕೊಟ್ಟುಟು. ತಡವಾಗಿ ಆದ್ರೂ 2018ರ ಅರೆಬಾಸೆ ಅಕಾಡೆಮಿನ ಗೌರವ ಪ್ರಶಸ್ತಿ ಕೊಟ್ಟ್ ಅರೆಬಾಸೆನ ಋಣ ಸಂದಾಯ ಮಾಡ್ವ ಪ್ರಯತ್ನ ಮಾಡಿಟು. ಅಕಾಡೆಮಿ ಕೋಡಿಯವುಕ್ಕೆ ಏನ್ ಮಾಡಿಟೊ. ಅದ್ರ ಮನ್ಸ್ ಇಸಿ ಮಾಡಿಟು.

'ಅರೆಬಾಸೆ (ಗೌಡ ಕನ್ನಡ) ವ್ಯಾಕರಣ' ಒಂದು ಸಾಧಾರಣ ಪುಸ್ತಕ ಅಲ್ಲ. ಡಾ।

ಕೋಡಿಯವರ ಜೀವಮಾನ ಶ್ರಮದ ಒಂದು ದೊಡ್ಡ ಭಾಗ ಅದರೊಟ್ಟಿಗೆ ಉಟ್ಟು. ಸುಮಾರು 1970ರ ದಶಕಲಿ ಅಣ್ಣಾಮಲೆಂದ ಸುರುಮಾಡ್ದ ಕೆಲ್ಸ ಈಗ 2019ರ ಅವರ ಇಳಿಪ್ರಾಯಲಿ ಸುಳ್ಯದವರೆಗೆ ಸಾಗಿಬಂದ ದಾರಿನ ಬೊಚ್ಚೆಲ್ ಉಟ್ಟು. ಅದ್ ಅರೆಬಾಸೆಗಾಗಿ, ಅರೆಬಾಸೆನ ಜನಗಳಿಗಾಗಿ ಅದ್ಕಾಗಿ ನಾ ಅವರ ಅರೆಬಾಸೆನ 'ಹಿರಿತಲೆ'ಂತ ಕರ್ಯಕೆ ಇಷ್ಟಪಟ್ನೆ.

ಒಂದು ನಿರ್ದಿಷ್ಟ ಭೂ ಪ್ರದೇಶದ ನಿರ್ದಿಷ್ಟ ಜನ ಸಮುದಾಯ ಅದರ್ನೇ ಮನೆಮಾತಾಗಿ ಇಸಿಕಂಡ್ ಬಂದ ಕಾರಣ, ಆ ಬಾಸೆನೊಟ್ಟಿಗೆ ಒಂದು ಸಂಸ್ಕೃತಿನೂ ಬೆಳ್ದ್ ಬಂದುಟು. ಅದೇ ಜನ ಸಮುದಾಯದೊವು ತುಳು ಪ್ರದೇಶಲಿ ಬೊದ್ಕುವ ಅನಿವಾರ್ಯತೆ ಬಂದಾಕನ ಬಾಸೆನ ಬುಟ್ಟರೂ, ಅರೆಬಾಸೆ ಸಂಸ್ಕೃತಿನ ಬುಟ್ಟತ್ಲೆ. ಹಾಂಗಾಗಿ ತುಳುವ ಸಂಸ್ಕೃತಿಗೆ ಒಗ್ಗಿಕಾತ್ಲೆ, ಇಂತಹ ಒಂದು ಸಾಂಸ್ಕೃತಿಕ ಹಿನ್ನೆಲೆಲಿ ಕೋಡಿಯವು ಅದರ 'ಗೌಡಕನ್ನಡ'ಂತೇಳಿಯೇ ಪ್ರತಿಪಾದನೆ ಮಾಡ್ತಾ ಬಂದೊಳೊ. ಅವು ಮಾತ್ರ ಅಲ್ಲ ಅವರ ಗುರುಸ್ಥಾನಲಿದ್ದ ಪ್ರೊ. ಮರಿಯಪ್ಪ ಬಟ್ರೂ ಹಾಂಗೆನೇ ಕರ್ದೊಳೊ. ಆದರೆ, ಆ ಬಾಸೆಗೆ ರಾಜಾಶ್ರಯ ಸಿಕ್ಕಿತ್, ಅಕಾಡೆಮಿ ಆಕನ ಅದರ 'ಅರೆಬಾಸೆಂತ' ಕರ್ದೊ. ಕೋಡಿಯವುಕ್ಕೆ ಇದ್ ಸಮಾಧಾನ ತಾತ್ಲೆಂತೇಳ್ದಕ್ಕೆ ಅವು ಗೌಡಕನ್ನಡಂತೇಳ್ದರ ಚೌಕದೊಳಗೆ ಇಸ್ಕೊಳೊ.

ಇಂದ್ 'ಅರೆಬಾಸೆ ವ್ಯಾಕರಣ'ಂತೇಳುವ ಪುಸ್ತಕ ಅವುಕ್ಕೆ ಬರ್ಯಕೆ ಸಾಧ್ಯ ಆವುಟುಂತೇಳ್ದರ ಬಾಸೆನ ಪ್ರೀತಿಸುವ ಎಲ್ಲಾ ಜಾತಿ ಜನಾಂಗದವು ಮತ್ತೆ ಅವರ ಮನೆಮಾತಾಗಿ ಇಸಿಕಂಡ್ ಕಾಪಾಡ್ತಾ ಬಂದ ಜನ ಸಮುದಾಯ ಕುಶಿಪಡೊಕಾದ ಸಂಗತಿ. ಅದ್ ಇಂದ್ ಆವುಟು. ಆಗದೇ ಹೋಗಿದ್ರೆ ಬಹುಷ ಮುಂದೆನೂ ಆವ ಸಾಧ್ಯತೆ ಇಲ್ಲೆ. ಯಾಕೆಂತೇಳಿರೆ ನಮ್ಮ ಮಕ್ಕ ಡಾಕ್ಟ್ರ-ಇಂಜಿನಿಯರ್ ಆಕೆ ಒದ್ದಾಟ, ಗುದ್ದಾಟ ನಡ್ದದೆ ಹೊರತು ಒಬ್ಬ ಭಾಷಾವಿಜ್ಞಾನಿ ಆಕೊಂತ ಕನ್ಸ್ ಕಾಣ್ತಾನೂ ಇಲ್ಲೆಂತೇಳ್ದರ ಒಪ್ಪಿಕಣಕು. ಸಾರಾಂಶಲಿ ಹೇಳ್ದಾದರೆ ಅರೆಬಾಸೆಲಿ ವ್ಯಾಕರಣ ಪಾಂಡಿತ್ಯ ಮತ್ತು ಭಾಷಾ ವಿಜ್ಞಾನನ ಮುಂದೆ ಬೆಳ್ಸುವ ಜನರ ತಯಾರ್ ಮಾಡೊಕೊ ಆಗ ಮಾತ್ರ ಬಾಸೆ ಬೆಳ್ದದೆ. ಅಭಿವೃದ್ಧಿ ಆದೆ. ಕೋಡಿಯವು ಗಟ್ಟಿನ ಒಂದು ತಳಕಟ್ಟ್ ಹಾಕಿ ಕೊಟ್ಟೊಳೊ. ಅದೇ ಈ ಪುಸ್ತಕ.

ಈ ಪುಸ್ತಕನ ಅವರ ಅನಾರೋಗ್ಯದ ನೊಡುಲಿನೂ ತುಂಬಾ ಉತ್ಸಾಹಲಿ ಬರ್ದದರ ನಾ ಕಂಡೊಳೆ. ಈ ಬಾಸೆನ ಮಾತಾಡುವವನಾಗಿ ನಾ ಅಭಿನಂದನೆ ಹೇಳಿನೆ. ಇದೊಂದು ಸಾರ್ವಕಾಲಿಕ ಸಾಧನೆಂತೇಳುದು ನನ್ನ ಭಾವನೆ.

ಸುಳ್ಯ
2-3-2019

ಎ. ಕೆ. ಹಿಮಕರ
ಸಂಚಾಲಕರು, ಪುಸ್ತಕ ಪ್ರಕಟಣಾ ಸಮಿತಿ

ಪರಿವಿಡಿ

ಅನುಬಂಧ

ಪ್ರಸ್ತಾವನೆ : ಭಾಷೆ – ಮಾನವ ಸಂಪತ್ತು

ಈ ಬಾಸೆಂತೇಳ್ದು ಇರದಿದ್ದರೆ ಪ್ರಪಂಚ ಎಲ್ಲ ಕತ್ತಲೆಲಿ ಕëಂತಿ ಹೋಗಿರ್ದುಂತ ಸಂಸ್ಕೃತದ ದಂಡಿಯಾಚಾರ್ಯ ಹೇಳಿಟು ಗಡ. ಈ ಬಾಸೆನ ಮೊಂಯಿಸಂಗೆ ದೇವ್ರು ಸಿದ್ಧವಸ್ತುವಾಗಿ ಕೊಟ್ಟದ್ದೇನಲ್ಲ. ಇದರ ಅವನೇ ಅವನ ಅಗತ್ಯಕ್ಕನುಸರ್ಸಿ ಮಾಡಿಕëಂಡëದ್. ಆದಿ ಕಾಲಂದಳೇ ಮಾನವ ಎಡೆಬುಡದೆ ಸಾಧನೆ ಮಾಡಿ ಇದರ ಉಂಟುಮಾಡ್ತ್. ಒಂದೊಂದು ಗುಂಪುಗೆ ಸೇರ್ದ ಆದಿಮಾನವëರ್ ಅಲ್ಲಲ್ಲಿ ಮಾಡ್ದ ಸಾಧನೆಂದಾಗಿ ಇಂದ್ ಒಂದೊಂದು ಗುಂಪಿಗೂ ಅವರ್ದೇ ಆದ ಬಾಸೆಗ ಒಳೊ. ಒಂದು ಗುಂಪುನೊವ್ರು ಮಾತ್ರ ಈ ಕಾರ್ಯಕೆ ಇಳ್ದ್, ಬಾಸೆನ ಕಂಡ್‌ಹಿಡ್ದದಾಗಿದ್ದರೆ ಎಲ್ಲ ಜೆನಗಳಿಗೂ ಇಂದ್ ಒಂದೇ ಬಾಸೆ ಇರಕಯ್ತ್. ಇಂದ್ ನಮ್ಮೊಲ್ಲಿ ಬಳಕೆಲಿರುವ ಎಷ್ಟೋ ಯಂತ್ರಸಾಮಾಗ್ರಿಗಳ ನೋಡಿ. ರೈಲ್, ಬಸ್ಸು, ವಿಮಾನ ಮುಂತಾಗಿ ಮುಂತಾಗಿ ಎಷ್ಟೆಷ್ಟೋ ಸಾಧನೆಗ ಒಳೊ. ಆ ಒಂದೊಂದನ್ನೂ ಯಾರೋ ಒಬ್ಬ ಬುದ್ಧಿವಂತ ಮಾನವ ಎಲ್ಲಿಯೋ ತನ್ನ ಬುದ್ಧಿನ ಉಪಯೋಗ್ಸಿ ಕಂಡ್‌ಹಿಡ್ತ್. ಅಂತದರ ಅಗತ್ಯ ಬೇರೆವ್ಕೂ ಉಟ್ಟೊಂತಾದ ಬೇರೆ ಕಡೆನ ಬೇರೆ ಜೆನಂಗಳೂ ಅದರ ಅನುಕರಣೆ ಮಾಡಿ, ಅದರ ಉತ್ಪತ್ತಿ ಮಾಡಿ ತಾವೂ ಉಪಯೋಗ್ಸಿಕಂಡೊ. ಈ ವಸ್ತುಗಳ ಎಲ್ಲಿ ಮೂಲವಾಗಿ ಕಂಡಹಿಡ್ದೊನೋ ಅಲ್ಲಿಗೆ ಮಾತ್ರ ಅದ್ ಸೀಮಿತವಾಗಿ ಒಳ್ತ್‌ಲೆ. ಉದಾ: ಟೆಲಿಫೋನ್‌ನ ಸುರುಗೆ ಗ್ರಾಹಾಂ ಬೆಲ್ ಕಂಡ್ ಹಿಡ್ತ್. ಈಗ ಇದರ ಉಪಯೋಗ ಜಗತ್ತ್‌ನ ಎಲ್ಲ ಕಡೆಲಿನೂ ಉಟ್ಟು. ಇಂದ್ ಅವುಗಳ ಬೇರೆ ಬೇರೆ ಜನಾಂಗಗ ತಮ್ಮ ತಮ್ಮಲ್ಲೇ ಉತ್ಪತ್ತಿ ಮಾಡಿಕಂಡ್ ಉಪಯೋಗ್ಸಿಕëಂಡ್ ಒಳೊ. ಪ್ರಪಂಚëಲಿ ಸಾರ್ವತ್ರಿಕ ಬಳಕೆ, ಅದರ ಮೂಲ ಎಲ್ಲೇ ಇದ್ದರೂ ಎಲ್ಲ ಕಡೆಲೂ ಆದೆ. ಹಾಂಗೆ ಯಾದೋ ಬಾಸೆನ, ಯಾದೋ ಒಂದು ಜನಾಂಗ ಮಾತ್ರ ಸಿದ್ಧಪಡಿಸಿ, ಬೇರೆವು ಆ ತೊಂದರೆ ತಕಣದಿದ್ದಿದ್ದರೆ ಇಂದ್ ಪ್ರಪಂಚëಲಿ ಒಂದೇ ಬಾಸೆ ಇದ್ದ್ ಅದ್ ಬೇರೆಲ್ಲ ಕಡೆಲೂ ಪ್ರಚಾರëಲಿ ಇರಕಾಯ್ತ್. ಹಾಂಗಿದ್ದಿದ್ದರೆ ಲಾಯ್ಕಿದ್ದಿರ್ದು! ಇಂದ್‌ನ ಭಾಷಾಸಮಸ್ಯೆಗ ಇರಿಕಿತ್ತ್‌ಲೆ. ಈಗ ಒಂದು ಪ್ರದೇಶಂದ ಬೇರೆ ಪ್ರದೇಶಕ್ಕೆ ಹೋಕುಂತಾದರೆ ಅವಂಗೆ ಆ ಹೊಸ ಪ್ರದೇಶದವರ ಬಾಸೆ ಗೊತ್ತಿಲ್ಲದೆ ಕಷ್ಟಪಡಕಾದೆ. ಅಲ್ಲಿನವರ ಬಾಸೆ ಅವಂಗೆ ಗೊತ್ತ್‌ಲೆಂತಾದರೆ ಅವಂಗೆ ಕುಡಿಯಕೆ ನೀರ್ ಕೂಡಾ ಸಿಕ್ಕಿಕಿಲ್ಲೆ. ಅಂದರೆ ಬೇರೆ ಬೇರೆ ಪ್ರದೇಶಲಿದ್ದ ಬೇರೆ ಬೇರೆ ಜೆನಗಳ ಗುಂಪುಗ ಕೂಡ ಅವವು ಅವ್ಕೆ ಬೇಕಾದ ಬಾಸೆನ ತಯಾರ್ ಮಾಡಿಕೆ ಸತತ ಶ್ರಮಪಟ್ಟ್, ಸಿದ್ಧಿ ಪಡ್ದರ್‌ಂದಳೇ ಇಂದ್ ಪ್ರಪಂಚದ ತುಂಬ ಎಷ್ಟೋ ಬಾಸೆಗ ತುಂಬ್ಯೊಳೊ. ಅವರವರ ಜನಾಂಗಕ್ಕೆ ಅವವು ಬೊಳ್ಪು ಪಡ್ಕಂಡೊಳೊ.

ಇಂಗ್ಲೇಂಡ್‌ನಂವ ಒಂದು ಬಾಸೆನ ಮಾತಾಡ್ದೆ. ಫ್ರಾನ್ಸ್‌ನಂವ ಅವಂಗೆ ಗೊತ್ತಿಲ್ಲದ

ಇನ್ನೊಂದು ಮಾತಾಡ್ದೆ. ಜರ್ಮನಿಯಂವ ಬೇರೊಂದು, ರಷ್ಯಾದಂವ ಇನ್ನೊಂದು – ಹೀಂಗೆ ಯೂರೋಪ್ ಖಂಡನ ಬುಟ್ಟ್ ಏಸಿಯಾ, ಅಮೇರಿಕಾ, ಆಫ್ರಿಕಾಂತ ಇನ್ನಿರುವ ಭೂಖಂಡಗಳ ತಕಂಡರೆ ಅಲ್ಲೆಲ್ಲ ಎಷ್ಟೆಷ್ಟೋ ಬಾಸೆಗ ಒಳೋಂತ ಕಂಡದೆ. ದೂರದ ವಿಷಯನ ದೂರಲೆ ಇಸಿ. ಹಕ್ಕಲೆನ ವಿಷಯಕ್ಕೆ ಬಾವೊನೊ. ಭರತಖಂಡಲಿ ಭೌಗೋಳಿಕ ಮೇರೆಗಳ ಮೀರಿ, ಪ್ರಾಚೀನ ಕಾಲಟಲಿ ಸಂಸ್ಕೃತ, ಪ್ರಾಕೃತ, ಪಾಳಿ, ಅಪಬ್ರಂಶಂತೇಳುವ ಬಾಸೆಗ ಸಾಹಿತ್ಯದ ಅಧಿಪತ್ಯನ ಸ್ಥಾಪಿಸಿಕಟಂಡ್ ಮೆರಿಯತಿದ್ದೊ. ಅಂದರೆ ಇವೆಲ್ಲ ಪಂಡಿತರ ಬಾಸೆಗ ಆಗಿದ್ದೊ. ಈ ದಬ್ಬಾಳಿಕೆನ ಸಹಿಸಿಕಟಂಡ್, ಬೇರೆ ಬಾಸೆಗಟಳೂ ಬಳಕೆಲಿದ್ದೊ. ಬೇರೆ ಬೇರೆ ಕುಟುಂಬಕ್ಕೆ, ಜಾತಿಗೆ ಸೇರಿರೂ, ಒಂದೇ ಪ್ರದೇಶಟಲಿ ಬೇರೆ ಬೇರೆ ಜೆನಂಗ ಸಹಜೀವನ ಮಾಡುವಲೇ ಹಾಂಗೇ ಈ ಬಾಸೆಗಟಳೂ. ಸಂಸ್ಕೃತಾದಿ ಬಾಸೆಗಳ ಇಂಡೋ–ಆರ್ಯನ್ ಕುಟುಂಬಂತ ಕರ್ದವೆ, ತಮಿಳ್, ಕನ್ನಡ, ತೆಲುಗು, ಮಲೆಯಾಳಂ ಇತ್ಯಾದಿ ಬಾಸೆಗಳ ದ್ರಾವಿಡ ಬಾಸೆಗಂತ ಕರ್ದವೆ. ಬಾಸೆಗ ಸುರುಗೆ ಒಂದೇ ಗುಂಪಾಗಿದ್ದಟದ್. ಕಾಲಾನುಕ್ರಮಟಲಿ ಬೇರೆ ಬೇರಾಗಿ ಹೋದವೆ. ಮೊಂಯಿಸರ ಬೊಡ್ಕ್‌ಲಿ ಒಂದು ಕುಟುಂಬಟಲಿ, ಅಣ್ಣ ತಮ್ಮಂದಟರ್ ಇದ್ದರೆ ಕೆಲಟವು ಸಮಿಯಟಲಿ ಅವು ಬೇರೆ ಬೇರೆ ಆಗಿಹೋವಾಂಗೆ, ಈ ಬಾಸೆಗಳೂ ಬೇರೆ ಬೇರಾಗಿ ಅಸ್ತಿತ್ವ ಪಡ್ಕಂಡವೆ. ಮೂಲ ಕುಟುಂಬಂದ ಬೇರಾಗಿ ಹೋಕನ ಅಣ್ಣ ತಮ್ಮಂದಟರ್ ಕುಟುಂಬಕೆ ಸೇರ್ದ ಮಡಿಕೆ ಕುಡಿಕೆಗಳ ಪಾಲ್ ತಕಂಡ್ ಹೋವಾಂಗೆ. ಈ ಬಾಸೆಗಳ್ಲಿಯೂ, ಮೂಲಬಾಸೆಗೆ ಸೇರ್ದ ಕೆಲವು ಪದಗ (ಶಬ್ದಂಗ) ಒಳ್ದ್ ಬಂದೊದ್ ಕಂಡ್ ಬಾದೂ ಉಟ್ಟು. ಒಂದು ಭೌಗೋಳಿಕ ಪ್ರದೇಶಟಲಿ ಎರ್ಡ್ ಮೂರು ಸ್ವತಂತ್ರ ಬಾಸೆಗ ತಮ್ಮ ಆದಿಪತ್ಯ ಸ್ಥಾಪನೆ ಮಾಡ್ದೊ ಕಂಡ್ ಬಂದದೆ. ಅಧಿಕ ಸಂಖ್ಯೆನ ಜೆನಂಗ ಮಾತಾಡುವ ಬಾಸಗಳ ಲೆಕ್ಕಟಲಿ ಭಾಷಾವಾರು ಪ್ರಾಂತ್ಯಗಳ ನಮ್ಮದೇಸಟಲಿ ರಚನೆ ಮಾಡ್ದೊ. ಉದಾಹರಣೆಗೆ ಕರ್ನಾಟಕನ ತಕಮೊನೊ. ಕನ್ನಡ ಸೀಮೆನೊಳಗೆ, ಸ್ವತಂತ್ರ ಬಾಸೆ ತುಳು ಉಟ್ಟು. ಗುಡ್ಡಗಾಡ್ ಪ್ರದೇಶವಾದ ಕೊಡ್‌ಗ್‌ಲಿ ಕೊಡವ ಮಾತ್ ಉಟ್ಟು. ಬೇಸಾಯ ಮಾಡುವ ಮೊಣ್ಣ್‌ನ ಮಕ್ಕ ಗೌಡಟರ್ ಕನ್ನಡದ ಒಂದು ಉಪಭಾಷೆ (dialect)ನ ಅರೆಬಾಸೆಂತ ಮಾತಾಡುವೆ. ಇದ್ ಕನ್ನಡಂದ ಹಲೊವು ರೀತಿಲಿ ಭಿನ್ನವಾಗುಟ್ಟು. ಇದರ ಮಾತಾಡೊವು ಕೊಡ್‌ಗ್‌ನ ಕೆಲೊವು ತಾಲೂಕುಗಳ್ಳಿ, ದಕ್ಷಿಣ ಕನ್ನಡದ ಕೆಲೊವು ತಾಲೂಕುಗಳ್ಳಿ ನೆಲ್ಸಿಯೊಳೊ. ನಗರ ಪ್ರದೇಶಟಲಿ. ಕರಾವಳಿಲಿ ಇಂಡೋ ಆರ್ಯನ್ ಗುಂಪಿಗೆ ಸೇರ್ದ ಕೊಂಕ್‌ಣಿ ಉಟ್ಟು.

ಇನ್ನ್ ತಮಿಳ್ ನಾಡ್‌ಗೆ ಹೋದರೆ ತಮಿಳ್ ಮಾತ್ರ ಅಲ್ಲದೆ ನೀಲಗಿರಿ ಪ್ರದೇಶಟಲಿ ಬಡಗ, ತೊದಾ, ಕೋತಾ, ಕಾಟ್ಟುನಾಯ್ಕನ್, ಕಸಬ, ಪಣಿಯ ಮುಂತಾದ ಬಾಸೆಗಳ್ನೂ ಕಾಣಟಕ್, ಉತ್ತರ ಭಾರತಟಲಿ ಹಿಂದಿ, ಪಂಜಾಬಿ, ರಾಜಸ್ಥಾನೀ, ಗುಜರಾತಿ, ಮರಾಠಿ, ಅಸ್ಸಾಮಿ, ಬಂಗಾಳಿ, ಉರ್ದು, ಕುರುಖ್, ಮಾಲ್ತೊ, ಬ್ರಾಹುಯಿ, ಬಾಸೆಗ ಹರ್‌ಂಡಿಕಂಡಾಂಗಿರ್ದು ಕಂಡದೆ. ಒಂದ್ ಮಾತ್‌ನ ತಾಯ್ನುಡಿಯಾಗಿ ಯಾರ್

ಮಾತಾಡ್‌ದೆನೊ ಅಂವ ಏನ್ ಸುರುಗೆ ಆ ಬಾಸೆನ ವ್ಯಾಕರಣ ಕಱಲ್ತ್ ಮತ್ತೆ ಮಾತಾಡಿಕೆ ಆ ಬಾಸೆನ ಕಱಲಿದು ಅಲ್ಲ. ಸಣ್ಣಿತಿರ್ಕನ ತನ್ನ ಅಯ್ಯೆ ಅಪ್ಪಂದ ಮತ್ತೆ ಒಡನಾಡಿಗಳ್‌ಂದ, ತಾನ್ ಅವರ ಮಾತ್‌ನ ಅಡಿಗಡಿಗೆ ಅನುಕರಣೆ ಮಾಡ್‌ತ್ತಾ ನಿರಂತರ ಪ್ರಯತ್ನಂದ ಕಱಲ್ತದೆ. ಹಾಂಗಿರ್ಕನ ಒಂದು ಬಾಸೆಗೆ ವ್ಯಾಕರಣ ಬರಿವ ಅಗತ್ಯ ಏನುಟ್ಟುಂತ ಒಂದು ಪ್ರಶ್ನೆ ಎದ್ದದೆ. ಒಬ್ಬ ಪ್ರಬುದ್ಧ ವ್ಯಕ್ತಿ ಒಂದು ಬಾಸೆನ ಸಲೀಸಾಗಿ ಮಾತಾಡ್ದೆಂತ ಆದರೂ "ಆ ಬಾಸೆನ ತಾಂತ್ರಿಕತೆ ಹೇಂಗುಟ್ಟು? ಹೇಳ್‌ಂತ" ಅವನ ಕೇಳಿರೆ ಅವಂಗೆ ಅದರ ಹೇಳಿಕೆ ಆದುಲೆ. ಹೇಂಗೆ ಒಂದು ಯಂತ್ರ ಕೆಟ್ಟ್ ಹೋದರೆ, ಅದರ mechanism ಲ್ಲಿ ಎಲ್ಲಿ ತೊಪ್ಪಿಟ್ಟುಂತ ಗೊತ್ತು ಮಾಡೋಕರೆ ಅದರ ತಾಂತ್ರಿಕ ಸ್ವರೂಪನ ಒಬ್ಬ ತಿಳ್ದಿರೊಕಾದ್ ಅಗತ್ಯ ಆದೆ. ಅದೇ ತರ ಬಾಸೆಲೂ. ಬಾಸೆನ ತಾಂತ್ರಿಕತೆ ಹೇಂಗುಟ್ಟುಂತ ಅಧ್ಯಯನ ಮಾಡುದೇ ವ್ಯಾಕರಣ. ಯಂತ್ರಗ ಕೆಟ್ಟ್ ಹೋದರೆ Mechanic ಅದರ ಪರೀಕ್ಷಿಸಿ, ರಿಪೇರಿ ಮಾಡಿಕೊಟ್ಟದೆ. ಒಂದು ಬಾಸೆಲಿ ತೊಪ್ಪು ತಡೆಗ ಕಂಡ್ ಬಂದರೆ ಆ ಬಾಸೆನ ಪಂಡಿತ ಅದರ ನಿವಾರಣೆ ಮಾಡ್ದೆ. ದೊಡ್ಡ ದೊಡ್ಡ ಕವಿಗ ಕೆಲೊವು ಜೆನ ಇಂಥ ವ್ಯಾಕರಣನ ಹಾಂಗೂ ಪಂಡಿತರ ಹಾಸ್ಯ ಮಾಡುವೆ, ಅವರ ದ್ವೇಷಿಸುವೆ ಕೂಡ. ಕಾರಣ, ಇಂಥ ಕವಿಗ ಮಾಡುವ ಅಪಪ್ರಯೋಗಗಳ ಇವು ಟೀಕೆ ಮಾಡುವೆ. ಒಂದು ಬಾಸೆಗೆ ದೀರ್ಘ ಚರಿತ್ರೆ ಇದ್ದರೆ ಅದರ್‌ಲ್ಲಿ ಕಾಲಾನುಸಾರ ಕೆಲೊವು ಬದಲಾವಣೆಗ ಆದವೆ. ಹಾಂಗಾದ ಕಾರಣಂದಳೇ ಇಂದ್ ನಮ್ಮ ಕನ್ನಡ ನುಡಿಲಿ ಹಳಗನ್ನಡ, ನೊಡುಗನ್ನಡ, ಹೊಸಗನ್ನಡಂತ ಇರುವ ಚಾರಿತ್ರಿಕ ಪ್ರಭೇದಗ ಕಂಡ್ ಬಂದವೆ. ಒಂದೇ ಬಾಸೆ ಆಗಿದ್ದರೂ ಎಲ್ಲೊವೂ ಒಂದೆ ತರ ಮಾತಾಟವೆಂತ ಹೇಳಿಕೆ ಆದುಲೆ. ಬೇರೆ ಬೇರೆ ಕಡೆ ನೆಲ್ಸಿದ ಒಂದೊಂದು ಗುಂಪುನ ಜೆನಂಗ ಒಂದೊಂದು ತರ ಮಾತಾಡುವೆ. ಒಂದೇ ಮಾತಾದರೂ ಇಂಥ ಒಂದು ಪಂಗಡದ ಮಾತ್ ಇನ್ನೊಂದು ಪಂಗಡದೊವ್ಕೆ ಅರ್ಥ ಆಕೆ ಕಷ್ಟ ಆದು ಉಟ್ಟು. ಉದಾ: ಉತ್ತರದ ಬೆಳ್ಗಾಂಲಿ ಮಾತಾಡುವ ಕನ್ನಡ, ಮಂಗ್ಳೂರೊವ್ಕೆ ಮಾತಾಡಿಕೆ ಕಷ್ಟ ಆದು. ಕನ್ನಡಱಲಿ ಈ ತರದ ಪ್ರಾದೇಶಿಕ ಪ್ರಭೇದಗ ಒಂದು ಸಾವಿರ ವರ್ಷದ ಹಿಂದೆಂದಳೂ ಎಷ್ಟೋ ಇದ್ದೊ. ಅದರ ವಿಚಾರ್‌ಸಿಕೆ ಹೊರ್ಟರೆ ಸಾವಿರ ತಲೆ ಇರುವ ವಾಸುಕಿಗೂ (ಆದಿಶೇಷಂಗೂ) ತಲೆಬೇನೆ ಬಾದುಂತ 'ಕವಿರಾಜ ಮಾರ್ಗ'ಂತೇಳುವ ಗ್ರಂಥಲಿ ಹೇಳಿಟು. ಆ ಕಾಲಲಿಯೂ ಕೆಲೊವು ಪಟ್ಟಣಗಳ ಮಧ್ಯೆ ಇರುವ ಪ್ರದೇಶ 'ತಿರುಳ್ಗನ್ನಡ' ಪ್ರದೇಶವಾಗಿತ್‌ಂತ ಆ ಪುಸ್ತಕಂದ ನಾವ್ಗೆ ತಿಳ್ದದೆ. ಆಗನ ಕಾಲಱಲಿ ಕರ್ಣಾಟಕದ ಉತ್ತರ ಭಾಗ ಭಾರಿ ಚಟುವಟಿಕೆಂದ ಕೂಡಿತ್. ದೊಡ್ಡ ದೊಡ್ಡ ರಾಜವಂಶಗಳ ಕೇಂದ್ರ ಆ ಕಡೆಗಿತ್. ರಾಜಾಶ್ರಯದ ಕಾರಣ ಪ್ರಖ್ಯಾತರಾದ ಕವಿಗ ಎಷ್ಟೊ ಜೆನ ಅಲ್ಲಿಂದಳೇ ಹೆಸ್‌ರ್ ಪಡ್‌ದೊ. ಕೊಪಣನಗರ, ಒಂಕುಂದ, ಪುಲಿಗೆರೆಂತೇಳ್ವ ಪ್ರಸಿದ್ಧ ನಗರಗಳ ಮಧ್ಯಲಿ ಬಳಕೆಲಿರುವ ಕನ್ನಡವೇ ತಿರುಳ್ಗನ್ನಡ ಆಗಿತ್. ಈ ತಿರುಳ್ಗನ್ನಡವೇ ಆ ಕಾಲದ ಕವಿಗಳ ಕಾವ್ಯ ಮಾಧ್ಯಮವಾಗಿತ್.

ಆಧುನಿಕ ಕಾಲಕೆ ಬಾಕನ ಈ ಮೇಲೆನ ಪರಿಸ್ಥಿತಿ ಬದ್‌ಲಾತ್. ದಕ್ಷಿಣ ಭಾಗದ ಕರ್ನಾಟಕಲಿ ಕನ್ನಡದ ಚಟುವಟಿಕೆ ಹೆಚ್ಚಾತ್. ಈ ಪ್ರದೇಶದ ಬಾಸೆಗೆ ಪ್ರಾಶಸ್ತ್ಯ ಬಂದ್ ಈ ಕನ್ನಡ 'ತಿರುಳ್ಗನ್ನಡ'ಂತ ಆತ್. ಈಗ ಇದರ ನಾವು 'ಶಿಷ್ಟ ಕನ್ನಡ'ಂತ ಕರ್ದವೆ. ಸಾರ್ವತ್ರಿಕ ವಿದ್ಯಾಭ್ಯಾಸಕ್ಕೆ ಬಳಸುವ ಕನ್ನಡ ಭಾಷಾ ಮಾಧ್ಯಮ, ಸರ್ಕಾರದ ಆಡಳಿತಲಿ ಬಳಸುವ ಕನ್ನಡ ಮಾಧ್ಯಮ, ಕರ್ನಾಟಕದ ಎಲ್ಲಾ ಭಾಗಗಳಿಗೂ ಸಾಮಾನ್ಯವಾದ್ದೇ ಆಗಿ ಉಟ್ಟು, ಹೀಂಗಿರುದರ್‌ಂದ ಪ್ರತಿಯೊಬ್ಬ ಕನ್ನಡಿಗಂಗೂ ಪರಸ್ಪರ ವ್ಯವಹಾರ ಸಾಧ್ಯ ಆಗುಟು.

ಬಾಸೆನ ಕಂಡ್‌ಹಿಡಿಯಕೆ ಮೊಂಯಿಸ ಏನೇನ್ ಮಾಡ್ತ್?

ಆದಿಮಾನವ ಕಾಡ್‌ಮುರ್ಗಂಗಳ ಹಾಂಗೆನೇ ಇತ್ತ್. ಆದರೆ ಅಂವ, ಅಂವನ ಸಹಜೀವಿಗಳಾದ ಮುರ್ಗಂಗಳ್‌ಂದ ಬುದ್ಧಿವಂತಿಕೆಲಿ ಹೆಚ್ಚಿನಂವಾಗಿತ್ತ್. ಅಕ್ಕಿಲ್ಲದ ಕೆಲೊವು ಸೌಲಭ್ಯಂಗ ಅವಂಗಿತ್ತ್. ಮುಖ್ಯವಾಗಿ ಅವನ ನಾಲಿಕೆನ ಅಂವನ ಇಚ್ಚೆಬಂದಾಂಗೆ ಹಿಂದೆ ನಾನಾ ತರಲಿ ಮೊಡ್ಚಿಕೆ ಆತಿತ್ತ್. ಸಂತೋಸು, ಬೇನೆ, ಬೇಸರ, ಆಕನ ಅಂವನ ಬಾಯೆಂದ ಆ! ಅಯ್ಯೋ! ಓ! ಂತೇಳ್ವ ಕೆಲೊವು ಉದ್ಗಾರಂಗ ತನಾಗಿ ಬಾತಿದ್ದೊ. ಇದ್ ಯಾಕೆ ಹೀಂಗೆ ಬಂದದೆಂತ ಅಂವಂಗೆ ಯೋಚನೆ ಬಾಕೆ ಸುರಾತ್. ಆ ಉದ್ಗಾರಗಳ ಬೇಕಾದಾಂಗೆ ಮಾಡಿಕೆ ತೀರ್ದುಂತ ಅಂವಂಗೆ ಗೊತ್ತಾತ್. ಈ ಉದ್ಗಾರಂಗ ಬಾಕನ ಹೊಟ್ಟೆಕಡೆಂದ ಬಾವ ಗಾಳಿ ಹೊರೆಗೆ ಹೋದೇಂತ ಗೊತ್ತಾತ್. ಉಸುರಾಡ್‌ಕನ ಕೂಡಾ ಗಾಳಿ ಒಳಗೆ ಹೊರೆಗೆ ಹೋದು ಬಾದು ಉಟ್ಟುಂತ ಗೊತ್ತಾತ್. ಹೀಂಗೆ ಹೊರೆಗೆ ಹೋವ ಗಾಳಿನ ಬಾಯೆಲಿ ನಾಲಿಕೆನ ಮೂಲಕ ತಡ್ದ್, ಬುಟ್ಟ್, ಹೊಸ ಹೊಸ ದಣಿಗಳ ಉಂಟು ಮಾಡಕ್‌ಂತ ಗೊತ್ತ್‌ಮಾಡಿಕಂಡ್, ಹಾಂಗೆ ಹಲೊವು ಸರ್ತಿ ಮಾಡಿನೋಡಿ ಕುಸಿಪಟ್ಟತ್. ಒಂದೊಂದು ಬಿಂದುಲಿ ನಾಲಿಕೆ ತಡಿಯಕನ ಒಂದೊಂದು ತರದ ದನಿಗ ಬಂದವೆಂತ ಗೊತ್ತಾತ್. ಪ್ರಾಣಿ ಪಕ್ಷಿಗ ಮಾಡುವ ಧ್ವನಿನ ಅನುಕರಣೆ ಮಾಡಿಕೆ ಸುರು ಮಾಡ್ತ್. ನಿರ್ದಿಷ್ಟ ಧ್ವನಿಗಳ ನಿರ್ದಿಷ್ಟ ವಸ್ತು ವಿಷಯಗಳಿಗೆ ಅನ್ವಯಿಸಿ, ಪುನರಾವರ್ತನೆ ಮಾಡಿ. ಅವನಾಂಗೆ ಇರುವ ಬೇರೆವ್ಕೆ ತೋರ್ಸಿತ್. ಹೀಂಗೆ ಇವನ ಪ್ರಯೋಗ ಸತತ ನಡ್ದ್, ಸ್ವರ, ವ್ಯಂಜನ, ಸಮೂಹ ಇವು ಸೇರಿರುವ ಪದಗಳ ಗುಂಪು, ಈ ಪದಗ ಬರೊಕಾದ ನಿಯಮ, ಇದೆಲ್ಲ ಇವಂಗೆ ಗೊತ್ತಾಗಿ, ಬಾಸೆಂತೇಳುವ ಸಾಧನದ ನಿರ್ಮಾಣ ಆತ್. ಸುರುಗೆ ಅದರ್ಲಿ ನಯನಾಜೂಕು ಇತ್ತ್‌ಂತ ಹೇಳಿಕೆ ಬೊತ್ತ್. ಅದ್ ಒರಟಾಗಿಯೇ ಇತ್ತ್. ಆದರೆ ಇದಿಕೆ ಮೊಂಯಿಸ ಸುರುಗೆ ಚೆಂದ್ರನ ಮೇಲೆ ಕಾಲಿಸಿದ ಸಂಶೋಧನೆಗೆ ಎಷ್ಟ್ ಮನ್ನಣೆ ಸಂದದೆನೋ ಅಷ್ಟೇ ಅಥವಾ ಅದಿಕ್ಕಿಂತ ಹೆಚ್ಚೇ ಮನ್ನಣೆ ಸಲ್ಲೊಕ್ಕಾದೆ.

ಮೊಂಯಿಸನ ಬಾಯೆಂದ, ಬೇರೆ ಬೇರೆ ಬಿಂದುಗಳ್‌ಂದ ನಾಲಿಕೆನ ಮೂಲಕ ಉತ್ಪತ್ತಿಯಾದ ಮಾತ್‌ನ ತುಣುಕುಗಳ, ಸ್ವರ-ವ್ಯಂಜನ ಮುಂತಾಗಿ ವಿಂಗಡ್ಸುವ ಕ್ರಮ

ಉಟ್ಟು, ಶ್ವಾಸಕೋಶಂದ ಹೊರೆಗೆಬಾವ ಗಾಳಿಗೆ ಬಾಯೆನ ಬೇರೆ ಬೇರೆ ಕಡೆಗಲ್ಲಿ, ಹಳ್ಳು ತಡೆಮಾಡಿ ಹೊರೆಗೆ ಬುಡುದರ್‌ಂದಾಗಿ, ಸ್ವರತಂತುಗಳ ಶ್ವಾಸಕೋಶಂದ ಬಾವ ಗಾಳಿ ಕಂಪಿಸುವಾಂಗೆ ಮಾಡಿ, ವಿವಿಧ ಸ್ವರಗ ನಾವ್ಗೆ ಕೇಳುವಾಂಗೆ ಆದೆ. ಈ ಸ್ವರಂಗ ಉತ್ಪತ್ತಿಯಾಕನ ಶ್ವಾಸಕೋಸದ ಗಾಳಿಗೆ ಪೂರ್ಣತಡೆ ಉಂಟಾದುಲೇಂತೇಳ್ದರ ಮರಿಯಕಾಗದ್. ವ್ಯಂಜನ ಧ್ವನಿಗಳ ಉತ್ಪತ್ತಿಲಿ ಮಾತ್ರ, ಬಾಯೆನ ಅಂಗುಳುನ ಯಾದಾರ್ ಬಿಂದುಗಲ್ಲಿ ನಾಲಿಕೆನ ಕೊಡಿ ತಾಂಗಿ ಕ್ಷಣಕಾಲ ಗಾಳಿನ ತಡ್ದ್‌ಬುಟ್ಟಾಕನ, ಅಲ್ಲಿಗೆ ವಿಶಿಷ್ಟವಾದ ಧ್ವನಿ ಕೇಳಿ ಬಂದದೆ. ಕೊಳಲ್ ಮುಂತಾದ ವಾದ್ಯಗಲ್ಲಿ ಸಂಗೀತಗಾರ, ಅದರ ಕಣ್ಣ್‌ಗಳ ಮುಚ್ಚಿ ಬುಟ್ಟ್ ಬೇರೆ ಬೇರೆ ರಾಗಗಳ ಹೊರ್ಡ್‌ಸಿದೆ. ಇದ್‌ಕೂಡಾ ಹಾಂಗೆನೆ. ಕೇಶಿರಾಜಂತೇಳ್ವ ಕನ್ನಡದ ವೈಯಾಕರಣ 13ನೇ ಶತಮಾನಲಿ ತನುವಾದ್ಯಂ, ನಾಲಗೆ ವಾದನದಂಡಂತ ಸರಿಯಾಗಿಯೇ ಹೇಳಿಟು.

ಮಾತ್‌ನ ಹೇಂಗೆ ಸ್ಥಿರಪಡುಸುದು?

ಮಾತ್‌ನ ಆಡಿ ಮುಗ್ಸಿದ ಕೂಡ್ಲೆ ಅದ್ ಮಾಯ ಆದೆ. ಇದೇ ಆದ್‌ಂತ ತೋರ್ಸಿಕೆ ಯಾವ ಚಿಹ್ನೆನೂ ಒಳಿದುಲೆ. ಇದ್ ಮೊಯಿಂಸಂಗೆ ಒಂದು ಸಮಸ್ಯೆನೇ ಆತ್. ವೇದಗಳ ವಿಚಾರ ತಿಳ್ದೊವು ಹೇಳ್ವೆ, ಅಷ್ಟ್ ಮಂತ್ರಗಳ್ನೂ ಬಾಯೆಪಾಠ ಮಾಡಿಕಂಡ್ ಉಚ್ಚಾರಣೆಲಿ ಒಂದಿಷ್ಟೂ ತೊಪ್ಪು ತಡೆಗಳಾಗದ ಹಾಂಗೆ ನೋಡಿಕಂಡ್ ಬಂದೊಗಡ. ಮಂತ್ರಗಳ ವಿಶೇಷಂತೇಳಿರೆ, ಎಲ್ಲಿಯಾರ್ ಒಂದು ದನಿನ ಬದ್‌ಲ್ ಇನ್ನೊಂದು ಬಂದ್‌ಬುಟ್ಟರೆ ಅರ್ಥ ಅನರ್ಥ ಆಗಿ, ಹಾನಿಗೆ ದಾರಿಯಾದೆಂತ ಹೆದ್‌ರಿಕೆ ಇತ್ತ್. ಅದಿಕೆ ಆ ಮಂತ್ರಗಳ ಗಣಪಾಠಗಳಾಗಿ ವಿಂಗಡ್ಸಿ, ಗಣಗಳ ಅನುಲೋಮ ವಿಲೋಮ (A→Z : Z→A) ಪದ್ಧತಿಂದ ಹೇಳಿಕೆ ಏರ್ಪಾಡ್ ಮಾಡ್ದೊ. ಹೀಂಗೆ ಬಾಯಿಪಾಠ ಮಾಡಿಕಂಡೇ ವೇದಾಧ್ಯಯನ ತಲೆಮಾರ್‌ಂದ ತಲೆಮಾರ್‌ಗೆ ನಡ್ದುಟು. ಇದ್ ಎಲ್ಲರ್‌ಂದಲೂ ಸಾಧ್ಯ ಆವಂತ ವಿಚಾರ ಅಲ್ಲ. ಬಾಸೆನ ಸ್ಥಿರ ಆಗಿ ನಿಲ್ಸಿಕೆ ಬೇರೇನೆ ವ್ಯವಸ್ಥೆ ಆಕುಂತ ಮಾನವನ ಮನ್ಸಿಗಾತ್. ಅಂವ ವಾಸಮಾಡ್ದ ಗುಹೆಗಳ ಗೋಡೆಗಲ್ಲಿ, ಅವನ ಪರಿಸರಲಿ ಕಂಡ್‌ಬಾವ ಮೃಗ, ಪಕ್ಷಿಗಳ ರೂಪುನ ಕಲ್ಲ್‌ಲಿ ಕುಟ್ಟಿ ಕುಟ್ಟಿ ಮಾಡಿಕೆ ಸುರು ಮಾಡಿತ್ತ್. ಈ ಚಿತ್ರಣ ಬೆರೀ ಸಂಕೇತ ಮಾತ್ರ. ಹಾಂಗೇ ತಾನ್ ಮಾತಾಡುವ ಧ್ವನಿಗಳ ಸಂಕೇತನ ಹೀಂಗೆ ಮಾಡಿ ತೋರ್ಸಿರೆ ಏನಾದುಂತ ಯೋಚನೆ ಮಾಡ್ತ್. ಯೋಚನೆ ಬಾದೇತಡ ನಮ್ಮಾಂಗೆ ಸೋಮಾರಿತನ ಅವಂಗಿತ್ತ್‌ಲೆ. ಒಂದೊಂದು ಧ್ವನಿಗೂ ಒಂದೊಂದು ಸಂಕೇತನ ಸೃಷ್ಟಿ ಮಾಡಿಯೇ ಬುಟ್ಟತ್.

ಈ ಸಂಕೇತಗಳ ಮಾಲೆನ ನಾವು ಇಂದ್ ಲಿಪಿಂತ ಕರ್ದವೆ. ಎಲ್ಲ ಬಾಸೆಗಳಿಗೂ ಲಿಪಿಸಂಸ್ಕಾರ ನಡ್ತ್‌ಲೆ. ಪೂರ್ವಲಿ. ಬೇರೆ ಬೇರೆ ಬಾಸೆಗಳ ವರ್ಗಕ್ಕೆ ಬೇರೆ ಬೇರೆ ಲಿಪಿಗ ಪ್ರಚಾರಕ್ಕೆ ಬಂದೊ. ಇಂಡೋ ಆರ್ಯನ್ ಬಾಸೆಗೆ ಒಂದು ಲಿಪಿ ಸಮೂಹ ಇದ್ದರೆ, ಬೇರೆವುಕ್ಕೆ ಬೇರೆ. ದ್ರಾವಿಡ ವರ್ಗದ ಕೆಲೊವು ಬಾಸೆಗ, ತಮಿಳು, ಕನ್ನಡ,

ತೆಲುಗು, ಮಲೆಯಾಳಂನಂತೊವು ಬ್ರಾಹ್ಮೀ ಲಿಪಿ ಪದ್ಧತಿನ ಅನುಸರ್ಸಿದೊ. ಇಷ್ಟೆಲ್ಲ ಸಾದ್‌ಸಿದ ವೇದಕಾಲದ ಮಾನವ ಜನಾಂಗದ ಅದ್ಭುತ ಬುದ್ಧಿ ಶಕ್ತಿನ ನಾವು ಒಂದು ಭಯಮಿಶ್ರಿತ ಗೌರವಂದ ಕಂಡವೇನೊ ಸಁರಿ. ಆದರೆ ಅವು ಈ ಜ್ಞಾನನ ಬೇರೆವ್ಕೊ ಪಾಲ್‌ಕೊಡೊಕುಂತೇಳ್ವ ಉದಾರ ಬುದ್ಧಿನ ತೋರ್ಸಿತ್‌ಲೆ. ವೇದಾಧ್ಯಯನ ಮಾಡ್ಡೊವು ವೈದಿಕಁರ್ ಅಂದರೆ ಬ್ರಾಹ್ಮಣರ್. ಈ ಮಂತ್ರಗ, ಸೂತ್ರಗ ತಮ್ಮೊವುಕೆ ಮಾತ್ರ ಸೇರ್ದ್. ನಾವೇ ಬುದ್ಧಿ ಸಾಮರ್ಥ್ಯಁಲಿ ಅಪ್ರತಿಮಁರ್. ಬೇರೆವೆಲ್ಲ ನಮ್ಮಂದ ಕೀಳ್. ಅವು ನಮ್ಮ ದಾಸವೃತ್ತಿ ಮಾಡಿಕಁಡ್ ಇರಁಕ್ ಹೊರ್ತು ಅವ್ಕೆ ಇದರ್ಲಿ ಪಾಲಿಲ್ಲೆ. ಇದ್. ನಾವ್ಗೆ ಮಾತ್ರ ಸೇರ್ದ್. ವೇದಗಳ ಲಿಖಿತ ರೂಪಕ್ಕೆ ಇಳ್ಸಿದಮೇಲೂ, ಅದರೆಲ್ಲ ಇಂಥ ಸ್ವಾರ್ಥದ ಕಁಬ್ಬಿಣದ ಕೋಟೆನೊಳಗೇ ಇಸಿಕಂಡ್, ತಮ್ಮಂದ ಮುಕ್ಕಾಲಂಶದ ಜನಂಗಳ ಅಜ್ಞಾನದ ಕತ್ತಲೆಲೇ ಒಳ್ಸಿ. ಬಾರಿದೊಡ್ಡ ಸಾಮಾಜಿಕ ಅನ್ಯಾಯ ಮಾಡ್ದೊಂತ ಸ್ವಾಮಿ ವಿವೇಕಾನಂದರಂತ ಹಿರಿಯೊವು ಹೇಳಿಯೊಳೊ.

ಪ್ರಾಣಿಪಕ್ಷಿಗಳ ಸಂಕೇತಿಸುವ ಚಿಹ್ನೆಗ ಅಥವಾ ಚಿತ್ರಗಳ್ಲಿ ಅವುಗಳ ಹೋಲಿಕೆನ ಹಙ್ಚಮಟ್ಟಿಗಾರ್ ಕಾಣಁಕ್. ಆದರೆ, ಮಾತ್‌ನ ತುಣುಕುಗಳ ಸಂಕೇತಿಸಿಕಾಕನ ಅಂತ ಹೋಲಿಕೆಗೇನೂ ಇತ್ತ್‌ಲೆಂತನೇ ಹೇಳೊಕು. ಆಧುನಿಕ ಕಾಲಲಿ, ಪ್ರಿಂಟಿಂಗ್ ಪ್ರೆಸ್‌ಗಳ್ಲಿ ಉಪಯೋಗಿಸುವ ಧ್ವನಿಸಂಕೇತಗಳ ಚಿಹ್ನೆಗ, ಸುಂದರವಾಗಿ ಬಿಡಿಬಿಡಿಯಾಗಿ ಕಂಡವೆ. ಇಂತ ಒಂದೊಂದು ಸಂಜ್ಞೆನ್ನೂ ಅಕ್ಷರ–ಂತ ಕರ್ದವೆ. ಅಕ್ಷರಂತೇಳ್ರೆ ನಾಶ ಆಗದ್ದ್. ಶಾಶ್ವತವಾದ್ದ್‌ಂತ ಅರ್ಥ. ಇದ್ ಸಂಸ್ಕೃತ ಪದ. ಈಗನ ಈ ಸಂಜ್ಞೆಗಳ್ನೂ ಪ್ರಾಚೀನ ಕಾಲಁಲಿಶಾಸನಗಳ ಕಁಲ್ಲ್‌ಲಿ, ಲೋಹಁಲಿ ಕೊರ್ದ ಬರವಣಿಗೆನನೂ ಹೋಲ್ಸಿ ನೋಡಿರೆ ಒಂದಕ್ಕೊಂದು ಸಂಬಂಧನೇ ಇಲ್ಲದಾಂಗೆ ನಮ್ಮ ಮನ್ಸಿಗಾದು. ಆ ಬರಹಗಳ ಓದಿ ಅರ್ಥಮಾಡಿಕಂಬಕೆ, ವಿಶೇಷ ಪ್ರಯತ್ನ ಮತ್ತು ಅಧ್ಯಯನದ ಅಗತ್ಯ ಉಟ್ಟು. ಪ್ರಾಚೀನ ಕಾಲಂದ ಹಿಡ್ಡ್ ಆಧುನಿಕ ಕಾಲದವರೆಗೂ, ನಾನಾ ಕಾಲಘಟ್ಟಗಳ್ಲಿ ಹಾದ್ ಬಂದ ಲಿಪಿ, ಇಂದ್‌ನ ಅವಸ್ಥೆಗೆ ಮುಟ್ಟಿಟು. ಅಚ್ಚಿ ಮಾಡುವ ಕಾರಣದಿಂದಾಗಿ ಅದಿಕೆ ಒಂದು ಸೌಂದರ್ಯ ಉಂಟಾಗುಟುಂತ ಹೇಳಁಕ್. ಕೆಲವರ ಕೈಬರಹ ಪೊರ್ಲಾಗಿದ್ದರು ಬಹುಮಟ್ಟಿಗೆ ಹಾಂಗಿಲ್ಲೆಂತೇಳ್ದು ನಿಶ್ಚಯ. ಇನ್ನ್ ಕೆಲೊವು ಜನ ವೇಗಲಿ ಬರಿಯೊವು ಮೋಡಿ ಅಕ್ಷರಁಲಿ ಬರಿಯೊವೂ ಒಳೊ. ಹೀಂಗಾಗಿ ಇವು ಬರ್ದದರ ಓದಿಕೆ ಸಾಮಾನ್ಯಂದ ಸಾಧ್ಯ ಇಲ್ಲೆ. ತುಂಬ ಪ್ರಯತ್ನಪಟ್ಟ್. ಈ ಬರಹಗಳ ಓದಿಕೆ ಅಭ್ಯಾಸ ಮಾಡ್ಡೊವುಕೆ ಮಾತ್ರ ಸಾಧ್ಯ.

ಬಾಸೆನ ವಿವಿಧ ಸ್ತರಗ:

ಬಾಸೆ ಧ್ವನಿ ಪ್ರಧಾನವಾದಁದ್. ಧ್ವನಿಯೇ ಬಾಸೆನ ಮೂಲಭೂತ ಅಂಶ. ನಾವ್ಗೆ ಮನೆ ಕಁಟ್ಟೊಕುಂತಾದರೆ. ಇಟ್ಟಿಗೆ, ಕಁಲ್ಲ್‌ಗ ಹೇಂಗೆ ಮುಖ್ಯವಾದವೆನೊ ಹಾಂಗೇ ಮಾತ್‌ಗೆ ಧ್ವನಿಗ. ಧ್ವನಿಗಳ್ಲಿ ಎರ್‌ಡ್ ವಿಧ. ಒಂದು – ಅ ಆ ಇ ಈ ಇತ್ಯಾದಿಗ

ಆಗಿರುವ ಸ್ವರಗ, ಸ್ವರಗಳ ಮುಖ್ಯ ಲಕ್ಷಣಂತೇಳಿರೆ ಬೇಕರೆ ನಾವು ಅದರ ತಡೆಯಿಲ್ಲದೆ ಉದ್ದಕೆ ಹೇಳಿಕಱಂಡೇ ಇರಱೆಕ್. ಉದಾ: 'ಅ'ಂತ ಉದ್ದಕ್ಕೆ ಉಸುರು ಕಱೆಟ್ಟ್‌ಕನ ಮುಟ್ಟ ಹೇಳಿಕಂಡೇ ಇರಱೆಕ್. ನಮ್ಮ ಬಾಸೆಲಿ ನಾವು ಉಪಯೋಗ್ಸುವ ಸ್ವರಂಗ ಈ ಕೆಳೆಗೆನೊವು: ಅ, ಆ, ಇ, ಈ, ಉ, ಊ, ಎ, ಏ, ಐ, ಒ, ಓ, ಔ,. ಈ ಸ್ವರಗಳ ಅವುಗಳ ಸ್ವಭಾವಕ್ಕನುಸರ್ಸಿ ಬೇರೆ ಬೇರೆ ಪಂಗಡಗಳಾಗಿ ಮಾಡುವೆ.

ಇ	ಈ	ಉ	ಊ
ಎ	ಏ(ಐ)	ಒ	ಓ (ಔ)
		ಅ	ಆ

ನಮ್ಮ ಎಡ್ಡ ಬದಿಗೆ ಕೊಟ್ಟಿರುವ ಸ್ವರಗ ನಾಲಿಕೆನ ಎದ್‌ರ್ ಭಾಗಂದ. ನಮ್ಮ ಬಲ್ದ ಬದಿಗೆ ಕೊಟ್ಟಿರುದು. ನಾಲಿಕೆನ ಹಿಂಭಾಗಂದ ಉತ್ಪತ್ತಿಯಾದ ಸ್ವರಗ, ಮಧ್ಯ ಭಾಗಲಿ ಕೊಟ್ಟಿರುದು ನಾಲಿಕೆನ ನೊಡು ಭಾಗಂದ ಉತ್ಪತ್ತಿಯಾದ ಸ್ವರಗ. ಇದರ ಪೂರ್ವ, ಪಶ್ಚ, ಮಧ್ಯಂತ ಕರ್ದವೆ. ಇನ್ನ್ ಲಂಬ ವಿಭಜನೆಲಿ ನೋಡ್‌ಕನ ಇ, ಈ, ಉ, ಊ ಉನ್ನತ ಸ್ವರಗಂತನೂ ಎ, ಏ, ಒ, ಓ ಮಧ್ಯ ಸ್ವರಗಂತನೂ ಅ, ಆಂತೇಳ್ದು ನಿಮ್ನ ಸ್ವರಗಂತನೂ ಕರ್ದವೆ. ಇ, ಈ, ನ ಉತ್ಪತ್ತಿ ಮಾಡ್‌ಕನ, ನಾಲಿಕೆನ ಕೊಡಿ ಎತ್ತರಲಿದ್ದದೆ. ಅ ಆ ನ ಉತ್ಪತ್ತಿ ಮಾಡ್‌ಕನ ನಾಲಿಕೆನ ಮಧ್ಯಭಾಗ ಎತ್ತರಲಿದ್ದದೆ.ಬಾಯನ ಎದ್ರ್ ಭಾಗಂದ ಸ್ವರೋತ್ಪತ್ತಿಯಾಕನ ತುಟಿಗ ತೆರ್ದಾಂಗೆ ಇದ್ದವೆ. ಹಿಂಭಾಗಂದ ಉತ್ಪತ್ತಿಯಾಕನ ತುಟಿಗ ರವುಂಡಾಗಿ ಇದ್ದವೆ.

ಮೇಲೆ ತೋರ್ಸಿದ ಸ್ವರಗ, ಬಾಯೆನ ವಿವಿಧ ಬಿಂದುಗಳ್‌ಂದ ಗಾಳಿ ಸರಾಗ ಹೊರಗೆ ಹೋಕಂಡ್ ಇರ್‌ಕನ, ಗಂಟ್ಲ್‌ಲಿರುವ ಸ್ವರತಂತುಗ ಕಂಪನ ಆಗಿ ನಮ್ಮ ಕೆಬಿಗೆ ಬೀಳುವ ಸ್ವರಗಾಗಿದ್ದವೆ. ಇವುಗಳ ಪ್ರತಿಯೊಂದರ್ನೂ ಉದ್ದಕೆ ಎಷ್ಟೊತ್ತಾದರೂ ಎಳ್ಕಂಡ್ ಉಚ್ಚರ್ಸಱೆಕ್, ಆದರೆ, ಮಾತ್‌ಲಿ ಅಂತ ಅಗತ್ಯ ಬೀಳ್ದುಲೆ. ಅಲ್ಲದೆ. ಮೊಂಯಿಸ ಬುಡುವ ಶ್ವಾಸಕ್ಕೂ ಒಂದು ಸಹಜ ಮಿತಿಂತ ಉಟ್ಟು.

ಸ್ವರಗ ಆದಮೇಲೆ ಮಾತ್‌ಲಿ ಬಳಕೆಗೆ ಬಾವ ಧ್ವನಿಗಳ ವ್ಯಂಜನಗಂತ ಕರ್ದವೆ. ವ್ಯಂಜನಗಲ್ಲಿ ಎರಡ್ ವಿಧ. ಒಂದು– ವರ್ಗೀಯ ವ್ಯಂಜನಗ, ಇನ್ನೊಂದು– ಅವರ್ಗೀಯ ವ್ಯಂಜನಗ, ಹೀಂಗೆಲ್ಲ ವಿಭಜನೆ ಮಾಡ್ದ್ ಅಭ್ಯಾಸದ ದೃಷ್ಟಿಂದ ಭಾಷಾಪಂಡಿತಱೆರ್. ವ್ಯಂಜನಗಳ ಉತ್ಪತ್ತಿ, ಅಂಗುಳುನ ಬೇರೆ ಬೇರೆ ಬಿಂದುಗಲ್ಲಿ ನಾಲಿಕೆನ ಕೊಡಿ ತಾಂಗಿ. ನಿತ್, ಶ್ವಾಸಕೋಶದಿಂದ ಹೊರ್ಟ್ ಹೊರೆಗೆ ಬಾವ ಗಾಳಿಗೆ ಕ್ಷಣಿಕ ತಡೆಯೊಡ್ಡಿ ಬುಡುದರ್‌ಂದ ಆದೆ. ಮೇಲೆನ ಹಲ್ಲ್ ಮತ್ತೆ ಒಸಡ್‌ಗ ಸೇರ್ವಲ್ಲಿ ನಾಲಿಕೆನ ಕೊಡಿ, ಹೊರೆಗೆಬಾವ ಗಾಳಿಗೆ ಹಙ್ಞ ತಡೆಮಾಡಿ ಬುಡುಕನ 'ತ್'ಂತೇಳ್ವ ವ್ಯಂಜನ ಉತ್ಪತ್ತಿಯಾದೆ. ನಾಲಿಕೆನ ಕೊಡಿ ಹಙ್ಞ ಬೊಗ್ಗಿ ಕಠಿಣವಾಗಿರುವ ಒಸಡ್ಲಿ, ಹಿಂದೆನಾಂಗೆ ಗಾಳಿನ ತಡ್ದ್ ಬುಡುವ ಕಾರ್ಯಭಾರಂದ 'ಟ್'ಂತೇಳ್ವ ವ್ಯಂಜನ ಉಂಟಾದೆ. ಹೀಂಗೆ ಅಂಗುಳುನ ನಾಲ್ಕೈದ್ ಬಿಂದ್‌ಗಲ್ಲಿ ವ್ಯಂಜನೋತ್ಪತ್ತಿ ಕಾರ್ಯ ನಡ್ದದೆ. ಪ್ರತಿಯೊಂದು ಬಿಂದುಗಲ್ಲಿ

ಹೀಂಗೆ ನಮ್ಮ ಬಾಸೆಗಳ್ಲಿ ಐದ್ ವರ್ಗದ ವ್ಯಂಜನ ಒಳೊಂತ ಪಂಡಿತಅ್ ತೋರ್ಸಿಯೊಳ್. ಅವು:

1. ಕಾವರ್ಗ, 2. ಚಾವರ್ಗ, 3. ಟಾವರ್ಗ,4. ತಾವರ್ಗ, 5. ಪಾವರ್ಗ

ಕಚಟತಪಂತೇಳ್ದೇ ಆ ವರ್ಗಗ. ಈ ಐದ್ ವರ್ಗಗಳ್ಲಿಯೂ ಪ್ರತಿಯೊಂದು ವರ್ಗಅಲಿಯೂ ಐದೈದ್ ವ್ಯಂಜನಗ ಬಾಕೆ ಸಾಧ್ಯ ಉಟ್ಟೂಂತ ಪಂಡಿತಅ್ ತೋರ್ಸಿಯೊಳೊ. ಅಂದರೆ ಒಂದು ಬಾಸೆಲಿ ಇಪ್ಪತ್ತೈದು ವರ್ಗ ವ್ಯಂಜನಗ ಇರುವೋಂತ ಅಭಿಪ್ರಾಯ. ಈ ಕೆಳಗೆ ಆ ವ್ಯಂಜನಗಳ ಕಾಣಅ್;

	ಕ ವರ್ಗ	ಚ ವರ್ಗ	ಟ ವರ್ಗ	ತ ವರ್ಗ	ಪ ವರ್ಗ
1.	ಕ	ಚ	ಟ	ತ	ಪ
2.	ಖ	ಛ	ಠ	ಥ	ಫ
3.	ಗ	ಜ	ಡ	ದ	ಬ
4.	ಘ	ಝ	ಢ	ಧ	ಭ
5.	ಙ	ಞ	ಣ	ನ	ಮ

2ನೇ ಮತ್ತ್ 4ನೇ ಸಾಲ್‌ನ ಅಕ್ಷರಗ ಮಹಾಪ್ರಾಣಂಗ. ಕನ್ನಡಕ್ಕೆ ಎರವಲಾಗಿ ಬಂದ ಸಂಸ್ಕೃತ ಶಬ್ದಗಳ್ಲಿ ಮಾತ್ರ ಇವು ಬಂದವೆ.

ಈ ಎಲ್ಲಾ ಧ್ವನಿಗಳೂ ಒಂದು ಬಾಸೆಲಿ ಪ್ರಯೋಗ ಆದವೆಂತ ಹೇಳಿಕೆ ಸಾಧ್ಯ ಇಲ್ಲೆ. ಸಂಸ್ಕೃತದಂತಹ ಪ್ರೌಢ ಸಾಹಿತ್ಯ ಬಾಸೆನ ಕನ್ನಡದೊಟ್ಟಿಗೆ ಬೆರಕೆಮಾಡಿ ಪ್ರಯೋಗಿಸುವ ಕಾರಣ ಶಿಷ್ಟ ಕನ್ನಡಅಲಿ ಇವೆಲ್ಲ ಬಾಕೆ ಸಾಧ್ಯ ಉಟ್ಟು. ಉಪಬಾಸೆಗಳ ಮಟ್ಟಿಗೆ ಹೀಂಗೆ ಹೇಳಿಕೆ ಸಾಧ್ಯ ಇಲ್ಲೆ.

ಯ, ರ, ಲ, ವ, ಶ, ಷ, ಸ, ಹ, ಳ ಂತೇಳ್ವ ಒಂಬೊತ್ತ್ ಅಕ್ಷರಗಳ ಅವರ್ಗೀಯಗಂತ ಕರ್ದವೆ. ನಾಲಿಕೆನ ಕೊಡಿ. ಧ್ವನಿ ಬಿಂದುಗಳ್ಲಿ, ಶ್ವಾಸಕೋಶಂದ ಬಾವ ಗಾಳಿನ ಪೂರ ತಡಿಯದೆ, ಹಞ್ಞ ಸೆರೆಬುಟ್ಟ್, ಆ ಮೂಲಕ ಹೋದ ಗಾಳಿಗೆ ಒಂದು ತರದ ಒತ್ತಡ ಕೊಡುದರ್‌ಂದ ಈ ಧ್ವನಿಗ ಕೇಳಿ ಬಂದವೆ. ಇನ್ನ್ 'ರ'ಂತೇಳ್ವ ಧ್ವನಿ, ನಾಲಿಕೆನ ಕೊಡಿ. ಮೇಲೆನ ವಸಡಿಗೆ ತಾಂಗಿ, ಅಲ್ಲಿ ತೀವ್ರ ಕಂಪನಕ್ಕೊಳಗಾದೆ. ಆಗ 'ರ' ಕೇಳಿಬಂದದೆ.'ಲ'ನ ಉಚ್ಚರ್ಸಿಕಾಕನ, ನಾಲಿಕೆನ ಕೊಡಿ ಮೇಲೆನ ಹಲ್ಲ್‌ನ ಹಿಂದೆತಾಂಗಿ. ಅದರ ಎರ್ಡ್ ಪಕ್ಕಗಳ್ಲಿಯೂ ಗಾಳಿ ಹೋಅಕಂಡಿರುವಾಂಗೆ ತೆರ್ದ ಜಾಗೆ ಇದ್ದ್, ಅದರ ಮೂಲಕ ಧ್ವನಿನ ಉತ್ಪತ್ತಿ ಆದೆ. 'ವ'ನ ಉಚ್ಚರ್ಸಿಕಾಕನ ಕೆಳೆಗೆನ ತುಟಿ, ಮೇಲೆನ ಹಲ್ಲಿಗೆ ಮೆಲ್ಲ ತಾಂಗಿ, ಕೆಳಗೆ ಬಾಕನ ಹೊರೆಗೆ ಹೋವ ಗಾಳಿಗೆ ಕಂಪನ ಉಂಟಾದ ಕಾರಣ, 'ವ' ಕೇಳಿಬಂದದೆ.'ಶ'ನ ಉಚ್ಚಾರಣೆಲಿ, ನಾಲಿಕೆನ ಎದ್‌ರ್‌ಭಾಗ ಚಪ್ಪಟೆಯಾಗಿ ಮೇಲೆನ

ವಸಡಿಗೆ ಸಮಾನಾಂತರವಾಗಿ ಹಣ್ಣೋ ಎಡೆ ಬುಟ್ಟ್. ಗಾಳಿನ ಒತ್ತಿ ಹೊರೆಗೆ ಹಾಕಿದೆ. ಆಗ'ಶ' ಕೇಳಿಬಂದದೆ. 'ಷ' ದ ಉಚ್ಚಾರಣೆಲಿ ನಾಲಿಕೆನ ಕೊಡಿ ಹಿಂದೆಗೆ ಬೊಗ್ಗಿ, ಗಾಳಿ ಹೊರೆಗೆ ಹೋಕೆ ಹಣ್ಣಮಾತ್ರ ಜಾಗೆ ಬುಟ್ಟ್ ಗಾಳಿಗೆ ಒತ್ತಡ ಹಾಕಿ ಹೊರೆಗೆ ಹಾಕ್‌ಕನ 'ಷ' ಕೇಳಿಬಂದದೆ. 'ಸ' ನಾಲಿಕೆನ ಕೊಡಿ ಹಣ್ಣ ಹಿಂದೆ ತಿರ್‌ಗಿದಾಂಗೆ ಆಗಿ ಮೇಲೆನ ಒಸಡ್ ಮತ್ತೆ ಮೇಲೆನ ಹಲ್ಲ್ ಸೇರುವಲ್ಲಿ (ಇದಿಕೆ ವರ್ತ್ಸ್ಯಂತ ಹೆಸ್‌ರ್) ಗಾಳಿಗೆ ಬಲವಾದ ಒತ್ತಡ ಕೊಟ್ಟ್ ಹೊರೆಗೆ ಹಾಕ್‌ಕನ ಈ ಧ್ವನಿ ಕೇಳಿಬಂದದೆ. (ಸ). ಗಂಟ್ಲ್‌ಂದ ಗಾಳಿ ಹೊರೆಗೆ ಬಾಕನ ಅಲ್ಲಿ ಅದಿಕ್ಕೆ ತೀವ್ರ ಒತ್ತಡ ಕೊಟ್ಟ್ ಹೊರೆಗೆ ಬಲವಾಗಿ ದಬ್ಬುಕನ 'ಹ' ಧ್ವನಿ ಉತ್ಪತ್ತಿ ಆದೆ. ಇನ್ನ್ 'ಳ' ನಾಲಿಕೆನ ಕೊಡಿ ಹಿಂದೆಬೊಗ್ಗಿ ಕಠಿಣ ವಸಡಿಗೆ ತಾಂಗಿ ನಿತ್ತ್ ಅದರ ಎರ್ಡ್ ಕಡೆಲೂ (ಆಚೀಚೆ) ಸೆರೆಯಿದ್ದ್ ಆ ಮೂಲಕ ಗಾಳಿ ಹೊರೆಗೆ ಬಾಕನ 'ಳ' ಧ್ವನಿ ಕೇಳಿ ಬಂದದೆ.

ವರ್ಗೀಯ ಮತ್ತು ಅವರ್ಗೀಯಗಳ ನೋಡುಲಿರುವ ವ್ಯತ್ಯಾಸ:

ವರ್ಗೀಯ ವ್ಯಂಜನಗ ಒಂದೊಂದು ವರ್ಗಲಿಯೂ, ಐದೈದರ ಹಾಂಗೆ ಒಟ್ಟು 5x5=25 ವ್ಯಂಜನಗಂತ ಲೆಕ್ಕ ಹಾಕೊಳೊ. ಸ್ವರಗ ನಿಜವಾಗಿ ಹತ್ತ್. ಆದರೆ ಪಂಡಿತಱ್ ಎರ್ಡ್ ಸಂಧ್ಯಕ್ಷರಗಳ್ನೂ ಅಗತ್ಯ ಇಲ್ಲದಿದ್ದರು ಇವರ ಸಾಲಿಗೇ ಸೇರ್ಸಿಯೊಳೊ. ಉದಾ: 'ಐ' ಮತ್ತೆ 'ಔ'. 'ಐ' ನ ಅಯ್ ಂತಳೊ, 'ಔ'ನ 'ಅವ್' ಂತಳೊ ಬರ್ದ್ ತೋರ್ಸಱ್. ಅದೇ ರೀತಿ ವರ್ಗಾಕ್ಷರಗಳ್ಲೂ ಕೆಲೊವು ಅಕ್ಷರಗ ಅಗತ್ಯ ಇಲ್ಲೆಂತಾದರೂ, ಸಂಸ್ಕೃತ ಭಾಸೆನ ಉಪಯೋಗ್ಸ್‌ಕನ ಬೇಕಾದವೆಂತೇಳ್ವ ಕಾರಣಂದ ಅವರ ಇಸಿಕಂಡೊಳೊ. ಕನ್ನಡ ಬಾಸೆಗೆ ಮಾತ್ರ ಇವೆಲ್ಲ ಬೇಡಂತ ಹೇಳಿರೂ. ಶಾಸ್ತ್ರಕಾರರಿಗೆ ಅವರ ಬುಡಿಕೆ ಮನ್ಸಿಲ್ಲೆ. ಮಧ್ಯೆ ಮಧ್ಯೆ ಕೆಲೊವು ಅಕ್ಷರಗಳ ಲೋಪ ಮಾಡಿರೆ. ಅಕ್ಷರಮಾಲೆನ ಸೌಷ್ಠವ ಹಾಳಾದೆ. ಹಲ್ಲ್‌ಗಳ ಸಾಲ್‌ಂದ ಕೆಲೊವು ಹಲ್ಲ್‌ಗ ಬಿದ್ದ್‌ಹೋದರೆ, ಹೇಂಗೆ ಮೋರ್ಲುಗೆ ಕೊರತೆ ಕಂಡದೆನೋ ಹಾಂಗೆ ಇಲ್ಲಿಯೂ ಆದೆ. ಅದ್ಕೆಬೇಕಾಗಿ ಅಂತ ಧ್ವನಿಗಳ ಒಳ್ಸಿಕಮೊನೋಂತೇಳ್ವ ಸೌಂದರ್ಯ ದೃಷ್ಟಿ ಇದಿಕೆ ಕಾರಣ. ಖ, ಘ, ಛ, ಝ, ಠ, ಢ, ಥ, ಧ, ಫ, ಭ ಂತೇಳುವ ಅಕ್ಷರಗಳ ಮಹಾಪ್ರಾಣಾಕ್ಷರಗಂತ ಕರ್ದವೆ. ಇವು ಕನ್ನಡ ಪದಗಳ್ಲಿ ಬಾದುಲೆ. ಹೀಂಗಿದ್ದರೂ ಕನ್ನಡಕ್ಕೆ ವ್ಯಾಕರಣ ಬರ್ದ ಎಲ್ಲ ಪೂರ್ವ ವೈಯಾಕರಣಱ್ ತಮ್ಮ ವ್ಯಾಕರಣಲಿ ಇವರ ಒಳ್ಸಿಕಂಡಳೊ. ಕನ್ನಡದ ಶ್ರೇಷ್ಠ ವೈಯಾಕರಣ ಕೇಶಿರಾಜ, ಬಾಸೆನ ಕನ್ನಡ, ಸಂಸ್ಕೃತಂತ ಬೇರೆ ಬೇರೆ ಎಣ್ಸೆ ನೋಡಂವಾದರೂ, "ಒಳವು ಮಹಾಪ್ರಾಣಂಗಳ್. ನಿಜದಿಂ ಕನ್ನಡದೊಳ್"ಂತ ಹೇಳಿ ಕನ್ನಡಾಭಿಮಾನಗಳ್‌ಂದ ಟೀಕೆಗೊಳಗಾಗುಟು. ಕನ್ನಡಕ್ಕೆ ವ್ಯಾಕರಣ ಬರ್ದ ಪಾಶ್ಚಾತ್ಯ ಪಂಡಿತರೂ, ಹಳೆ ಪದ್ಧತಿನ ಮೀರದೆ ಅನಗತ್ಯವಾದರೂ, ಸೌಷ್ಠವಂತೇಳ್ವ ಸೌಂದರ್ಯ ದೃಷ್ಟಿನ ಮೀರದೆ ಇವರೆಲ್ಲ ಒಳ್ಸಿಕಂಡೊಳೊ. ದೇಸೀಯ ಪಂಡಿತಱೂ ಅದೇ ದಾರಿ ಹಿಡ್ದೊಳೊ.

ವರ್ಗೀಯ ವ್ಯಂಜನಗ, ಸ್ವರದ ಸಾಯ ಇಲ್ಲದೆ ನಮ್ಮ ಕೆಬಿಗೆ ಕೇಳಿಕಿಲೆ. 'ಕ'ಂತ ಹೇಳ್‌ಕನ ಶುದ್ಧ ವ್ಯಂಜನ 'ಕ್'ಗೆ ಸ್ವರ 'ಅ'ಸೇರಿರೆ ಅಥವಾ ಬೇರೆ ಯಾದಾರ್ ಸ್ವರ ಸೇರಿರೆ ಮಾತ್ರ. ಉದಾ:'ಕೆ' ('ಕ್' + 'ಎ') ನಾವ್ಗೆ 'ಕ್'ನ ಅಸ್ತಿತ್ವ ಗೊತ್ತಾದು. ಈ ಕಾರಣದಿಂದಾಗಿಯೇ ವರ್ಗಾಕ್ಷರಗಳ ತಲೆಗೆ, ಆಕಾರದ ತಲೆಕಟ್ಟ್‌ನ ಕುರ್ದ್ಸಿಯೇ ಬರಿದು ಬಳಕೆಗೆ ಬಂದುಟು. 'ಬ'ಂತೇಳ್ದು ಮಾತ್ರ ಆ ಕಾರದ ತಲೆಕಟ್ಟ ಇಲ್ಲದೆನೇ ಬಳಕೆಯಾದೆ. ಜ, ಞ, ಣ, ಲ ಗಳೂ ಹಾಂಗೆನೇ. ಪ್ರಪಂಚಎಲಿ ಇಂದ್ ಎಷ್ಟೋ ಬಾಸೆಗ ಒಳೊ. ಪ್ರತಿಯೊಂದು ಪಂಗಡದ ಆದಿ ಮಾನವಎರೂ ತಮ್ಮ ವ್ಯವಹಾರಕ್ಕಾಗಿ ತಮ್ಮದೇ ಒಂದು ಬಾಸೆ ಬೇಕುಂತ, ಈ ವಿಷಯಎಲಿ ತಾನ್ ಇನ್ನೊಬ್ಬನ ಹಂಗಿಗ ಆಗಿರಿಕಿಲೆಂತೇಳುವ ಸ್ವಾಭಿಮಾನ ತುಂಬಿದ್ದರ್‌ಂದಳೇ, ಅವರ್‌ಂದ ಮತ್ತೆನ ಅವರ ವಂಶಸ್ಥರಿಗೆ ಸ್ವತಂತ್ರವಾದ ಮಾತ್‌ನ ಅಂದರೆ **'ಬಾಸೆ'** ನ ಉಂಟು ಮಾಡಿ ಹೋದೊ, ಇದಿಕೆ ಅವು ಎಷ್ಟ್ ಕಾಲ ಶ್ರಮ ಪಟ್ಟೊಳೊಂತ ಹೇಳಿಕೆ ಸಾಧ್ಯ ಇಲ್ಲೇ. ಎಷ್ಟೋ ಶತಮಾನಗಳ ಕಾಲ ಪೇಚಾಡಿರೊಕುಂತ ಹೇಳುದರ್ಲಿ ಸೊಂಸಯ ಇಲ್ಲೆ.

ಇಂದ್‌ನ ಭಾಷೆಗಳ ಪರಿಸ್ಥಿತಿನ ಪರಿಶೀಲಿಸಿದರೆ, ಇಂಗ್ಲೆಂಡ್‌ಲಿ ಇಂಗ್ಲಿಷ್; ಅದರ್‌ಂದ ಹಣ್ಣ ದೂರದ ಫ್ರಾನ್ಸ್‌ಲಿ ಫ್ರೆಂಚ್, ಅದರ್‌ಂದ ಹಣ್ಣ ದೂರದ ಜರ್ಮನಲಿ ಜರ್ಮನ್, ಅದ್‌ಕ್ಕಿಂತ ಇನ್ನ್ ಹಣ್ಣ ದೂರದ ರಷ್ಯಲಿ ರಷ್ಯನ್, ರಷ್ಯದ ಒಳೆಗೆಯೇ ಬೇರೆ ಬೇರೆ ಕಡೆಗಳ್ಲಿ ಬೇರೆ ಬೇರೆ ಬಾಸೆಗ ಹೀಂಗೆ ಎಷ್ಟೆಷ್ಟೋ ಬಾಸೆಗ ಚಾಲ್ತಿಲಿರುದು ಕಂಡದೆ. ಅನೇಕ ಬಾಸೆಗಳಿಗೆ ಲಿಪಿ ಇಲ್ಲೆ ಇನ್ನ್ ಅಮೇರಿಕಾ ಖಂಡಎಲಿ, ಆಫ್ರಿಕಾ ಖಂಡಎಲಿ ಹಾಂಗೇ ನಾವು ಪೂರ್ವಕೆ ಬಂದರೆ ಏಷ್ಯಾ ಖಂಡಎಲಿ ಲೆಕ್ಕವಿಲ್ಲದಷ್ಟ್ ಬಾಸೆಗಳ ಕಾಣಎಕ್.

ಈ ಎಲ್ಲಾ ಬಾಸೆಗಳ ಉತ್ಪತ್ತಿಗೆ ಕಾರಣರಾದ ಮೂಲ ಪುರುಷಎರ್ ಎಷ್ಟ್ ಜೆನ ಇದ್ದಿರುವೊ, ಅವೆಲ್ಲ ಎಷ್ಟ್ ಕಾಲ ಪೇಚಾಡಿ ಈ ಬಾಸೆಗಳ ಉಂಟು ಮಾಡಿರುವೊಂದ್ ಒಂದು ಕ್ಷಣ ಆಲೋಚಿಸಿರೆ ನಿಜವಾಗಿ ಆಶ್ಚರ್ಯ ಆದೆ. ಇವುಗಳ್ಲಿ ಹಲೊವು ಬಾಸೆಗಳ ಕೇವಲ ತಮ್ಮ ನಿತ್ಯ ವ್ಯವಹಾರಕ್ಕೆ ಮಾತ್ರವಲ್ಲದೆ ಸಾಂಸ್ಕೃತಿಕವಾಗಿ, ಮೇಲ್ಮೆನ ಸಾಧ್‌ಸಿಕೆ ಆಗಿಯೂ ಬಳಸಿಕಂಡೊ, ಬಾಸೆ, ಮಾತಾಡ್ಡ ಕೂಡ್ಲೆ ಕಾಣದಾದೆ. ಅದರ ಶಾಶ್ವತ ಮಾಡೊಕುಂತ ಪ್ರಯತ್ನ ಪಟ್ಟ್, ಅವ್ಕವ್ಕೆ ತಕ್ಕದಾದ ಲಿಪಿಗಳ ಮೊಂಯಿಸ ಕಂಡು ಹಿಡ್ತ್, ನಮ್ಮ ಭಾರತ ದೇಶಲಿ, ಪೂರ್ವಎಲಿ ಭಾರತೀಯರ ಧರ್ಮ ಶಾಸ್ತ್ರವಾದ ವೇದ ಮಂತ್ರಗಳ ಬರಿಯಕೆ ಲಿಪಿ ಇಲ್ಲದಿರ್ಕನ ಆ ಎಲ್ಲ ಮಂತ್ರಗಳ್ನೂ ಬಾಯೆ ಪಾಠ ಮಾಡಿಕಎಂಡೇ ಶತಶತಮಾನದ ವರೆಗೆ ಒಳ್ಸಿಕಎಂಡೇ ಬಂದೊ. ಮಂತ್ರಗಳ ಉಚ್ಚರ್ಸಿಕಾಕನ ಎಲ್ಲ್ಯಾರ್ ತೊಪ್ಪು ಬಂದ್ ಬುಟ್ಟರೆ ಅನರ್ಥ ಆಗಿಬುಡುದು. ಹಾಂಗೆ ಆಗದ ಹಾಂಗೆ ಅದಿಕೆ ಉಪಾಯ ಹುಡ್ಕಿಡೊ ಅನುಲೋಮ ವಿಲೋಮ ಕ್ರಮಲಿ (x-y;y-x) ಪಾಠಗಳ ಹೇಳಿಕೆ ಏರ್ಪಡ್ಸಿದೊ. ಇದಿಕೆ ಗಣಪಾಠಂತ ಹೆಸ್‌ರ್. ಹೀಂಗೆ ಪದಗಳ ಸ್ವರೂಪಲಿ ಯಾವ ಕಾಲಕೂ ಯಾವ ವ್ಯತ್ಯಾಸವೂ ಬಾರದಾಂಗೆ ಆತ್. ಇದೊಂದು ನಮ್ಮ

ಪೂರ್ವಜರ ಅದ್ಭುತ ಸಾಧನೆ. ಇಂಥ ಬುದ್ಧಿವಂತರಾದ ಇವ್ಕೆ ಬಹಳ ಸಂಕುಚಿತವಾದ ದೃಷ್ಟಿ ಇತ್ತ್. ತಮ್ಮ ಅದ್ಭುತವಾದ ಜ್ಞಾನ ಸಂಪೊತ್ತ್ ತಮ್ಮ ವೈದಿಕ ವರ್ಗದೊವ್ಕೆ ಹೊರ್ತು ಬೇರೆವ್ಕೆ ಸೇರಿಕೆ ಆಗಬ್‌ದ್‌ಂತ ಒಂದು ಹಟ. ವರ್ಣಾಶ್ರಮ ಭೇದ ಆಗ ಪ್ರಬಲವಾಗಿತ್ತ್. ಮೇಲ್, ಕೀಳ್‌ಂತ ಹೇಳುವ ಜಾತಿಭೇದ ತೀವ್ರವಾಗಿತ್ತ್. ಹಾಂಗೆ ಈ ವೇದ ಮಂತ್ರಗಳ ಓದುದರ ಒಬ್ಬ ಶೂದ್ರ ಎಲ್ಲಿಯಾರ್ ಕೇಳಿಬುಟ್ಟರೆ, ಅವನ ಕೆಬಿಗೆ ಕಾದ ಸೀಸನ ಹೊಯ್ಯೊಕುಂತ್ತೇಳ್ವ ಶಿಕ್ಷೆಂತ ನಿಯಮ ಮಾಡ್ಡೊ. ಹೀಂಗೆ ಬಹುಸಂಖ್ಯಾತರ ಜ್ಞಾನ ವಿಕಾಸಕ್ಕೆ ಅವಕಾಶ ಕೊಡದ ಕಾರಣ ಒಗ್ಗಟ್ಟ್ ಇಲ್ಲದೆ, ನಮ್ಮ ದೇಶ ಸುಲಭವಾಗಿ ಅನ್ಯರ ಆಕ್ರಮಣಕ್ಕೆ ಗುರಿಯಾತ್. ಭಾರತ ಕಂದಾಚಾರದ ದೇಶ; ಸಂಸ್ಕೃತಿ ಇಲ್ಲದ ದೇಶ. ಮೂಢನಂಬಿಕೆಗಳ ದೇಶಂತ ಪರದೇಶೀಯರ ನಿಂದೆಗೂ ಗುರಿಯಾತ್.

ಕಬ್‌ಬ್ಬಿಣದ ಪೆಟಿಗೆನೊಳಗೆ ಬೀಗ ಹಾಕಿ ಇಸಿದ ಅಮೂಲ್ಯ ರತ್ನದಾಂಗಿದ್ದ ವೇದಗಳ ಜರ್ಮನಿನ ವಿದ್ವಾಂಸ ಮ್ಯಾಕ್ಸ್ ಮುಲ್ಲರ್‌ಂತೇಳಂವ ಇಪ್ಪೊತ್ತ್ ವೊರ್ಸ ಅಧ್ಯಯನ ಮಾಡಿ ಅದರೆಲ್ಲ ಎಲ್ಲೊವು ತಿಳಿವಾಂಗೆ ಪೊರ್ಲು ಸಂಪಾದಿಸಿ ಇಂಗ್ಲೀಷಿಲಿ ಅಚ್ಚಿ ಮಾಡಿ ಪ್ರಪಂಚದೆದ್‌ರ್ ತೆರ್ದ್ ಇಸಿತ್. ಇದಾದ ಹಜ್ಞಾ ಸಮಯಲಿ ಪಾಶ್ಚಾತ್ಯ ಪಂಡಿತರಿಗೆ ಸಂಸ್ಕೃತದ ಪರಿಚಯ, ಅದರ್ಲಿರುವ ಸಾಹಿತ್ಯ, ಸಂಸ್ಕೃತಿನ ಪರಿಚಯ ಆಗಿ, ಇಷ್ಟರವರೆಗೆ ತಾವು ಪಾಶ್ಚಿಮಾತ್ಯರೇ ಮೇಲಾಗಿದ್ದೊವುಂತೇಳ್ವ ಭ್ರಮೆ ಇಲ್ಲದಾತ್. ಭಾರತದ ಮೇಲೆ ಗೌರವ ಉಂಟಾತ್. ಕ್ರೈಸ್ತ ಮಿಷನರಿಗ, ಇಲ್ಲಿನವರ ಮತಾಂತರ ಮಾಡಿಕೆ ಮಾಡ್‌ತ್ತಿದ್ದ ಅಟ್ಟಹಾಸಗ ಎಲ್ಲ ವಿವೇಕಾನಂದರಂಥ ವಿದ್ವನ್ಮಣಿಗಳ ಗುಡುಗು-ಮಿಂಚ್‌ನಂತಹ ವಾಗ್ಝರಿಗಳೆದ್‌ರ್ ಸದ್ದ್ ಸುದ್ದಿಲ್ಲದೆ ಬೀಲ ಮೊಡ್ಚಿ ಕಂಡೊ. ಕ್ರಿಸ್ತ ಪೂರ್ವ ನಾಲ್ಕನೇ ಶತಮಾನಲೇ ಪಾಣಿನಿ ಸಂಸ್ಕೃತಕ್ಕೆ ಬರ್ದ ವ್ಯಾಕರಣದಂತಹ ಗ್ರಂಥ ಪ್ರಪಂಚದ ಯಾವ ಭಾಷೆಲೂ ಇದುವರೆಗೆ ಆತಲೆಂತ ಹೇಳ್‌ಕನ ಭಾರತದ ಹಿರಿಮೆ ಎಷ್ಟ್ ದೊಡ್ಡಬ್‌ದ್‌ಂತ ಎಲ್ಲೊವೂ ಕೊಂಡಾಡುವಾಂಗೆ ಆತ್.

ನಮ್ಮ ದೇಸಬ್‌ಲಿ ಸಂಸ್ಕೃತ, ಸಾಹಿತ್ಯ, ಶಾಸ್ತ್ರ, ಸಂಸ್ಕೃತಿ ಸಂಪನ್ನವಾದ ಪ್ರಧಾನ ಭಾಷೆಯಾಗಿ ಭಾರತದ ಎಲ್ಲ ಕಡೆಗೆ ಮಾನ್ಯವಾಗಿತ್ತ್. ಪ್ರತಿಯೊಂದು ರಾಜಾಸ್ಥಾನಲಿಯೂ ಅದಿಕ್ಕೆ ರಾಜಭಾಷೆಂತ ಮನ್ನಣೆ ಸಲ್‌ತ್ತಿತ್ತ್. ಇದರ ಹಿಂದೆಕಬ್‌ಂಡ್ ಪ್ರಾಕೃತ, ಪಾಳಿ, ಅಪಭ್ರಂಶಂತೇಳ್ವ ಬಾಸೆಗಬ್‌ಲೂ ತಕ್ಕ ಮಟ್ಟ್‌ನ ಪ್ರಚಾರ ಪಡ್ಡಿದ್ದೊ. ಇವೆಲ್ಲ ಒಂದೇ ಕುಟುಂಬ ವರ್ಗಕ್ಕೆ ಸೇರ್ದ ಬಾಸೆಗ. ಹಾಂಗೆ ನಮ್ಮ ದೇಶದ ಪ್ರಾಚೀನ ಪಂಡಿತರ್ ಸಂಸ್ಕೃತ, ಪ್ರಾಕೃತ, ಪಾಳಿ, ಅಪಭ್ರಂಶ ಅಥವಾ ಪೈಶಾಚಿಕಂತೇಳುವ ಮೂರುವರೆ ಭಾಷೆಗ ನಮ್ಮ ದೇಸದ ಬಾಸೆಗಂತ ಪ್ರಚಾರಲಿ ಒಳೊಂತ ಹೇಳಿಯೊಳೊ. ಕ್ರಿಸ್ತ ಶಕದ ಆದಿಭಾಗಂದಳೇ, ದ್ರಾವಿಡ ವರ್ಗಕ್ಕೆ ಸೇರ್ದ ತಮಿಳು, ಕನ್ನಡ, ತೆಲುಗು, ಮಲೆಯಾಳಂತ ಹೇಳುವ ಸಾಹಿತ್ಯ ಸಂಪನ್ನ ಬಾಸೆಗ ಇದ್ದರೂ ವೈದಿಕ ಪಂಡಿತರ್, ಅವರೆಲ್ಲ ಅಪಭ್ರಂಶ ಅಥವಾ ಪೈಶಾಚಿಕ ವರ್ಗಕ್ಕೆ ಸಾರಾಸಗಟಾಗಿ ಸೇರ್ಸಿ ಅವರೆಲ್ಲ ಕ್ಷುಲ್ಲಕ ಬಾಸೆಗಂತೇ ಪರಿಗಣಿಸಿ ಅವರ ಅರೆ-ಅಂದರೆ ಅರ್ಧಂತ ಲೆಕ್ಕ ಹಾಕಿದೊ. ಹೀಂಗೆ ಸಂಸ್ಕೃತ

ಪಂಡಿತರ್‌ಂದ ದೇಶ್ಯ ಭಾಷೆಗಳಿಗೆ, ಯಾವ ಪ್ರೋತ್ಸಾಹವಾಗಲೀ ಗೌರವವಾಗಲೀ ಸಂದಿತ್‌ಲೆ.

ತುಂಬ ಪ್ರಾಚೀನತೆನ ಹೊಂದಿ 'ಕ್ಲಾಸಿಕಲ್' ವರ್ಗಂತ ಪ್ರಚಾರಕ್ಕೆ ಬಂದ ಬಾಸೆಗ ಭಾರತಲಿ–ಸಂಸ್ಕೃತದ ಹಾಂಗೆ ಗ್ರೀಕ್ ಮತ್ತೆ ಲ್ಯಾಟಿನ್ ಇವು ಯುರೋಪುಲಿ ಸ್ಥಳೀಯ ಬಾಸೆಗಳ ತಲೆಮೆಟ್ಟಿನಿತ್ತೊ. ಈಗ ಪ್ರಪಂಚದ ಬಾಸೆಂತ ಉನ್ನತಿಗೆ ಬಂದ ಇಂಗ್ಲಿಷ್ ಬಾಸೆ ಕೂಡ ಕ್ರಿ.ಶ.12–13ನೇ ಶತಮಾನಗಳ ಕಾಲಲಿ ಕ್ಷುಲ್ಲಕ ಬಾಸೆಗಳ ಸಾಲಿಗೇ ಸೇರಿತ್ತ್. ಚರ್ಚ್‌ನ ಭಾಷೆಗಾಗಿ ಮಾನ್ಯತೆ ಪಡ್ದ ಗ್ರೀಕ್ ಮತ್ತೆ ಲ್ಯಾಟಿನ್, ಸಂಸ್ಕೃತ ಭಾರತಲಿದ್ದಾಂಗೆ ಪವಿತ್ರ ಭಾಷೆಗ ಆಗಿದ್ದೊ. ಮತ್ತೆ ಯರೋಪುಲಿ ಔದ್ಯೋಗಿಕ ಕ್ರಾಂತಿ, ಹೊಸ ಹೊಸ ಸಂಶೋಧನೆಗ ನಡ್ದೊ. ಕಾರ್ಮಿಕರ ಜೀವನ ಮಟ್ಟ ಸುಧಾರಿಸಿ ಅವರ ಪ್ರಭಾವ ಹೆಚ್ಚಾತ್. ಸ್ಥಳೀಯ ಭಾಷೆಗಳಿಗೂ ಪ್ರಾಶಸ್ತ್ಯ ಭಾತ್. ಇಂಗ್ಲೆಂಡ್‌ಲಿ ಕೈಗಾರಿಕಾ ಕ್ರಾಂತಿ ನಾನಾ ರೀತಿನ ಸಂಶೋಧನೆಗ ವ್ಯಾಪಾರ ವ್ಯವಹಾರಗಳಿಗಾಗಿ ಪ್ರಂಪಚದ ಬೇರೆ ಬೇರೆ ದೇಶಗಳಿಗೆ ಸಂಚಾರ, ವಸಾಹತುಗಳ ಸ್ಥಾಪನೆ ಮುಂತಾದ ಕಾರಣಗಳ್‌ಂದ ಮತ್ತೆ ಆ ಜನರ ಸ್ವಾಭಿಮಾನದ ಪರಮೋತ್ಕರ್ಷತೆಂದ ಇಂಗ್ಲಿಷಿಗೆ ಪ್ರಾಧಾನ್ಯ ಬಾತ್. ಚರ್ಚ್‌ನ ಹಿಡಿತ ಮತ್ತೆ ಪ್ರಭಾವ ತೊಪ್ಪಿತ್. ಎಷ್ಟೆಷ್ಟೊ ಕವಿಗ ಮತ್ತು ಬರಹಗಾರ್ರ್, ಅಪೂರ್ವವಾದ ಕಾವ್ಯ, ಕಥೆ, ಕಾದಂಬರಿ, ನಾಟಕಗಳ, ಚರಿತ್ರೆಗಳ ಬರ್ದ್, ಭಾಸೆನ ಅಭಿವೃದ್ಧಿ ಮಾಡ್ದೊ.

ನಮ್ಮ ಜೆನದ(ಗೌಡರ) ಮಾತಿಗೂ ಅರೆ ಬಾಸೆಂತ ಒಂದು ಹೆಸ್‌ರ್ ಯಾರ್‌ಂದೊಳೊ ಅಂಟಿಟು. ಭಾರತದ ಬಾಸೆಗಳ ವಿಸಯಲಿ ದೇಸಬಾಸೆಗ ಎಷ್ಟೇ ಮೇಲ್ಮಟ್ಟಲಿರಲಿ ವೈದಿಕರ ಕಾಮಾಲೆ ನೋಟಕ್ಕೆ ಅವೆಲ್ಲ 'ಅರೆ' ಅಂದರೆ ಪೂರ್ಣವಲ್ಲದ ಬಾಸೆಗಂತೇಳುವ ಅವಗಣನೆಗೇ ಸಿಕ್ಕಿದೊ. ನಮ್ಮ 'ಅರೆ' ಬಾಸೆ'ನ 'ಗೌಡ ಕನ್ನಡ'ಂತ ಕರ್ದಿದ್ದರೂ, ನಮ್ಮ ಪಂಗಡವೇ ಆದ ಹತ್ತ್ ಕುಟುಂಬ ಹದ್‌ನೆಂಟ್ ಗೋತ್ರಕ್ಕೆ ಸೇರ್ದ ಅರ್ಧಾಂಶ ಜೆನ ತುಳು ತಾಯ್ನುಡಿಯಾಗಿರೊವು ಒಳೊಂತೇಳುವ ಕಾರಣದಿಂದ 'ಗೌಡ ಕನ್ನಡಂ'ತೇಳುವ ಹೆಸ್‌ರ್ ಇದಿಕೆ ಒಪ್ಪುದುಲೆ. ಈಗ ಅರೆಬಾಸೆಂತೇಳುದ್ಯೆಕೆ ಸರ್ಕಾರದ ಶ್ರೀಮುದ್ರೆ ಬಿದ್ದ್, ಒಂದು ಎಕಾಡೆಮಿನೂ ಆಗಿರುದರ್‌ಂದ ಆ ಹೆಸ್‌ರ್‌ನೇ ಬಳ್ಸುದು ಕಡ್ಡಾಯ ಆದೆ.

ಇಷ್ಟಾದ ಮೇಲೆ ಈ ಬಾಸೆಲಿ ಏನ್ ಕೆಲ್ಸಗ ಆಕುಂತೇಳ್ದರ ನೋಡೊಕು:

1. ಈ ಬಾಸೆನ ಮಾತಡ್‌ತಿದ್ದ ಹಿರಿಯೊವು ತಮ್ಮ ಸಂತತಿನವ್ಕೆ ಒಳ್ಸಿ ಹೋದ ಸಂಪೊತ್ತ್ ಈ ನಮ್ಮ ತಾಯ್ನುಡಿ. ಒಂದು ಶಬ್ದ ಕಾಣದಾದರೆ ಅದರ ಹಿಂದೆ ಪಡಿಯಕಾಗಲಿ, ಒಂದು ಹೊಸ ಶಬ್ದನ ಉಂಟು ಮಾಡಿಕೆ ಆಗಲಿ ನಮ್ಮಂದಾಕಿಲ್ಲೆ. ಆದರ್‌ಂದಾಗಿ ಈ ಅಮೂಲ್ಯ ಸಂಪೊತ್ತ್ ಅದ್ ಇದ್ದ ಹಾಂಗೇ ನಮ್ಮ ಮಕ್ಕಳಿಗೆ ಸಿಕ್ಕುವಾಂಗೆ ಆಕು. ಆದ್ದರಿಂದ ತಮ್ಮ ಮಕ್ಕಳೊಟ್ಟಿಗೆ ಈ ತಾಯ್ನುಡಿಲೇ ಅಯ್ಯೆಪ್ಪ

ಹಾಂಗೂ ಕುಟುಂಬ ಸದಸ್ಯರ್ ವ್ಯವಹರ್ಲೊಕು. ಬೇರೆ ಬಾಸೆನ ಉಪಯೋಗ್ಸುದು ಅಪರಾಧ.

2. ಇದರ ತಾಯ್ನುಡಿಯಾಗಿ ಎಷ್ಟ್ ಜನ ಬಳಸುವೆಂತೇಳ್ವ Survey ಮುಂದೆ ಮಾಡೊಕು.
3. ಈ ನುಡಿನ ಶಬ್ದಕೋಶ ಒಂದರ ರಚನೆ ತುರ್ತಾಗಿ ಆಕು.
4. ಸೃಜನಶೀಲ, ಶಾಸ್ತ್ರೀಯ, ಗ್ರಂಥಗಳ ರಚನೆ ಆಕು.
5. ಲಲಿತ ಕಲೆಗಳ ರಚನೆ ಆಕು. (ನೃತ್ಯ, ನಾಟಕಗ, ಸಂಗೀತ)
6. ಕನ್ನಡ ಲಿಪಿ ಕೊಂಕ್‌ಣಿ ಬಾಸೆನ ಬರಿಯಕೆ, ಕೊಡ್‌ಗ್ ಬಾಸೆನ ಬರಿಯಕೆ, ತುಳುಬಾಸೆನ ಬರಿಯಕೆ ಉಪಯೋಗ ಆದೆ. ಹೀಂಗೆ ಬೇರೆ ಬಾಸೆಗಳ ಬರಿಯಕನ ಆಯಾ ಬಾಸೆಗಳ ಎಲ್ಲ ಧ್ವನಿಗಳ ಕನ್ನಡ ಲಿಪಿಲಿ ತೋರ್ಸ್ಲಿಕೆ ಸಾಧ್ಯ ಆದುಲೆ. ಆಗ ಕೆಲೊವು ಹೊಸ ಚಿಹ್ನೆಗಳ ಮಾಡಿಕಅಂಡ್ ಬರ್ದ್ ಸುಧಾರ್ಸುವೆ. ತುಳುನ ಪದಕೋಶ ತಯಾರ್ಸ್ಲಕನ ಹೀಂಗೆ ಮಾಡಿಕಂಡೊಳೊ. ನಮ್ಮ ಅರೆಬಾಸೆನ ಕನ್ನಡ ಲಿಪಿಲಿ ಬರಿಯಕೆ ಹೊರ್ಡುಕನೂ ಈ ಸಮಸ್ಯೆ ಎದ್‌ರಾದೆ. ಸುರು ಸುರುಗೆ ಬರಿಯಕೆ ಹೊರ್ಡೊವು ಒಬ್ಬೊಬ್ಬ ಒಂದೊಂದು ತರ ಬರಿದು ಅನಿವಾರ್ಯ. ಹಳ್ಣ ಸಮಿಯ ಕಅಳಿಯಕನ ಈ ಸಮಸ್ಯೆ ಏನ್‌ಂದ್ ಎಲ್ಲವರ ಅರಿವುಗೂ ಬಂದ್. ಹೀಂಗೇ ಹೋದರೆ ಅರೆಬಾಸೆ ಇನ್ಯಾದೋ ಬಾಸೆ ಆಗಿ ಬುಡುವ ಅಪಾಯ ಉಂಟಾದು. ಇದಿಕೆ ಪೊರಿಹಾರ ಕಂಡ್ ಹಿಡಿಯೊಕುಂತ ಎಲ್ಲೊವೂ ಆಗ ತಯಾರಾವೊ. ಆವರೆಗೆ ನಾವ್ಗೆ ಹಳ್ಣ ತಾಳ್ಮೆ ಇರೊಕಾದೆ.

ನಮ್ಮ ದೇಶ್ಯ ಭಾಷೆಗಳ ಉದ್ಧಾರಕೆ ವೈದಿಕ ವರ್ಗದವರ್‌ಂದ ಸುರುಗೆ ಯಾವ ಸಹಾಯನೂ ಸಿಕ್ಕಿತ್‌ಲೆ. ಸಂಸ್ಕೃತ ಪದಗಳ ಈ ಭಾಸೆಗಳೊಳಗೆ 'ನೀರಿಳಿಯದ ಗಂಟಲೊಳ್ ಕಡುಬಂ ತುರುಕಿದಂತೆ'ಂತ ಹೇಳ್ದಾಂಗೆ ಹೇರಳವಾಗಿ ತುರುಕಿ, ಈ ಬಾಸೆಗಳ ನಿಜರೂಪವೇ ಮರೆಯಾಗುವ ಹಾಂಗೆ ಮಾಡ್ದೊ. ಎಲ್ಲ ಬಾಸೆಗಳಿಗೂ ಸಂಸ್ಕೃತವೇ ತಾಯಿಂತ ಕೊಚ್ಚಿಕಂಬಕೆ ಸುರುಮಾಡ್ದೊ. ಅಕ್ಷರ ಮಾಲೆಗೆ ಸಂಸ್ಕೃತದೇ ಮಾದ್‌ರಿ. ವ್ಯಾಕರಣ, ಅಲಂಕಾರ, ಕಾವ್ಯ ಮೀಮಾಂಸೆ, ಎಲ್ಲದಿಕೂ ಸಂಸ್ಕೃತವೇ ಮಾದ್‌ರಿ. ಸಂಸ್ಕೃತ ನಾಟಕಗಳ್ಲಿ ಬಾವ ಸ್ತ್ರೀ ಪಾತ್ರಗಳಿಗಾಗಲಿ, ಸಮಾಜದ ಕೆಳಸ್ತರದ ಶೂದ್ರ ವ್ಯಕ್ತಿಗಳಿಗಾಗಲಿ, ಸಂಸ್ಕೃತಲಿ ಸಂಭಾಷಣೆ ನಡ್ಸುವ ಅವಕಾಶ ಇಲ್ಲೆ. ಅವೆಲ್ಲ ಪ್ರಾಕೃತ ಬಾಸೆನ ಮಾತ್ರ ಬಳಸೊಕು.

ದಕ್ಷಿಣ ಭಾರತದ ದ್ರಾವಿಡ ಭಾಸೆಗಳ ಗುಂಪಿಗೆ ಸೇರ್ದ ಬಾಸೆಗಳ್ಲಿ ಸಾಹಿತ್ಯರಚನೆಗೆ ಕೈಹಾಕಿದೊವು ವೈದಿಕೇತರ ವರ್ಗದ ಜೈನ, ಬೌದ್ಧ ಮತಕ್ಕೆ ಸೇರ್ದ ಕವಿಗಳೇ. ಬೌದ್ಧ ಮತಕ್ಕೆ ಸೇರ್ದ ಗ್ರಂಥರಚನೆ ಸುರುಗೆ ತಮಿಳು ಬಾಸೆಲಿ ನಡ್ದಅದ್ ಕಂಡದೆ. ಕನ್ನಡ ಬಾಸೆಲಿ ಜೈನರೇ ಆದಿ ಪುರುಷರ್ ಆದೊ. ಉತ್ತರ ಭಾರತಲಿ ಕ್ಷಾಮ ಬಂದಿರ್ಕನ, ಭದ್ರ ಬಾಹು ಋಷಿ ತನ್ನ ಶಿಷ್ಯ ಚಂದ್ರಗುಪ್ತನೊಟ್ಟಿಗೆ ಇನ್ನಷ್ಟ್ ಹಿಂಬಾಲಕರ ಸೇರ್ಸಿಕಂಡ್,

ಶ್ರವಣ ಬೆಳ್ಗೊಳಕ್ಕೆ ವಲಸೆ ಬಂದ್ ನೆಲ್ಸಿದೊ. ಶ್ರವಣ ಬೆಳ್ಗೊಳ ದೊಡ್ಡ ಜೈನ ಕೇಂದ್ರಂತ ಆತ್. ಕರ್ನಾಟಕದ ರಾಜೆರ್, ತಾವು ವೈದಿಕರಾಗಿದ್ದರೂ ಜೈನ ಕವಿ, ಪಂಡಿತರಿಗೆ ಆಶ್ರಯ ಕೊಡುವ ಔದಾರ್ಯನ ತೋರ್ಸಿದೊ. ಅದಿಕೆ ಪ್ರತಿಯಾಗಿ ಈ ಕವಿಗಳೂ, ತಾವು ಜೈನ ಮತದೊವಾದರೂ ವೈದಿಕ ಕಥೆ ಪುರಾಣಗಳ, ಕಾವ್ಯರಚನೆ ಮಾಡಿ ತಮ್ಮ ಆಶ್ರಯದಾತ ರಾಜೆರಿಗೆ ಅರ್ಪಿಸಿದೊ. ಶ್ರವಣ ಬೆಳ್ಗೊಳಲಿ ಚಾವುಂಡರಾಯ ಸುಂದರ ಗೋಮಟ ವಿಗ್ರಹದ ನಿರ್ಮಾಣ ಮಾಡ್ಸಿತ್. ಚಾಳುಕ್ಯ ತೈಲಪನ ಆ ಸ್ಥಾನಕ್ಕೆ ಸೇರ್ದ ಪೊನ್ನ ಕವಿ. ಶಾಂತಿಪುರಾಣಂತೇಳ್ವ ಜೈನ ತೀರ್ಥಂಕರನ ಪುರಾಣ ಕಾವ್ಯ ಬರ್ತ್. ಅದರ ಆ ಕಾಲಲಿದ್ದ ದಾನ ಚಿಂತಾಮಣಿ ಅತ್ತಿಮಬ್ಬೆ ಒಂದು ಸಾವಿರ ಪ್ರತಿ ಮಾಡ್ಸಿ ಪುಸ್ತಕದಾನ ಮಾಡ್ಸಿತ್. ಹೀಂಗೆ ಸಾಹಿತ್ಯಕ, ಸಾಂಸ್ಕೃತಿಕ ಚಟುವಟಿಕೆ ಉದಾತ್ತ ಭಾವನೆಂದ ಕರ್ನಾಟಕಲಿ ನಡ್ದ್ ಕನ್ನಡ ಬಾಷೆ, ಸಾಹಿತ್ಯಗಳ ಅಭಿವೃದ್ಧಿ ಆತ್. ಈ ಎಲ್ಲಾ ಕಾವ್ಯ, ಸಾಹಿತ್ಯ ಕೃತಿಗಳ್ಲಿ ಹೇರಳವಾದ ಸಂಸ್ಕೃತ ಪದಗಳ ಬಳಕೆ ಆತಿತ್ತ್. ಒಂದು ಬಾಸೆಲಿ ಶಬ್ದಗಳ ಕೊರತೆ ಇರ್‌ಕನ ಹೀಂಗೆ ಎರವಲು ಪಡಿದು ಎಲ್ಲ ಕಡೆಲೂ ಇರುವಂತದೇ. ಎಷ್ಟೇ ಶ್ರೀಮಂತ ಬಾಸೆ ಆದರೂ ಎರವಲು ಪದಗ ಅದಿಕೆ ಅನಿವಾರ್ಯವಾಗಿ ಸೇರುವೆ. ಸಂಸ್ಕೃತಕ್ಕೂ ಕನ್ನಡಂದ ಎಷ್ಟೋ ಪದಗ ಸೇರ್‍ಯೊಳೊ. ಬರ ಬರುತ್ತ ಕೆಲೊವು ಕವಿಗ ತಮ್ಮ ಪಾಂಡಿತ್ಯ ಪ್ರದರ್ಶನ ಮಾಡಿಕೆ ಹೊರ್ಟ್ ಅನಗತ್ಯ ಸಂಸ್ಕೃತ ಪದಗಳ ಕನ್ನಡಲಿ ಸೇರ್ಸಿಕೆ ಸುರು ಮಾಡ್ದೊ. ಒಂದು ಸಂಸ್ಕೃತ ಮತ್ತೊಂದು ಕನ್ನಡ ಪದ ಸೇರಿ ಸಮಾಸ ಮಾಡ್ದು ಅರಿಸಮಾಸ ದೋಷ; ಹಾಂಗೆ ಮಾಡ್ದು ತೊಪ್ಪುಂತ ವೈಯಾಕರಣರ್ ಹಾಕಿದ ನಿಷೇಧ ಇಪ್ಪತ್ತನೇ ಶತಮಾನದ ಕಡೆವರೆಗೂ ಪಾಲನೆಲಿ ಇತ್ತ್. ಪ್ರತಿಕಾ ಮತ್ತೆ ಬೇರೆ ಪ್ರಚಾರ ಮಾಧ್ಯಮಗಳ್ಲಿ ಈಗೀಗ ಬಾಸೆನ ತೊಪ್ಪು ತಡೆಗ ಹೆಚ್ಚಿಕಣಂಡೇ ಬಂದವೆ. ಸದ್ಬಳಕೆ, ದುರ್ಬಳಕೆ ಮುಂತಾದ ಪದಗಳ ಪ್ರಯೋಗ ಮಿತಿಯಿಲ್ಲದ ಆದೆ. ಆಡಂಬರ ಪ್ರದರ್ಶನದ ಅತಿರೇಕ ಹದತೊಪ್ಪುಕನ ನಮ್ಮ ಪ್ರಾಜ್ಞರ್ ಸಿಡ್‌ದೆದ್ದೊ. ನೀವ್ಗೆ ಸಂಸ್ಕೃತಲೆ ಹೇಳೊಕುಂತಿದ್ದರೆ ಸಂಸ್ಕೃತಲೇ ಬರಿನಿ. ಎಣ್ಣೆ ಮತ್ತೆ ತುಪ್ಪನ ಬೆರ್ಸಿದಾಂಗೆ, ಮೆಣ್ಸ್‌ನೂ ಮುತ್ತ್‌ನೂ ಕೋದಾಂಗೆ ಕನ್ನಡ–ಸಂಸ್ಕೃತದ ಬೆರಕೆ ಮಾಡ್ಬಡಿಂತ ಕಠೋರವಾಗಿಯೇ ಹೇಳಿಯೊಳೊ. ಆಂಡಯ್ಯಂತೇಳ್ವ ಕವಿ ಯಾವ ಸಂಸ್ಕೃತ ಪದಗಳ್ನೂ ಬೆರ್ಸದೆ ಅಚ್ಚಗನ್ನಡಲೇ ಕಾವ್ಯ ಬರ್ದ್ ತೋರ್ಸಿನೆಂತ ಕಬ್ಬಿಗರ ಕಾವಂತ ಒಂದು ಕಾವ್ಯನ ಬರ್ದ್ ತೋರ್ಸಿತ್. ಸಂಸ್ಕೃತ ಶಬ್ದಗಳ ಬಳಸದಿದ್ದರೂ ತದ್ಭವ ಪದಗಳ ಹೇರಳ ಬಳಸಿಟು. ಇವು ಕೂಡ ಇಂಡೋ ಆರ್ಯನ್ ಗುಂಪುಗೇ ಸಂಸ್ಕೃತದಾಂಗೆ ಸೇರ್ದವೇ ಆದವೆ. ಆದ್ದರ್‌ಂದ ಅಚ್ಚಗನ್ನಡಂತ ಇವುಗಳ ಸೇರ್ಸಿಕಂಡ್ ಹೇಳ್ದು ಸಱಿ ಅಲ್ಲಂತ ಕಂಡದೆ. ಈ ಅಭಿಪ್ರಾಯನ ಅನುಸರ್ಸಿದ। ಕೊಳಂಬೆ ಪುಟ್ಟಣ್ಣ ಗೌಡರ್, ಇಪ್ಪತ್ತನೆಯ ಶತಮಾನದ ಉತ್ತರಾರ್ಧಲಿ ಕಾಲೂರ ಚೆಲುವೆಂತೇಳ್ವ ಕಾವ್ಯನ ತದ್ಭವ ಪದಗಳ್ನೂ ಬೆರ್ಸದೆ ಬರ್ದ್ ಆಂಡಯ್ಯಂದ ಒಂದು ಹೆಜ್ಜೆ ಮುಂದೆ ಇಸಿಯೊಳೊ.

ವೈಜ್ಞಾನಿಕವಾಗಿ ಭಾಷೆ ಕೇವಲ ಯಂತ್ರದಾಂಗೆ ಒಂದು ಸಾಧನ ಮಾತ್ರಂತ

ಹೇಳಿರೂ ನಮ್ಮ ಪೂರ್ವಿಕರ್ ಆಧ್ಯಾತ್ಮ ನೆಲೆಲಿ ಅದರ ದೈವತ್ವದ ನೆಲೆಗೇರ್ಸಿ ಗೌರವಿಸಿಯೊಳೊ. ತ್ರಿಮೂರ್ತಿಗಳ ಹಾಂಗೆ ಮೂರುಸ್ತ್ರೀ ದೇವತೆಗಳ್ಲಿ ಬಾಸೆಗೆ ಸಂಬಂಧ ಪಟ್ಟ ದೇವಿ ಸರಸ್ವತಿ. ಇದಿಕೆ ವಾಗ್ದೇವಿ, ವೀಣಾಪಾಣಿಂತೆಲ್ಲ ಹೆಸ್‌ರ್. ಶ್ವೇತವಸ್ತ್ರಧಾರಣಿ, ಕಮಲಾಸನೆಂತೆಲ್ಲ ಮಾತ್‌ಲಿ ವರ್ಣಿಸಿಯೊಳೊ. ಚಿತ್ರಲಿ ಬರ್‍ದೊಳೊ, ಕಲ್ಲ್, ಲೋಹಗಳ್ಲಿ ವಿಗ್ರಹಗಳ ನಿರ್ಮಾಣ ಮಾಡಿಯೊಳೊ. ಈ ವರ್ಣನೆಗೆಲ್ಲ ದೇವಭಾಷೆಂತ ಕರ್ಸಿಕಂಡ ಸಂಸ್ಕೃತನ್ನೇ ದೃಷ್ಟಿಲಿಸಿಕಂಡ್ ಹೇಳ್ದ್. ಭಾರತದ ಕವಿ ಯಾವ ಬಾಸೆಲೇ ಕೃತಿರಚನೆ ಮಾಡಿರೂ ಸುರುಗೆ ಹೀಂಗಿರುವ ಸರಸ್ವತಿನ ಬೇಡಿಕಣದೆ ಮುಂದುವರಿದುಲೆ.

ಹನ್ನೆರಡನೇ ಶತಮಾನಕ್ಕೆ ಸೇರ್‍ದ ಎರಡನೇ ನಾಗವರ್ಮಂತೇಳ್ವ ಜೈನ ಕವಿ ಬರ್‍ದ ಕರ್ಣಾಟಕ ಭಾಷಾಭೂಷಣಂತೇಳುವ ವ್ಯಾಕರಣಗ್ರಂಥಲಿ ಎಲ್ಲ ಬಾಸೆಗಳ್ನೂ ಸರಸ್ವತಿಗಂತೇಳಿ ಕತ್ತಲೆನ ಕಳಿವಂಥ ಇವೆಲ್ಲೊವೂ ಪರಮಾತ್ಮನ ಬಾಯೆಂದ ಹೊರ್‍ಟಂತೊವುಂತ ಹೇಳಿಟು. ಅವನ ಈ ಉದಾರ ದೃಷ್ಟಿನ ಮೆಚ್ಚಕಾದೆ.

“ಸರ್ವಜ್ಞಂ ತದಹಂ ವಂದೇ ಪರಂಜ್ಯೋತಿಸ್ತಮೋಪಹಾಂ
ಪ್ರವೃತ್ತಾಯನ್ಮುಖಾದ್ದೇವೀ ಸರ್ವ ಭಾಷಾ ಸರಸ್ವತೀ”

ಹೀಂಗೆ ಎಲ್ಲ ಬಾಸೆಗಳ್ಲಿಯೂ ದೈವತ್ವದ ಗುಣ ಉಟ್ಟುಂತ ತಿಳಿಯೊಕಾದೆ. ಒಂದು ಬಾಸೆ ಮೇಲ್, ಇನ್ನೊಂದು ಕೀಳ್‌ಂತ ಬುದ್ಧಿ ಇರೊವು ತಿಳಿಯಕಾಗೆದ್. ಆದ್ದರ್‌ಂದ ನಮ್ಮ ಅರೆಬಾಸೆನ್ನೂ ನಾವು ಗೌರವಂದಳೂ ಅಭಿಮಾನಂದಳೂ ಕಾಣಕೊ. ಇದರ ಮಾತಾಡೊವೆಲ್ಲ ಒಂದಾಗಿ ಹುರುಪುಲಿ ಇದರ ಬೆಳ್ಸೊಕು. ಕಥೆ, ಕಾದಂಬರಿ, ನಾಟಕ, ಕವಿತೆ, ಕಾವ್ಯ, ಶಾಸ್ತ್ರ ಸಂಪೊತ್ತ್ ಇದರ್ಲಿ ಹೇರಳ ಬೆಳಿಯೊಕು. ನನ್ನಂದ ತೀರ್ದ ಅಳಿಲ ಸೇವೆನ ನನ್ನ ಈ ಪರಿಣತ ವಯಸ್‌ಲಿ(88ವರ್ಷ) ಮಾಡಿಯೊಳೆ. ಇದರ ನನ್ನ ಭಾಷಾಬಾಂಧವರೆಲ್ಲ ಆದರಂದ ಸ್ವೀಕರಿಸಿ ಪ್ರಯೋಜನ ಪಡ್ದ್ ನನ್ನ ಶ್ರಮ ಸಾರ್ಥಕ ಆವಾಂಗೆ ಮಾಡೊಕುಂತ ವಿನಯಲಿ ಕೇಳಿಕಣೆ.

ಕೋಡಿಮನೆ, ಪೆರಾಜೆ ಗ್ರಾಮ **ಕೆ. ಕುಶಾಲಪ್ಪ ಗೌಡ**
ನವಂಬರ್ 2018

ಅರೆಬಾಸೆ– (ಗೌಡಕನ್ನಡ): ಧ್ವನಿಮಾ ವಿವೇಚನೆ

ಒಂದು ಬಾಸೆಲಿ ಪರಸ್ಪರ ಅರ್ಥವೈದೃಶನತೋರ್ಸುವ ಕನಿಷ್ಠತಮ ಧ್ವನಿ ಘಟಕಗಳ 'ಧ್ವನಿಮಾ'ಂತ ಗುರ್ತುಸುದು ಭಾಷಾ ವಿಜ್ಞಾನದ ವಾಡಿಕೆ. ಇಂಥ ಧ್ವನಿಮಾಗಳ ಅವರ ಗುಣ ಸ್ವಭಾವಗಳಿಗನುಗುಣವಾಗಿ ಎರ್ಡ್‌ಜಾತಿ ಅಥವಾ ವರ್ಗಂತ ವಿಂಗಡ್ಸುವ ಕ್ರಮ ಉಟ್ಟು. ಅದ್ ಹೀಂಗೆ:–

(1) ಸ್ವರಗ (2) ವ್ಯಂಜನಗ

ಎರ್ಡ್ ವಿಧದ ಸ್ವರಗ ಒಳೊ. ಅವುಂತೇಳಿರೆ:

ಅ) ಹ್ರಸ್ವ ಆ) ದೀರ್ಘ

ಒಂದು ಮಾತ್ರಾಕಾಲಲಿ (ಒಂದು ಚಿಟಿಕೆ ಹೊಡಿವಷ್ಟ್ ಕಾಲಲಿ) ಉಚ್ಚಾರಣೆ ಯಾಗುವ ಧ್ವನಿಗಳ ಹ್ರಸ್ವಂತ ಕರೀದು. ಅದ್‌ಕ್ಕಿಂತ ಹೆಚ್ಚಿನ ಕಾಲ ಉಚ್ಚಾರಣೆಗೆ ತಕಂಬ ಸ್ವರಗಳ ದೀರ್ಘಂತ ಕರ್ದವೆ.

ಅವರ ಉಚ್ಚರ್ಸಿಕಾಕನ ಬಾಯೆಲಿ ನಾಲಿಕೆ ಇರುವ ಸ್ಥಾನಕ್ಕೆ ಅನುಸರ್ಸಿ ಈ ಕೆಳಗೆ ಅವರ ಕೊಟ್ಟದರ ಕಾಣಕ್:–

a) ಹ್ರಸ್ವ					**b) ದೀರ್ಘ**			
ಉನ್ನತ	→	ಇ	ɨ	ಉ	ಈ	ಊ	←	ಉನ್ನತ
ಮಧ್ಯ	→	ಎ	ë	ಒ	ಏ	ಓ	←	ಮಧ್ಯ
ನಿಮ್ನೋನ್ನತ	→	ɛ		ɔ	ಆ		←	ನಿಮ್ನ
ನಿಮ್ನ	→		ಅ					

ವ್ಯಂಜನಗ:

ಪ್	ಚ್	ತ್	ಟ್	ಕ್	←	ಕಠಿಣ ವ್ಯಂಜನಗ
ಬ್	ದ್	ಡ್	ಜ್	ಗ್	←	ಮೃದು ವ್ಯಂಜನಗ
ಮ್	ನ್	ಣ್	ಞ್	ಙ್	←	ಅನುನಾಸಿಕ ವ್ಯಂಜನಗ
ವ್	ಯ್				←	ಅರ್ಧ ಸ್ವರಗ
ಸ್	ಹ್				←	ಘರ್ಷಕಗ
ಲ್	ಳ್				←	ಪಾರ್ಶ್ವಗಾಮಿಗ
ರ್					←	ಆಕಂಪಿತ

(* ಕನ್ನಡ ಲಿಪಿಲಿ ತೋರಿಸಿಕೆ ಆಗದ್ದರ Phonetic alphabetಲಿ ತೋರ್ಸಿಯೊಳೆ)

ಧ್ವನಿಮಾಗ ಮತ್ತೆ ಅವರ ಸದಸ್ಯ ಧ್ವನಿಗ

ಧ್ವನಿಮಾದ ಒಟ್ಟಿಗೆ ಒಂದು ಅಥವಾ ಹೆಚ್ಚಿಗೆ ಸದಸ್ಯದಣಿಗ ಸೇರಿಕಣಂಡ್ ಇರಿಕೆ ಸಾಧ್ಯ ಉಟ್ಟು. ಒಂದು ಸದಸ್ಯ, ಇನ್ನೊಂದು ಸದಸ್ಯ ಬಾವಸ್ಥಾನಣಲಿ ಬಾದುಲೆ. ಅದ್ಅದರ ನಿರ್ದಿಷ್ಟ ಸ್ಥಾನಣಲಿ ಮಾತ್ರ ಬಂದದೆ. ಇಂಥ ಸದಸ್ಯರಿಗೆ ಉಪಧ್ವನಿಗಂತ ಹೆಸ್‌ರ್. ಶಾಸ್ತ್ರರೀತಿಲಿ ಇನ್ನ್ ಮುಂದೆ ಈ ಹೆಸ್‌ರ್‌ನ ಮಾತ್ರ ಉಪಯೋಗ ಆದೆ. ಇವರೆಲ್ಲ ಬರ್ದ್ ತೋರ್ಸ್‌ಕನ ಕೆಲೊವು ಸಂಪ್ರದಾಯದ ಚಿಹ್ನೆಗಳ ಉಪಯೋಗ್ಸುದು ಭಾಷಾ ವಿಜ್ಞಾನಣಲಿ ಅನುಸರ್‍ಸುವ ಕ್ರಮ ಉಟ್ಟು. ಆ ಪ್ರಕಾರ ಧ್ವನಿಮಾನ / / ಈ ತರದ ಬ್ರಾಕೆಟ್‌ಗಳ್ಲಿಯೂ, ಉಪಧ್ವನಿಗಳ [ ] ಈ ತರದ ಬ್ರಾಕೆಟ್‌ನೊಳೆಗೂ ಬರಿವ ಕ್ರಮ.

ಇನ್ನ್ಅರೆಬಾಸೆನ (ಗೌ.ಕ.) ಧ್ವನಿಮಾ ಮತ್ತೆ ಉಪಧ್ವನಿಗಳ ವಿವರನ ನೋಡೊನೊ.

1.0 ಸ್ವರಗ :

1.1 /ಇ/ ಇದ್‌ಕೆಎರ್ಡ್‌ಉಪಧ್ವನಿಗ ಒಳೊ.

(i) [I] ನಿಮ್ನಉನ್ನತ ಪೂರ್ವ ಸ್ವರ, ಪದದ ಆದಿ ಮತ್ತೆ ಮಧ್ಯಲಿ ಬಂದದೆ.

ಉದಾ: [Iḍɨ]ಇಡ್, [Irɨ]ಇರ್, [kIḍi]ಕಿಡಿ, [kIttɨ]ಕಿತ್ತ್

(ii)[i.] ಉನ್ನತ ಪೂರ್ವಅರ್ಧ ದೀರ್ಘ ಸ್ವರ. ಪದಾಂತ್ಯ ಸ್ಥಾನëಲಿ ಬಂದದೆ.

ಉದಾ: ಹೊಡಿ hoḍi; ಮೊಡಿ [moḍi]

1.2 /ಈ/ ಒಂದುಉಪಧ್ವನಿನ ಮಾತ್ರ ಹೊಂದಿಟು.

[i:] ಉನ್ನತ ಪೂರ್ವ ದೀರ್ಘ ಸ್ವರ. ಪದದ ಆದಿ, ಮಧ್ಯಸ್ಥಾನëಲಿ ಬಂದದೆ.

ಉದಾ:[i:ḍɨ]ಈಡ್, [ki:ḷɨ]ಕೀಳ್.

1.3 /ಎ/ ಮೂರು ಉಪಧ್ವನಿಗಳ ಹೊಂದಿಟು:

(i) [E] ಮಧ್ಯಪೂರ್ವ ಹ್ರಸ್ವ ಸ್ವರ. ಪದದ ಆದಿಲಿ, ಮಧ್ಯೆಲಿ. ಅಥವಾ ಯಾದಾರ್ ವಿವೃತ ಸ್ವರದ [unrounded]ಎದ್‌ರ್‌ëಲಿಬಂದದೆ.

ಉದಾ:[ELE]ಎಲೆ, [EdE]ಎದೆ, [kErE]ಕೆರೆ.

(ii)[ɛ/] ನಿಮ್ನ, ಮಧ್ಯ, ಪೂರ್ವ, ಅರ್ಧ, ದೀರ್ಘ ಸ್ವರ.

ಪದಾಂತ್ಯëಲಿ, ವಿವೃತ ಸ್ವರದ(Unrounded vowel)ನಂತರ ಬಂದದೆ.

ಉದಾ:[Elɛ]ಎಲೆ [balɛ] ಬಲೆ.

(iii) [e] ಉನ್ನತ ಮಧ್ಯ, ಪೂರ್ವ, ಹ್ರಸ್ವ ಸ್ವರ.

[eṇisɨ] ಎಣ್‌ಸ್[ettɨ] ಎತ್ತ್.

1.4 /ಏ/ ಒಂದೇ ಉಪಧ್ವನಿ ಹೊಂದಿಟು [e:], ಉನ್ನತ, ಮಧ್ಯ, ಪೂರ್ವ, ದೀರ್ಘ ಸ್ವರಎಲ್ಲ ಸ್ಥಾನಗಳ್ಲೂ ಬಂದದೆ.

ಉದಾ: [e:ḷɨ] ಏಳ್; [ke:ḷɨ] ಕೇಳ್ [avane:] ಅವನೇ.

1.5 /ಉ/ ಇದ್‌ಕೆ ಮೂರು ಉಪಧ್ವನಿಗ ಒಳೊ.

(i) [U] ನಿಮ್ನೋನ್ನತ, ಪಶ್ಚ, ಹ್ರಸ್ವ ಸ್ವರ. ಪದದ ಆದಿ ಮತ್ತೆ ಮಧ್ಯ ಸ್ಥಾನëಲಿ ಬಂದದೆ.

ಉದಾ: [Uḍu]ಉಡು; [KUḍi]ಕುಡಿ

(ii) [u]ಉನ್ನತ ಪಶ್ಚ ಅರ್ಧ ದೀರ್ಘ ಸ್ವರ ಪದದಅಂತ್ಯಲಿ ಬಂದದೆ.
ಉದಾ: [hUḷu] ಹುಳು, [Uḍu]ಉಡು

(iii) [u]ಉನ್ನತ ಪಶ್ಚ ಸ್ವರ, ಬೇರೆ ಕಡೆಗಲ್ಲಿ ಬಂದದೆ.
ಉದಾ: [horsu] ಹೊರ್ಸು, [Kuḍsu]ಕುಡ್ಸು.

1.6 /ಒ/ ಇದ್‌ಕೆ ಮೂರುಉಪಧ್ವನಿಗ ಒಳೊ.

(i) [Ω] ಮಧ್ಯ, ಪಶ್ಚ, ಸ್ವಲ್ಪ ನಿಮ್ನ ಸ್ವರ. ನಿಮ್ನ ಸ್ವರಗಳ ಎದ್‌ರ್ಲಿ ಬಂದದೆ.
ಉದಾ: [Ωḍe]ಒಡೆ [kΩḍe]ಕೊಡೆ [Ωle] ಒಲೆ [kΩle]ಕೊಲೆ.

(ii) [ɔ]ನಿಮ್ನ ಪಶ್ಚ ಸ್ವರ. ಪದದಅಂತ್ಯಲಿ ಬಂದದೆ.
ಉದಾ: [ya:rɔ]ಯಾರೊ[avanɔ] ಅವನೊ.

(iii) [o] ಉನ್ನತ ಮಧ್ಯಸ್ವರ. ಬೇರೆ ಕಡೆಗಲ್ಲಿ ಬಂದದೆ.
ಉದಾ: [oli] ಒಲಿ [kollu]ಕೊಲ್ಲು [hollu] ಹೊಲ್ಲು.

1.7 / ಓ/ ಇದ್‌ಕೆ ಒಂದೇ ಉಪಧ್ವನಿ ಉಟ್ಟು.

[o:] ಉನ್ನತ ಮಧ್ಯ ಪಶ್ಚ ಸ್ವರ. ಪದದ ಆದಿ, ಮಧ್ಯ ಅಂತ್ಯಂತೇಳುವ ಮೂರು ಸ್ಥಾನಗಳಲ್ಲಿಯೂ ಬಂದದೆ.
ಉದಾ: [o:ḍu]ಓಡು; [o:du]ಓದು; [ya:ro:] ಯಾರೋ

1.8 /ಅ/ ಇದ್‌ಕೆ ಮೂರು ಉಪಧ್ವನಿಗ ಒಳೊ.

(i) [ʌ] ನಿಮ್ನ, ಮಧ್ಯ, ಪಶ್ಚ ಸಂವೃತ (rounded) ಸ್ವರ.
ಪದ ಮಧ್ಯಲಿ, ದ್ವಿತ್ವಗಳ ಅಥವಾ ಸಂಯುಕ್ತ ವ್ಯಂಜನಗಳ ಪೂರ್ವಲಿ ಬಂದದೆ.
ಉದಾ: [Kʌnnaḍa]ಕನ್ನಡ[nʌnna]ನನ್ನ[kʌrtavya]ಕರ್ತವ್ಯ

(ii) [a] ನಿಮ್ನ, ಮಧ್ಯ, ವಿವೃತ ಸ್ವರ, ಪದದ ಆದಿ ಹಾಂಗೂ ಮಧ್ಯ ಸ್ಥಾನಗಳಲ್ಲಿ ಬಂದದೆ.

ಉದಾ: [ara]ಅರ, [daye]ದಯೆ.

(iii) [a] ನಿಮ್ನ, ಮಧ್ಯ, ವಿವೃತ[unrounded vowel]ಅರ್ಧ ಧೀರ್ಘ ಸ್ವರ, ಪದಾಂತ್ಯಲಿ ಬಂದದೆ. **ಉದಾ:** [mara·]ಮರ, [kaḷa·]ಕಳ.

1.9/ಆ/ ಇದ್‌ಕೆ ಒಂದೇ ಉಪಧ್ವನಿ ಒಳದ್.

[a:] ನಿಮ್ನ, ಮಧ್ಯ, ವಿವೃತ [unrounded] ದೀರ್ಘ. ಎಲ್ಲ ಕಡೆಯೂ ಬಂದದೆ.

ಉದಾ: [a:ḍɨ] ಆಡ್; [ba:ḍɨ] ಬಾಡ್ [ra:ma:] ರಾಮಾ.

2.0 ವ್ಯಂಜನಗ

2.1 ಒಂದು ಪದದ ಸುರುಗೆ, ಹಾಂಗೇ ದೀರ್ಘ ಸ್ವರಗಳ ಅನಂತರ ಬಾವ ಸ್ಪರ್ಶ್ಯ ವ್ಯಂಜನಗಳ ಉಚ್ಚಾರಣೆನ ಕಾಲಾವಧಿ V_1–V_2 ಸ್ಥಾನಲಿ ಬಾವ ವ್ಯಂಜನಂದ ಹಜ್ಜ ಹೆಚ್ಚಿಗಾಗಿ ಇದ್ದದೆ. ಇಲ್ಲಿ $V_{1=}$ ಮೊದಲ ಸ್ವರ, $V_{2=}$ ಎರಡನೇ ಸ್ವರ. ಅಚ್ಚಗನ್ನಡಕ್ಕೆ ಸೇರ್ದ ಕಠಿಣ ಏಕವರ್ಣಗ ಈ ಸ್ಥಾನಲಿ ಬಾದು ತೀರಾ ವಿರಳ. ಎರವಲು ಬಂದ ಪದಗಳಿಗೆ ಈ ನಿರ್ಬಂಧ ಅನ್ವಯಿಸುದುಲೆ. ಎರಡನೇ ಸ್ವರದ ಅನಂತರ ಬಾವ ವ್ಯಂಜನಗಳಿಗೂ ಈ ನಿರ್ಬಂಧ ಅನ್ವಯ ಆದುಲೆ.

2.2 ದಿತ್ವ ವ್ಯಂಜನಂತೇಳ್ಕನ ಒಂದು ಸೂಕ್ಷ್ಮಾಂಶನ ಗಮನಿಸೊಕು. ದ್ವಿತ್ವನ ಉಚ್ಚರ್ನಿಕಾಕನ ಮೊದಲ ವ್ಯಂಜನಕ್ಕೆ ಪೂರ್ಣ ಉಚ್ಚಾರಣೆ ಇರ್ದುಲೆ. ಅದ್ ಅರ್ಧ ಉಚ್ಚಾರಣೆಲಿ ಇರ್‌ಕನೇ ಎರ್ಡನೇ ವ್ಯಂಜನದ ಆರಂಭ ಆಗಿ, ದ್ವಿತ್ವೋಚ್ಚಾರಣೆ ಮುಗ್ದದೆ. ಅಂದರೆ ಸುರುನ ವ್ಯಂಜನ unreleased, ಎರ್ಡ್‌ನೆದ್ released

ಉದಾ: ಅಕ್ಕ = ಅಕ್ + ಕ.

2.3 ಎರ್ಡ್ ಸ್ವರಗಳ ನೊಡುಲಿ ಬಾವ 'ಡ'ಕಾರದ ಉಚಾರಣೆ ಅತಿವೇಗಲಿ, ಬೆರ್ಲ್‌ನ ಚಿಟಿಕೆ ಮಿಡಿವಾಂಗೆ ನಡ್ದದೆ. ಇದಿಕೆ flapಂತ ಹೆಸ್‌ರ್. ಇದ್ ಅದರ ಸ್ಪರ್ಶ್ಯ ವ್ಯಂಜನದೊಟ್ಟಿಗೆ ಸ್ವಚ್ಛಂದ ವ್ಯತ್ಯಯಲಿ (Free variation) ಉಟ್ಟು.

2.4 ಧ್ವನಿಮಾ ಪಟ್ಟಿಕೆಲಿ ಕೊಟ್ಟ ವ್ಯಂಜನ ಸಂಜ್ಞೆಗೆಳಿಗೆಲ್ಲ ಆಯಾ ವ್ಯಂಜನಗೆಳಿಗೆ ನಿರ್ದಿಷ್ಟ ಮಾಡ್ದ ಧ್ವನಿಗುಣಗ (Phonetic Quality) ಇರುವ ರೂಪಗ ಇದ್ದವೆ. ಅಂದರೆ ಅವುಗಳ್ನ ಹೋಲುವ ಉಪಧ್ವನಿಗ ಇದ್ದವೆ. ಅಂದರೆ /ಕ/ – ಕಂಠ್ಯ, ಕಠಿಣ ಸ್ಪರ್ಶ ವ್ಯಂಜನ. [ಕ] ಸಹ ಹೀಂಗ್‌ನೆಂತ ಅರ್ಥ.

2.5 'ಮೂರ್ಧನ್ಯ'ಂತೇಳ್ವ ಪದನ ಸಂಪ್ರದಾಯಾನುಸಾರ ಹೇಳ್ದ್, ಅಷ್ಟೆ. ನಿಜವಾಗಿ ನಾಲಿಕೆನ ಕೊಡಿ ಅಲ್ಲಿ ಸೂಚಿಸಿದಷ್ಟ್ ಹಿಂದೆಗೆ ಬಾಗುದುಲೆ. ಅದ್ ಹಜ್ಜನೇ ಬಾಗಿ, ಮೇಲೆನ ಗೆಟ್ಟಿ ವಸಡಿಗೆ, ಹಲ್ಲ್‌ನ ಹಿಂದೆ ಹಜ್ಜ ದೂರೆಲಿ ತಾಂಗಿದೆ.

(ಧ್ವನಿ ಲಿಪಿಗಳ ಎಲ್ಲ ಕನ್ನಡ ಲಿಪಿ ಮುಖಾಂತರ ತೋರಿಸಿಕೆ ಆದುಲೆಂತೇಳುವ ಕಾರಣಂದ ಭಾಷಾ ವಿಜ್ಞಾನದೆಲಿ ಬಳಕೆಲಿರುವ ಸಂಜ್ಞೆಗಳ ಉಪಯೋಗ ಮಾಡಿಯೊಳೆ)

3.0 ಸಂಧಿ

ಪ್ರಕೃತಿ, ಪದ, ಪ್ರತ್ಯಯ ಇವರ ರೂಪಿಮಾಗಂತ ಹೇಳುವೆ. ಇವ್ಕೆ ಅರ್ಥಉಟ್ಟು, ಅಂದರೆ ರೂಪಿಮಾಂತೇಳ್ದು ಅರ್ಥವತ್ತಾದ ಘಟಕ. ಮಾತ್‌ಲಿ ಒಂದಕ್ಕಿಂತ ಹೆಚ್ಚ್ ಅರ್ಥಘಟಕಂಗ ಸೇರುವ ಸಂದರ್ಭಗ ಒಳೊ. ಹಾಂಗೆ ಒಟ್ಟು ಸೇರುವ ಪ್ರಕ್ರಿಯೆನ 'ಸಂಧಿ'ಂತಕರ್ದವೆ. ಹೀಂಗೆ ಸೇರ್‌ಕನ, ರೂಪಿಮಾಗಳ್ಲಿ ಕೆಲವು ಬದಲಾವಣೆಗ ಆವ ಸಂಭವನೂಉಟ್ಟು. ರೂಪಿಮಾಗಳ ಭಾಗವಾದ, ಸ್ವರ, ಅಥವಾ ವ್ಯಂಜನಗಳ್ಲಿ, ಕೆಲೊವು ಬಾಸೆಗಳ್ಲಿ ಲೋಪ, ಆಗಮ, ಆದೇಶಂತ ನಡ್ದದೆ. ಹೀಂಗೆ ಎರ್ಡ್ ಅಂಶಗ ಸೇರ್‌ಕನ, ಅವುಗಳ್ಲಿ ಯಾದಾರ್ ಸ್ವರ ಅಥವಾ ವ್ಯಂಜನ ಕಾಣದೆ ಆದು **ಲೋಪ**. ಅವುಗಳ ಮಧ್ಯೆಒಂದು ಹೊಸ ಸ್ವರ ಅಥವಾ ವ್ಯಂಜನ ಬಂದ್ ಸೇರುದು **ಆಗಮ**. ಯಾದಾರ್ ಸ್ವರ ಅಥವಾ ವ್ಯಂಜನ ಇದ್ದದರ ಕೆಡ್‌ಸಿ ಹೊಸ್ದಾಗೆ ಒಂದು ಸ್ವರ ಅಥವಾ ವ್ಯಂಜನ ಬಾದು **ಆದೇಶ**. ಹೀಂಗೆ ಈ ಮೂರು ಅಂಶಗಳ ಸಂಧಿ ಪ್ರಕ್ರಿಯೆಗಂತ ಕರ್ದವೆ. ಇನ್ನ್ ನಮ್ಮ ಅರೆಬಾಸೆಲಿ ನಡಿವ ಸಂಧಿ ಪ್ರಕ್ರಿಯೆನ ನೋಡೊನೊ. ಮೇಲೆ ಹೇಳ್ದ ಮೂರು ತರದ ಪ್ರಕ್ರಿಯೆಗಳೂ ನಡ್ದೇ ತೀರೂಕುಂತೇಳ್ವ ಕಡ್ಡಾಯ ಏನೂ ಇಲ್ಲೆ. ಆಯಾ ಬಾಸೆಗಳ ಲಕ್ಷಣಗಳೆಗೆ ಅನುಸರ್ಸಿ ಅವು ಬರೆಕ್, ಬಾರದೆ ಇರ್‌ಎಕ್.

3.1 ಊರು, ಕಾಡ್, ನಾಡ್, ಇತ್ಯಾದಿ ಪದಗಳೆಗೆ ವಿಭಕ್ತಿ ಪ್ರತ್ಯಯಗ ಸೇರ್‌ಕನ, ಅರೆಬಾಸೆಲಿ, ಯಾವ ಬದಲಾವಣೆಗಳೂ ಕಾಂಬೊದುಲೆ.

ಕಾಡ್+ನ (ದ್ವಿ.ವಿ.) → ಕಾಡ್‌ನ,   ನಾಡ್+ನ → ನಾಡ್‌ನ,

ಊರ್+ಂದ (ಪ.ವಿ) → ಊರ್‌ಂದ;   ಕಾಲ್+ಂದ → ಕಾಲ್‌ಂದ.

ಅಲ್ಲಿ+ಂದ → ಅಲ್ಲಿಂದ, ಇಲ್ಲಿ+ಂದ → ಇಲ್ಲಿಂದ. ಅಂತ್ಯಸ್ವರ ಲೋಪ ಆಗಿ ಇ ಆಗಮ ಆದೆ.

3.2 ಚತುರ್ಥಿ ವಿಭಕ್ತಿ ಪ್ರತ್ಯಯ–ಗೆ ಸೇರ್‌ಕನ :

ಉದಾ: ಕಾಡ್+ಗೆ → ಕಾಡಿಗೆ, ನಾಡ್+ಗೆ → ನಾಡಿಗೆ,
ಊರ್+ಗೆ → ಊರಿಗೆ; ಕಾಲ್+ಗೆ → ಕಾಲಿಗೆ.

3.3 ಅಲ್ಲಿ, ಇಲ್ಲಿಂತೇಳ್ವ 'ಇ' ಕಾರಾಂತ ಪದಗಳೆಗೆ ಗೆ ಸೇರ್‌ಕನ ಏನೂ ಬದಲಾವಣೆ ಇಲ್ಲೆ.

ಉದಾ: ಅಲ್ಲಿ+ಗೆ → ಅಲ್ಲಿಗೆ, ಇಲ್ಲಿ+ಗೆ → ಇಲ್ಲಿಗೆ.

3.4 ಅಲ್ಲಿ, ಇಲ್ಲಿ, ಹಳ್ಳಿಂತ 'ಇ' ಕಾರಾಂತ ಪದಗೆಳಿಗೆ ಷಷ್ಠೀ ವಿಭಕ್ತಿ ಪ್ರತ್ಯಯ 'ಅ' ಸೇರ್‌ಕನ – ನ್ – ಆಗಮ ಆದೆ:

ಉದಾ: ಅಲ್ಲಿ+ಅ → ಅಲ್ಲಿ–ನ್–ಅ; ಇಲ್ಲಿ+ಅ → ಇಲ್ಲಿ–ನ್+ಅ,
ಹಳ್ಳಿ+ ಅ → ಹಳ್ಳಿ+ನ್+ಅ

3.5 ಗಲ್ಲಿ+ಂದ → ಗಲ್ಲಿಂದ; ಗಲ್ಲಿ + ಲಿ+ (ಸ.ವಿ.) → ಗಲ್ಲಿಲಿ.

3.6 ಕೆಲವು ಅಕಾರಾಂತ, ಉಕಾರಾಂತ, *i* ಕಾರಾಂತ ಪದಗೆಳಿಗೆ ದ್ವಿತೀಯಾ ವಿಭಕ್ತಿ ಪ್ರತ್ಯಯ ಸೇರ್‌ಕನ ಸಂಧಿ ಪ್ರಕ್ರಿಯೆಗ ಏನೂ ನಡಿಯದೆ ಪ್ರತ್ಯಯಗ ಪ್ರಕೃತಿಗೆ ನೇರವಾಗಿ ಸೇರುವೆ.

ಉದಾ:

ಮರ+ನ → ಮರನ; ಹಣ+ನ → ಹಣನ; ಜೆನ +ನ → ಜೆನನ
ಗುರು+ನ → ಗುರುನ; ಕೆೞ್+ನ → ಕೆೞ್ನ, ಕುರು +ನ → ಕುರುನ
ಹಸ್+ನ → ಹಸ್ನ.

3.7 ದಿಕ್ಸೂಚಕವಾಗಿ ಬಾವ ಷಷ್ಠೀರೂಪುನ ಪ್ರತ್ಯಯ ದ್ವಿತೀಯಾ ವಿಭಕ್ತಿಪ್ರಕೃತಿಗೆ ನೇರ ಸೇರ್ದೆ.

ಉದಾ:

ಎತ್ತ+ನ → ಎತ್ತನ; ಅತ್ತ+ನ → ಅತ್ತನ; ಸುತ್ತ+ನ → ಸುತ್ತನ,
ಮೂಡ+ನ → ಮೂಡನ; ಪೊಡುವ+ನ → ಪೊಡುವನ, ತೆಂಕ+ನ=ತೆಂಕನ
ಬಡಗ+ನ → ಬಡಗನ.

3.8 ಮರಂತೇಳ್ವ ಪದಕ್ಕೆ ಷಷ್ಠಿ ಪ್ರತ್ಯಯವಾಗಿ ಅ ಸೇರ್‌ಕನ ದ ಆಗಮವಾದ್ದೆ.
ಉದಾ: ಮರ+ಅ → ಮರದ (ಇದ್ ಬಹುಶಃ ಶಿಷ್ಟ ಕನ್ನಡವ ಅನುಕರಣೆ ಆಗಿರೊಕು ಕಾರಣ ಅರೆಬಾಸೆಲಿ, ಮರನಂತೇಳುದೂ ಉಟ್ಟು.)
ಅರ+ಅ → ಅರದ. ಜೆರ +ಅ → ಜೆರದ.

3.9 <u>**ಆದೇಶ**</u> **:**

ಸ್ವರಾಂತ ಪದಗೆಳಿಗೆ ಕಾಲಪದ ಪರವಾದರೆ, ಕ ಕಾರಕ್ಕೆ 'ಗ' ಕಾರಾದೇಶವಾದ್ದೆ.
<u>**ಉದಾ:**</u> ಚೆೞಿ+ಕಾಲ → ಚೆೞಿ(ಸೆೞಿ)ಗಾಲ, ಮಳೆ+ಕಾಲ → ಮಳೆಗಾಲ ಮಳ್ಗಲ; ಅರೆಗಾಲ → ಅರ್ಕಿಲ್ (ಬೇಸಿಗೆ ಕಾಲ, ಬಿಸ್‌ಲ್ ಕಾಲ)

3.10 ಅಕಾರಾಂತ ಪದಗಳಿಗೆ ಚತುರ್ಥಿ ವಿಭಕ್ತಿ ಪ್ರತ್ಯಯ – ಕೆ ಸೇರ್‌ಕನ, 'ಕ್' ಆಗಮ.

ಉದಾ:

ಮರ + ಕೆ → ಮರಕ್ಕೆ, ಹೊಲ+ಕೆ → ಹೊಲಕ್ಕೆ; ಗುಣ+ಕೆ → ಗುಣಕ್ಕೆ;
ಜೆನ + ಕೆ → ಜೆನಕ್ಕೆ; ಹಬ್ಬ+ಕೆ → ಹಬ್ಬಕ್ಕೆ.

3.11 ಅದ್, ಇದ್, ಮಾಡ್ದ್, ಹೋದ್ದ್, ಹೇಳ್ದ್ ಇತ್ಯಾದಿ ದಕಾರಾಂತ ಪದಗಳಿಗೆ ತೃತೀಯಾ, (ಪಂಚಮಿ), ಷಷ್ಠಿ, ಸಪ್ತಮಿ ವಿಭಕ್ತಿಗ ಸೇರ್‌ಕನ, ಅರ್ ಆಗಮ ಆದೆ.

ಉದಾ:

ಅದ್ + ಇಂದ → ಅದರ್‌ಂದ, ಇದ್ + ಇಂದ → ಇದರ್‌ಂದ (ತೃತೀಯ, ಪಂಚಮಿ)

ಅದ್ + ಅ → ಅದರ, ಇದ್ + ಅ → ಇದರ್, (ಷಷ್ಠೀ)
ಅದ್ + ಅಲ್ಲಿ → ಅದರ್ಲಿ, ಇದ್ + ಅಲ್ಲಿ → ಇದರ್ಲಿ (ಸಪ್ತಮಿ)
ಮಾಡ್ದ್ + ಇಂದ → ಮಾಡ್ದ್‌ರ್‌ಂದ, ಕೇಳ್ದ್ + ಇಂದ → ಕೇಳ್ದ್‌ರ್‌ಂದ(ತೃ;ಸಂ)
ಮಾಡ್ದ್ + ಅ → ಮಾಡ್ದರ, ಕೇಳ್ದ್ + ಅ → ಕೇಳ್ದರ (ದ್ವಿ).

3.12 ಕ್ರಿಯಾ ವಿಶೇಷಣ ರೂಪುಗೆ ಸಪ್ತಮಿ ಸೇರ್‌ಕನ ಯಾವ ಸಂಧಿ ಪ್ರಕ್ರಿಯೆನೂ ನಡದುಲೆ.

ಹೋದ + ಲಿ → ಹೋದಲಿ, ಬಂದ + ಲಿ → ಬಂದಲಿ,
ಕಂಡ + ಅ → ಕಂಡಲಿ (ಕಂಡಲಿ ಗುಂಡು ಹೊಡಿಯಕೆ ಅಪ್ಪಣೆ).

3.13 ನಾ, ನೀ, ಂತೇಳ್ವ ಉತ್ತಮ ಪುರುಷ ಏಕವಚನಕ್ಕೆ ದ್ವಿತೀಯಾ / ಷಷ್ಠೀ ವಿಭಕ್ತಿ ಸೇರ್‌ಕನ ದೀರ್ಘರೂಪು ಹ್ರಸ್ವ ದ್ವಿತ್ವ ರೂಪ ಆದೆ.

ಉದಾ: ನಾ → ನ → ನನ್ನ್‌ಅ, ನೀ+ಅ → ನಿನ್ನ್‌ಅ

3.14 ತೃತೀಯ ವಿಭಕ್ತಿ, (ಪಂಚಮಿ) ಸೇರ್‌ಕನ

ನಾ → ನನ್+ಂದ → ನನ್ನಂದ; ನೀ → ನಿನ್+ಂದ → ನಿನ್ನಂದ

3.15 ಚತುರ್ಥಿ ವಿಭಕ್ತಿ ಪ್ರತ್ಯಯ ಸೇರ್‌ಕನ ನಾ → ನಂ, ನೀ → ನಿಂಂದ ಆಗಮ ರೂಪ ಹೊಂದುವೆ.

ಉದಾ: ನಾ + ಗೆ → ನಂಗೆ; ನೀ + ಗೆ → ನಿಂಗೆ.

4.0 ನಾಮ ಪದಗ :

ವ್ಯಕ್ತಿ, ವಿಷಯ, ಸ್ಥಳಗಳ ಸೂಚಿಸುವ ಪದಗಳ ನಾಮಪದಗಂತೇಳುವೆ. ಮಾತಾಡ್‌ಕನ, ಒಂದು ವಾಕ್ಯಲಿ, ಇವು ಬೇರೆ ಬೇರೆ ಅರ್ಥಗಳ ಕೊಡುವ ಕೆಲೊವು ಪ್ರತ್ಯಯಗಳೊಟ್ಟಿಗೆ ಸೇರಿಕಂಡ್, ಬೇರೆ ಬೇರೆ ವಿಷಯಗಳ ನಮ್ಮ ಅಂವಿಗೆ ಬರ್ಸುವೆ. ಇಂಥ ಪ್ರತ್ಯಯಗಳ ವಿಭಕ್ತಿಗಂತೇಳುವೆ. ಅರ್ಥಗಳ ವಿಭಾಗಿಸಿ ಕೊಡುದರ್‌ಂದಾಗಿ ಇವರ ವಿಭಕ್ತಿಗಂತೇಳುದು. ಈ ವಿಭಕ್ತಿಗ ಯಾವ ನಾಮಪದಗಳ ಘಟಕಕ್ಕೆ ಸೇರುವೆನೋ ಅವುಗಳ ಪ್ರಕೃತಿಂತ ಕರೀದು ವಾಡಿಕೆ. ಏಳ್ ತರದ ವಿಭಕ್ತಿಗಂತ, ಹಿಂದೆನ ವೈಯಾಕರಣಂಗ ಗುರ್ತಿಸಿಯೊಳೊ. ಅವ್ಕೆ ಶಾಸ್ತ್ರೀಯವಾಗಿ ಬೇರೆ ಹೆಸರ್‌ಗ ಇದ್ದರೂ, ವ್ಯಾವಹಾರಿಕ ಅನುಕೂಲಕ್ಕಾಗಿ, ಪ್ರಥಮಾ, ದ್ವಿತೀಯ, ತೃತೀಯ, ಚತುರ್ಥಿ, ಪಂಚಮಿ, ಷಷ್ಠೀ, ಸಪ್ತಮಿಂತ ಕರ್ದ್, ಎಂಟ್ನೇದರ ಸಂಬೋಧನೆಂತ ಕರ್ದವೆ. ಈ ವಿಭಕ್ತಿಗ, ಒಂದು ವಾಕ್ಯಲಿ, ನಾಮ ಪದ ಮತ್ತೆ ಕ್ರಿಯಾಪದಗಳಿಗೆ ಸಂಬಂಧ ಕಲ್ಪಿಸುವೆ. ಈ ಸಂಬಂಧನ 'ಕಾರಕ' ಸಂಬಂಧಂತ ಶಾಸ್ತ್ರೀಯವಾಗಿ ಹೇಳುವೆ. ಅವ್ಕೆ ಕರ್ತೃ. ಕರ್ಮ, ಕರಣ, – ಇತ್ಯಾದಿಯಾಗಿ ಹೆಸರ್‌ಗ, ಕಾರಕಗ ಎಷ್ಟ್? ವಿಭಕ್ತಿಗ ಎಷ್ಟ್?ಂತೆಲ್ಲ ದೊಡ್ಡ ಚರ್ಚೆ ಎದ್ದುಟು. ಅದೆಲ್ಲ ನಮ್ಮ ಈಗನ ಉದ್ದೇಶಕ್ಕೆ ಅಗತ್ಯ ಇಲ್ಲೆ.

ವಿಭಕ್ತಿಗ ಏಳ್ ಮತ್ತೆ ಒಂದು (7+1)

1. ಪ್ರಥಮಾ
2. ದ್ವಿತೀಯ
3. ತೃತೀಯ
4. ಚತುರ್ಥಿ
5. ಪಂಚಮಿ
6. ಷಷ್ಠೀ
7. ಸಪ್ತಮಿ
8. ಸಂಬೋಧನಾ

4.1 ಪ್ರಥಮಾ ವಿಭಕ್ತಿಗೆ ಪ್ರತ್ಯಯ ಇಲ್ಲೆ. ಪ್ರಕೃತಿಯೇ ಪ್ರಥಮಾದ ಕಾರ್ಯನಿರ್ವಹಿಸಿದೆ.

ಉದಾ: ಮರ ಬೀತ್.

ರಾಮಣ್ಣ ಬಾತ್

ಕೂಸು ಅತ್ತತ್

ಇಲ್ಲಿ ಮರ, ರಾಮಣ್ಣ, ಕೂಸು ನಾಮಪದಗ, ಆಯಾ ವಾಕ್ಯಗಳ್ಲಿ ಕರ್ತೃ ಸ್ಥಾನ ವಹಿಸಿಯೊಳೊ.

ಹಿಂದೆನ ಕೆಲೊವು ವ್ಯಾಕರಣ ಪಂಡಿತರ್, ಕಡ್ಡಾಯವಾಗಿ ಪ್ರಥಮಾವಿಭಕ್ತಿ ಪ್ರತ್ಯಯನ ಹಾಕಿಯೇ ತೀರೊಕುಂತ ಶಿಷ್ಟ ಕನ್ನಡಲಿ 'ಮರ ಬಿತ್ತು'ಂತ ಹೇಳುವ ಬದ್‌ಲ್, ಮರವು ಬಿತ್ತುಂತ 'ಹೊಳೆ ಹರಿಯುತ್ತದೆ'ಂತ ಹೇಳುದರ 'ಹೊಳೆಯು ಹರಿಯುತ್ತದೆ'ಂತ ಹೇಳುವ ಕ್ರಮನ ಅನುಸರ್ಸ್‌ತಿದ್ದೊ. ಹೀಂಗೆ ಮಾಡಿರೆ ಬಾಸೆನ ಸಹಜ ರೂಪುಗೆ ಅಪಚಾರ ಮಾಡ್‌ದಾಂಗಾದೆ.

4.2 ದ್ವಿತೀಯಾ ವಿಭಕ್ತಿಗೆ: – ನ; ಮರನ ಕಡಿ
ಅಂವನ ಕರಿ.

4.3 ತೃತೀಯಾ ವಿಭಕ್ತಿಗೆ: – ನ್ದ; ಮರನ್ದ ಮನೆ ಕಟ್ಟೆಕ್
ಕೆಬಿನ್ದ ಕೇಳ್
ಕಣ್ಣ್‌ನ್ದ ನೋಡು

4.4 ಚತುರ್ಥೀ ವಿಭಕ್ತಿಗೆ–ಕೆ; ಅಕಾರಾಂತ ನಪುಸಂಕ ಲಿಂಗದ ಪ್ರಕೃತಿಗೆ – ಕೆ ಸೇರ್‌ಕನ ಕ್ ಆಗಮ ಆದೆ.

ಉದಾ: ಮರ+ಕೆ → ಮರಕ್ಕೆ, ಮರಕ್ಕೆ ನೀರ್ ಹೊಯ್ಯು. ದನಕ್ಕೆ ಹುಲ್ಲು ಹಾಕ್.

4.4.1 ಅತಾರಾಂತ ಮಹತ್ ವರ್ಗದ ಪ್ರಕೃತಿಗೆ –ಗೆ ಚತುರ್ಥಿನ ಪ್ರತ್ಯಯ ಆಗಿರ್ಕನ ಅನುಸ್ವಾರ ಆಗಮನ ಆದೆ.

ಉದಾ: ಅಣ್ಣ+ಗೆ → ಅಣ್ಣಂಗೆ, ತಮ್ಮ+ಗೆ → ತಮ್ಮಂಗೆ
ಅವ್ವ+ಗೆ → ಅವ್ವಂಗೆ, ಅಕ್ಕ+ಗೆ → ಅಕ್ಕಂಗೆ

4.4.2 ನಪುಂಸಕೇತರ ಸರ್ವನಾಮಗ ಪ್ರಕೃತಿಗೆ –ಗೆ ಪ್ರತ್ಯಯ ಸೇರ್‌ಕನ ನಾ (ಉ.ಪು), ನೀ(ಮ.ಪು.), ಇವ್ಕೆ ಹ್ರಸ್ವರೂಪ ಬಂದ್, ಅನುಸ್ವಾರ ಆಗಮ ನಾ → ನ+ಗೆ → ನಂಗೆ; ನೀ → ನಿ+ಗೆ → ನಿಂಗೆ.

4.4.3 ಅದ್ – (ನ,ಲಿ) ಇದ್ (ನ.ಲಿಂ), ಇಕ್ಕೆ –ಕೆ ಪ್ರತ್ಯಯ ನೇರವಾಗಿ ಸೇರ್ದೆ.
ಉದಾ: ಅದ್+ಕೆ → ಅದ್‌ಕೆ; ಇದ್+ಕೆ → ಇದ್‌ಕೆ.

4.4.4 ಅ ಹೊರತಾದ ಬೇರೆ ಸ್ವರಗ ಪದಾಂತ್ಯಲಿ ಬಂದ ಪ್ರಕೃತಿಗಳಿಗೆ–ಗೆ ನೇರವಾಗಿ ಸೇರ್ದೆ.
ಉದಾ: ಹಕ್ಕಿ+ಗೆ → ಹಕ್ಕಿಗೆ, ಬುತ್ತಿ+ಗೆ → ಬುತ್ತಿಗೆ; ಕೊತ್ತಿ+ಗೆ → ಕೊತ್ತಿಗೆ; ಮನೆ+ಗೆ → ಗೆ, ಕೋಟೆ+ಗೆ → ಕೋಟೆಗೆ.

4.4.5 ಉಕಾರಾಂತ ಪ್ರಕೃತಿಗೆ ಗೆ ಸೇರ್‌ಕನ– ಇ– ಆಗಮ ಆದೆ.

ಊರು+ಗೆ → ಊರಿಗೆ; ಪುತ್ತೂರು+ಗೆ → ಪುತ್ತೂರಿಗೆ;

ಗುರುಂತ ಹೇಳುವ ಪ್ರಕೃತಿಗೆ –ಗೆ ನೇರವಾಗಿ ಸೇರ್ದೆ. ಗುರು+ಗೆ → ಗುರುಗೆ ಕಱೆರ್+ಗೆ → ಕಱೆರ್‌ಗೆ.

ಗುರು ಪ್ರಕೃತಿಗೆ ಗೌರವ ಸೂಚಕ ಪ್ರತ್ಯಯ ಸೇರ್‌ಕನ, – ಳಿ ಆಗಮ

ಉದಾ: ಗುರು+ಗ+ಗೆ → ಗುರುಗಱೆಳಿಗೆ.

ಬೇರೆ ಪ್ರಕೃತಿಗಳಿಗೆ ಬಹುವಚನ ಪ್ರತ್ಯಯ ಸೇರ್‌ಕನ –ಗೆ ಗೆ ಮುಂದೆ –ಳಿ– ಆಗಮ ಆದೆ.

ಉದಾ: ಮನೆ+ಗೆ+ಗೆ → ಮನೆಗಱೆಳಿಗೆ; ಇತ್ಯಾದಿ.

4.5 ಪಂಚಮೀ ವಿಭಕ್ತಿ: –ನ್ದ. ಇದ್ ಪ್ರತ್ಯಯದ ರೂಪುಲಿ ತೃತೀಯಾ ವಿಭಕ್ತಿನ ರೂಪುಲೇ ಉಟ್ಟು. ಪಂಚಮೀ ವಿಭಕ್ತಿನ ಅರ್ಥಲಿ ಪ್ರಯೋಗ ಆಕನ ಕ್ರಿಯಾಪದ, ಬಾ, ಹೋಗು ಮುಂತಾದ ಯಾದಾರ್ ಚಲನೆನ ಹೇಳುವ (ಅಕರ್ಮಕ–Intransitive) ಕ್ರಿಯಾ ಪದಗ ವಾಕ್ಯಲಿ ಬಂದವೆ.

ಉದಾ: ಮನೆನ್ದ ಬಾತ್; ಮರನ್ದ ಹಣ್ಣ್ ಬೀತ್; ಇತ್ಯಾದಿ.

4.6 ಷಷ್ಠೀ ವಿಭಕ್ತಿ: ಅಕಾರಾಂತ ನಪುಂಸಕ ಲಿಂಗದ ಪ್ರಕೃತಿಗೆ ಷಷ್ಠೀ ವಿಭಕ್ತಿನ ತೋರ್ಸುವ– ಅ ಸೇರ್‌ಕನ –ದ್– ಆಗಮ ಆದೆ.

ಉದಾ: ಮರ+ಅ → ಮರದ; ಹಣ+ಅ → ಹಣದ;

ಕೆಲೊವು ಸಱೆರ್ತಿ, –ನ್ ಆಗಮ ಆದೂ ಉಟ್ಟು.

ಉದಾ: ಮರ+ಅ → ಮರನ; (ಮರ ಶಬ್ದಲಿ ಮಾತ್ರ ಇದ್ ಕಂಡದೆ. ಬಹುಶಃ ಇದೇ ಮೂಲ ರೂಪ ಆಗಿರೊಕು; ಮರದಂತೇಳ್ದು ಶಿಷ್ಟ ಕನ್ನಡದ ಪ್ರಭಾವಂದ ಆಗಿರಿಕೆ ಸಾಕ್). ಹಣ +ಅ → ಹಣನ;

4.7 ಸಪ್ತಮಿ ವಿಭಕ್ತಿ: –ಲಿ, ಇದಿಕೆ ಪ್ರತ್ಯಯ. ಪ್ರಕೃತಿಗೆ ನೇರವಾಗಿ ಇದ್ ಸೇರ್ದೆ.

ಉದಾ:

ಮರ+ಲಿ → ಮರಱೆಲಿ, ಮರಱೆಲಿ ಹಕ್ಕಿ ಕುದ್ದುಟು.

ಊರು+ಲಿ → ಊರುಲಿ, ಊರುಲಿ ಮಳೆ ಬಂದುಟು

ಈ ಪ್ರತ್ಯಯ ನಪುಂಸಕ ವರ್ಗದ ನಾಮ ಪ್ರಕೃತಿಗಱೆಳಿಗೆ ಮಾತ್ರ ಸೇರ್ದೆ. ಬೇರೆ ಮಾನವ ವರ್ಗಱೆಲಿ, ಷಷ್ಠೀ ವಿಭಕ್ತಿ ಸೇರ್ದ ನಾಮ ಪದ ಆದ ಮೇಲೆ ಹಕ್ಕಲೆ, ಒಟ್ಟಿಗೆಂತೇಳ್ವ ಪದಗಳ ಮೂಲಕ ಇದ್ ವ್ಯಕ್ತವಾದೆ.

ಉದಾ: ನನ್ನ ಹಕ್ಕಲೆ ಆ ಪುಸ್ತಕ ಉಟ್ಟು.

ಅವನೊಟ್ಟಿಗೆ ಹೇಳ್ಬಡ.
ಯಾರ ಹಕ್ಕಲೆನೂ ಹೇಳ್ಬಡ–

4.8 ಸಂಬೋಧನಾ ವಿಭಕ್ತಿ: ಯಾರ್ನಾರ್ ಕರಿಯಕನ – ಏಂತೇಳುವ ಉದ್ಗಾರ ಬಂದದೆ. ಅದರ ನಾಮ ಪದಕ್ಕೆ ಸೇರ್ಸಿ ಈ ವಿಭಕ್ತಿನ ಪ್ರಯೋಗ ಆದೆ. ನಿಜವಾಗಿ ಇದ್ ಕ್ರಿಯಾಪದದೊಟ್ಟಿಗೆ ಸಂಬಂಧ ಹೊಂದ್‌ದ್‌ಲೆ. ಹಾಂಗಾಗಿ ಇದರ ವಿಭಕ್ತಿಗಳ ಸಾಲಿಗೆ ಸೇರ್ಸಿಕೆ ಸಾಧ್ಯ ಇಲ್ಲೆ. ಕನ್ನಡವ ಸಂಪ್ರದಾಯ ವ್ಯಾಕರಣಗಳ್ಲಿ ಇದರ ಹೇಳ್ಯೊಳೊ. ಆ ಕಾರಣಕಾಗಿ ಇಲ್ಲಿ ಸೇರ್ಸಿಯೊಳೆ.

ಉದಾ: ಮರ+ಏ → ಮರನೇ, ಮರನೇ ಹಣ್ಣ್ ಕೊಡು.
ದೇವ್ರು+ಏ → ದೇವ್ರೇ, ದೇವ್ರೇ ಒಳ್ಳೆ ಬುದ್ಧಿ ಕೊಡು.

ಇತರ ಕಡೆಗಳ್ಲಿ ನಾಮ ಪದದ ಅಂತ್ಯ ಸ್ವರನ ದೀರ್ಘ ಮಾಡಿರೆ ಸಾಕ್.
ರಾಮಾ, ಸೀತೇ, ಅಪ್ಪಾ, ಅವ್ವಾ ಇತ್ಯಾದಿ.

ಕೆಲೊವು ವೈಶಿಷ್ಟಗ

1. ದ್ವಿತೀಯಾ ಮತ್ತೆ ಷಷ್ಠೀ ವಿಭಕ್ತಿಗಳಿಗೆ ಏಕರೂಪ ಇರುದು ಅರೆಬಾಸೆನ ವೈಶಿಷ್ಟ.
2. ಹಳಗನ್ನಡಲಿ ಪೂರ್ಣ ಕ್ರಿಯಾಪದಗಳಿಗೆ ನಾಮ ವಿಭಕ್ತಿ ಪ್ರತ್ಯಯಗಳ ಸೇರ್ಸಿ ಆ ಕ್ರಿಯಾ ರೂಪನ ನಾಮಪದ ಆಗಿ ಬಳಕೆ ಮಾಡ್ದು ಸಾಧ್ಯ ಇತ್. ಹೊಸಗನ್ನಡ ರೂಪುಲಿ, ಕ್ರಿಯಾಪದಕ್ಕೆ –ಅವನು, ಅವಳು, ಉದುಂತೇಳ್ವ ದೂರಾರ್ಥಕ ನಿರ್ದೇಶಕ ಸರ್ವನಾಮಗಳ ಸೇರ್ಸಿ ಅವ್ಕೆ ವಿಭಕ್ತಿ ಪ್ರತ್ಯಯ ಸೇರ್ಸಿ, ಅಂಥ ನಾಮಪದಗಳ ಮಾಡಿಕಂಬೊದು ಮಾತ್ರ ಸಾಧ್ಯ.

ಹ.ಗ:
ಬಂದಂ+ಅ → ಬಂದನಂ, ಕಂಡಳು+ಅಂ → ಕಂಡಳಂ,
ಕೊಟ್ಟುದು + ಅಂ → ಕೊಟ್ಟುದಂ:
ಹೊಗ: (ಶಿಷ್ಟರೂಪ)

ಕ್ರಿಯಾ ವಿಶೇಷಣ+ಅವನು,/ ಅವಳು/ ಅವರು/ ಅದು/ ಅವುಗಳು → ಬಂದ +ಅವನು+ಅನ್ನು, ಬಂದವನನ್ನು /ಬಂದವಳನ್ನು....ಇತ್ಯಾದಿ.

ಅರೆಬಾಸೆ (ಗೌ.ಕ) ಇದೇ ಕ್ರಮ ಉಟ್ಟು.

ಉದಾ: ಬಂದ+ಅಂವ+ನ → ಬಂದವನ
ಬಂದ+ಅದ್+ರ → ಬಂದದರ (ಸ್ತ್ರೀಲಿಂಗ)
ಉಂಡ+ಅಂವ+ನ → ಉಂಡಂವನ–ಇತ್ಯಾದಿ.

3. ನಾಮಪದ, ಕ್ರಿಯಾಪದ ವ್ಯತ್ಯಾಸ

1. ಅಂವ ಹೈದ
2. ಅಂವ ಬಾತ್

ಇವೆರ್ಡೂ ಪೂರ್ಣ ವಾಕ್ಯಗೞೇ, ಪದಗಳ ಅರ್ಥನ ಬುಡ್ಸಿ ನೋಡಿರೆ 1ನೇ ವಾಕ್ಯೞಲಿಬಾವ 'ಹೈದ' ನಾಮಪದ. 2ನೇ ವಾಕ್ಯವ 'ಬಾತ್' ಕ್ರಿಯಾಪದ. ವಾಕ್ಯನ ವಿಶ್ಲೇಷಣೆ ಮಾಡ್‌ಕನ, ಆಖ್ಯೆ, ಆಖ್ಯಾತಂತ ಎರ್ಡ್ ವಿಭಾಗ ಆದವೆ. ಇವ್ಕೆ ಇಂಗ್ಲಿಷ್‌ಲಿ, Subject-Predicateಂತ ಹೇಳುವೆ. ಹೈದ ಮತ್ತೆ ಬಾತ್‌ಂತೇಳ್ವ ಎರ್ಡ್ ಪದಗೞೂ ಆಖ್ಯಾತಗ ಆಗಿ ಇಲ್ಲಿ ಕಂಡವೆ. ಅಂದರೆ 'ಹೈದ'ಂತೇಳ್ವ ಪದಕ್ಕೆ ನಾಮಪದಂತ ವಾಕ್ಯೞಲಿ ಹಣೆಪೊಟ್ಟಿ ಕೞಟ್ಟಿಕೆ ಸಾಧ್ಯ ಇಲ್ಲೆ. ಅದ್ ಅದರ ಸ್ಥಾನದ ಬಲಂದ, ಕ್ರಿಯಾಪದದ ಕಾರ್ಯ ಮಾಡ್ದೆ. ನಿಜವಾದ ಕ್ರಿಯಾಪದಅಲ್ಲದೆನೂ, ಅದ್ ವಾಕ್ಯಾರ್ಥನ ಪೂರ್ತಿ ಮಾಡ್ದೆ. ಹೀಂಗಿರ್ಕನ ಒಂದು ನೆಲೆಲಿ ನಾಮಪದ ಕ್ರಿಯಾಪದಂತೇಳುವ ವ್ಯತ್ಯಾಸ ಮರೆಯಾದೆ. ಇಂಥ ರಚನೆಗ ಕನ್ನಡಲಿ ಸಾಧ್ಯ. ಬೇರೆ ದ್ರಾವಿಡ ವರ್ಗದ ಬಾಸೆಗಲ್ಲಿಯೂ ಇದ್ ಸಾಧ್ಯ.

<u>**ಉದಾ:**</u> ಇದ್ ಮನೆ, ಇದ್ ಮರ, ನನ್ನ ಅಣ್ಣ; ನನ್ನ ಅಕ್ಕ–ಇತ್ಯಾದಿ.

4. <u>ಸರ್ವನಾಮಗ:</u>

ನಾಮಪದಗಳ ಬದ್‌ಲಿಗೆ ಆ ಸ್ಥಾನೞಲಿ ಬಾವ ರೂಪಗೞಳಿಗೆ 'ಸರ್ವನಾಮ'ಂತ ಹೇಳುವ ಹೆಸರ್ ಒಪ್ಪಿದೆ. ಈಗ ನಾವು ಇಂಗ್ಲಿಷಿನ ಮಾದರಿಗಳ ಅನುಸರ್ಸಿ ಉತ್ತಮ ಪುರುಷ, ಮಧ್ಯಮ ಪುರುಷ, ಮತ್ತೆ ಪ್ರಥಮ ಪುರುಷಗಳ ಹೇಳುವ ರೂಪಗಳ ಎಲ್ಲದನ್ೂ 'ಸರ್ವನಾಮ'ಂತ(=Pronoun)ಕರ್ದವೆ. ಆದರೆ ಹಳಗನ್ನಡ ವ್ಯಾಕರಣ ಸಂಪ್ರದಾಯೞಲಿ, ದೂರಾರ್ಥಕ, ಮತ್ತೆ ಸಮೀಪಾರ್ಥಕ ನಿರ್ದೇಶಮಾಡುವ ರೂಪಗಳ ಮಾತ್ರ ಸರ್ವನಾಮಗಂತ ಕರ್ದವೆ. ಉ.ಪು, ಮ.ಪು.ನ ಹೇಳುವ ರೂಪಗಳಿಗೆ ಅವರ್ದೇ ಆದ ಒಂದು ಹೆಸರ್ ಇಲ್ಲೆ. ಹಳಗನ್ನಡ ವ್ಯಾಕರಣಗಲ್ಲಿ ಇವ್ಕೆ ನೀನ್, ಆನ್ ತಾನ್‌ಗಳ್‌ಂತ ಕರ್ದವೆ. ಈಗ ಈ ಎಲ್ಲಾ ರೂಪುಗಳ್ೂ ಸೇರ್ಸಿ ಸರ್ವನಾಮಂತ ಕರಿದು ಇಂಗ್ಲಿಷ್ ಮಾದರಿಂದ, ಅದೂ, ಪಾಶ್ಚಾತ್ಯರ್ ನಮ್ಮ ದೇಸೀ ಬಾಸೆಗಳಿಗೆ ವ್ಯಾಕರಣ ರಚಿಸಿದ ಮೇಲೆ ರೂಢಿಗೆ ಬಾತ್‌ಂತ ಕಂಡದೆ.

<u>4.1 ಸರ್ವ ನಾಮಗೞಳಿಗೆ ವಿಭಕ್ತಿ ಪ್ರತ್ಯಯ ಸೇರುದು:</u>

4.1.1 ಉತ್ತಮ ಪುರುಷ ಸ.ನಾ.ಕ್ಕೆ ಪ್ರಥಮಾ ಸೇರುದು.

ನಾ+ø ಏನೂ ಬದಲಾವಣೆ ಇಲ್ಲೆ. ನಾವು+ø-

<u>**ಉದಾ:**</u> ನಾ ಬನ್ನೆ; ನಾವು ಬಂದವೆ.

4.1.2 ಉ.ಪು.+ ದ್ವಿತೀಯಾ ವಿಭಕ್ತಿ:

ನಾ → ನನ್ +ಅ → ನನ್ನ, **ಉದಾ:** ನನ್ನ ಕರಿಬೇಡ.

ನಾವು → ನಮ್+ಅ → ನಮ್ಮ, **ಉದಾ:** ನಮ್ಮ ಕೇಳ್ಬಡ.

4.1.3 ಉ.ಪು + ತೃತೀಯಾ; ನಾ → ನನ್+ಂದ → ನನ್ನಂದ

ಉದಾ: ನನ್ನಂದ ಆಕಿಲೆ.

4.1.4 ಉ.ಪು.+ಚತುರ್ಥಿ:

ನಾ → ನಂ+ಗೆ **ಉದಾ:** ನಂಗೆ ಕೊಡು

ನಾವು+ಗೆ → ನಾವ್ಗೆ ಕೊಡು;

4.1.5 ಉ+ಪಂಚಮಿ.ವಿ. ತೃತೀಯಾ ಸೇರ್ಕನ ಇದ್ದಾಂಗೆ

ಪಂಚಮಿ ಮತ್ತು ತೃತೀಯಾ ರೂಪ‌ಎಲಿ ಒಂದೇತರ

ನಾ+ನ್ದ → ನನ್ನಂದ, ನನ್ನಂದ ತಕಣ್ತ್

4.1.6 ನಾ+ಷ.ವಿ. ನಾ+ಅ → ನನ್ನ; ನನ್ನ ಮನೆ.

4.1.7 ನಾ+ಸ.ವಿ. ನಾ+ಅಲ್ಲಿ → ನನ್ನಎಲ್ಲಿ ನನ್ನಎಲಿ ಆ ಪುಸ್ತಕ ಉಟ್ಟು (ಇದು ಅಪರೂಪ; ಹಕ್ಕಲೆ, ಒಟ್ಟಗೆಂತೇಳ್ವ ಪ್ರತ್ಯೇಕ ಪದಗಳ್ಂದ ಈ ಅರ್ಥಎಲಿ ಪ್ರಯೋಗ ಮಾಡ್ದು ರೂಢಿ)

ಮಧ್ಯಮ ಪುರುಷ (ನೀ, ನೀವು), ಆತ್ಮಾರ್ಥಕ (ತಾನ್, ತಾವು) ಸ.ನಾ.ಗಳಿಗೂ ಇದೇ ರೀತಿ ವಿಭಕ್ತಿ ಪ್ರತ್ಯಯಗ ಸೇರುವೆ.

ವಿಭಕ್ತಿಂತೇಳಿರೆ ಅರ್ಥನ ವಿಭಾಗಿಸಿಕೊಡುದುಂತ ಅರ್ಥ. ಅಂದರೆ ನಾಮ ಪ್ರಕೃತಿಗ ವಾಕ್ಯಎಲಿ ಪ್ರಯೋಗ ಆಕನ, ಈ ವಿಭಕ್ತಿಂತೇಳ್ದು. ವಾಕ್ಯದ ಕ್ರಿಯಾಪದದೊಟ್ಟಿಗೆ ಯಾವ ಸಂಬಂಧಎಲಿ ಉಟ್ಟೂಂತ ತೋರ್ಸಿದೆ. ಇದಿಕೆ ವ್ಯಾಕರಣ ಪರಿಭಾಷೆಲಿ ಕಾರಕ ಸಂಬಂಧಂತ ಹೇಳುವೆ. ಷಷ್ಠೀ ವಿಭಕ್ತಿ, ನಾಮ–ಕ್ರಿಯಾ ಸಂಬಂಧನ ಹೇಳದೆ ನಾಮ–ನಾಮ ಸಂಬಂಧನ ತೋರ್ಸುದರ್ಂದ, ಈ ವಿಭಕ್ತಿಗಳ ಸಾಲ್‌ಲಿ ಅದಿಕೆ ಸ್ಥಾನ ಇಲ್ಲೆಂತ ಕೆಲೊವು ಪಂಡಿತರ ವಾದ. ಸಂಪ್ರದಾಯ ವ್ಯಾಕರಣಗಳ್ಲಿ ಅದರ ತೆಗ್ದ್‌ಹಾಕದೆ ಒಳ್ದವರೊಟ್ಟಿಗೆ, ಸಮಪಂಕ್ತಿ ಕೊಟ್ಟೊಳೊ. ಅದೇ ರೀತಿ ಇಲ್ಲಿನೂ ಅದ್ ಉಟ್ಟು. ಅದೂ ಅಲ್ಲದೆ ಒಳ್ದ ಎಲ್ಲ ವಿಭಕ್ತಿಗಳ್ಳೂ ಅದರ್ಲೇ ಐಕ್ಯಮಾಡಿಕೂ ಸಾಧ್ಯ ಉಟ್ಟು.

5. ಪ್ರಥಮಪುರುಷ ದರ್ಶಕ ಸರ್ವನಾಮಗ (First Person Demonstrative Pronoun)

ಇದರ್ಲಿ ದೂರಾರ್ಥಕ, ಸಮೀಪಾರ್ಥಕಂತ ಎರ್ಡ್ ವಿಧ.

5.1 ದೂರಾರ್ಥಕ — ಅಂವ (ಪು) ಅದ್ (ನಪುಂ, ಸ್ತ್ರೀ)
ಅವು (ಬ.ವ.ಪುಲ್ಲಿಂಗ ವರ್ಗ)

5.2 ಸಮೀಪಾರ್ಥಕ: — ಇಂವ (ಪು), ಇದ್ (ನಪುಂ, ಸ್ತ್ರೀ)
ಇವು (ಪುಲ್ಲಿಂಗ ವರ್ಗ, ಬ.ವ)

5.3 ಸರ್ವನಾಮ ರೂಪುಲಿ ಮಾತ್ರ ಲಿಂಗ ವ್ಯತ್ಯಾಸ ಕಂಡರೂ ವಾಕ್ಯಲಿ ಪ್ರಯೋಗ ಆಕನ, ಸಂವಾದಿಯಾದ ಕ್ರಿಯಾಪದ ನಪುಂಸಕ ರೂಪಲೆ ಇದ್ದದೆ.

ಉದಾ: ಅಂವ ಬಾತ್ ಅದ್ ಬಾತ್,
ಇಂವ ಬಾತ್ ಇದ್ ಬಾತ್
ಅಂವ ಕೊಟ್ಟೆತ್; ಅದ್ ಕೊಟ್ಟೆತ್
ಅಂವ ತೀಂತ್; ಇಂವ ತೀತ್

5.4 ಬಹುವಚನಲಿ, ಒಂದೇ ಕ್ರಿಯಾಪದ ರೂಪ, ದೂರ, ಸಮೀಪ ಎರ್ಡಕೂ ಬಂದದೆ (ಲಿಂಗ ಸೂಚನೆ ಇಲ್ಲೆ).

ಉದಾ: ಅವು ಬಂದವೆ; ಇವು ಬಂದವೆ
ಅವು ಬಂದೊ; ಇವು ಬಂದೊ
ಅವು ತಿಂದೊ; ಇವು ತಿಂದೊ
ಅವು ಹೋದೊ; ಇವು ಹೋದೊ.

6. ಉತ್ತಮ, ಮಧ್ಯಮ ಪುರುಷ ಸರ್ವನಾಮಗಳ ಬಹುವಚನರೂಪ :

6.1 ನಾ, ನೀ ಇವ್ಕೆ ಬಹುವಚನ ಪ್ರತ್ಯಯ ಸೇರ್‌ಕನ ನಾವು, ನೀವುಂತಾದವೆ. ಇವ್ಕೆ ಸ್ವರ ರೂಪದ ವಿಭಕ್ತಿ ಪ್ರತ್ಯಯಗ ಸೇರ್‌ಕನ ನಾ–ನೀ–ಗ ಹ್ರಸ್ವ ರೂಪ ತಾಳಿ ವಿಭಕ್ತಿ ಪೂರ್ವಲಿ ದ್ವಿ ತ್ವ ರೂಪದ ಮ ಆಗಮ ಆದೆ. (ಏಕವಚನಕ್ಕೆ –ಸ್ವರ ರೂಪದ ವಿಭಕ್ತಿ ಪ್ರತ್ಯಯ ಸೇರ್‌ಕನ, ನಾ–ನಿ–ಗೆ ಹ್ರಸ್ವರೂಪ ಬಂದ್, ದ್ವಿತ್ವ ರೂಪದ ನ ವಿಭಕ್ತಿ ಪೂರ್ವದ ಆಗಮ ಆದೆ.)

6.1.1 ನಾವು+ದ್ವಿತೀಯ ವಿಭಕ್ತಿ: ನ+ಮ್ಮ್+ಅ → ನಮ್ಮ
ನಾವು+ದ್ವಿತೀಯ ವಿಭಕ್ತಿ: ನಿ+ಮ್ಮ್+ಅ → ನಿಮ್ಮ
ನಮ್ಮ ಕರಿಬೇಡ; ನಮ್ಮ ಕೇಳ್ಬಡ
ನಮ್ಮ ಕರ್ತ್‌ಲೆ; ನಿಮ್ಮ ಕರ್ತ್‌ಲೆ.

6.1.2 ದ್ವಿತೀಯೆಗೂ ಷಷ್ಠಿಗೂ ಏಕರೂಪ ಇರುದರ್‌ಂದ, ಅಲ್ಲಿಯೂ ಹೀಂಗೆನೇ ಉಟ್ಟು : ನಮ್ಮ ಮನೆ, ನಮ್ಮ ಊರು, ನಮ್ಮ ಮಾತ್.

6.1.3 ತೃತೀಯಾ ವಿಭಕ್ತಿ ಸೇರ್‌ಕನೂ, –ಮ– ಆದೇಶ ಆದೆ.
ಉದಾ: ನಾವ್+ನ್ದ → ನಮ್ಮಂದ, ನಮ್ಮಂದ ಆಕಿಲೆ

6.1.4 ತೃತೀಯಾ ಮತ್ತೆ ಪಂಚಮಿಗೂ ಏಕರೂಪ.
<u>**ಉದಾ**</u>: ನಮ್ಮಂದ ಎಳ್ಕಂಡೊ, ನಿಮ್ಮಂದ ತಕಣೆ.
ಚತುರ್ಥಿ ವಿಭಕ್ತಿ ಸೇರ್‌ಕನ ಪ್ರಾದೇಶಿಕ ವ್ಯತ್ಯಾಸ ಕಂಡದೆ. ಕೆಳಗಿನ ಕೊಡ್ಗ್, ಮತ್ತೆ ದಕ್ಷಿಣ ಕನ್ನಡ ಜಿಲ್ಲೆಲಿ ಬಹುವಚನ ರೂಪ : ನಾವ್, ನೀವ್‌ಂತ ಹೇಳ್ವ ರೂಪುಗಳಿಗೆ–ಗೆ ನೇರವಾಗಿ ಸೇರ್ದೆ. ನಾವ್‌ಗೆ; ನೀವ್‌ಗೆ; ನಾವ್ಗೆ ಬೇಕು; ನೀವ್ಗೆ ಕೊಡುವೆ. ಮೇಲೆನ ಕೊಡ್ಗ್‌ಲಿ, ನಾವ್–ನಮಿ–ನೀವ್–ನಿಮಿ ಆಗಿ ಅವ್ಕೆ–ಗೆ ಪ್ರತ್ಯಯ ಸೇರ್ದೆ. ನಮಿಗೆ ಬೇಕು; ನಮಿಗೆ ಕೊಟ್ಟನೆ.

7.0 <u>ಪ್ರಶ್ನಾರ್ಥಕ ಸರ್ವ ನಾಮ:</u>

7.1 ಯಾಂವಂತ ಏಕವಚನಲಿ ಕೇಳಕ್. ಆದರೆ ಬಹುವಚನಲಿ ಯಾರ್‌ಂತೇಳ್ದು ಎರ್ಡ್ ವಚನಳಿಗೊ ಸಮಾನ ರೂಪ.
<u>**ಉದಾ:**</u> ಯಾರ್ ಆ ಹೈದ? ಯಾರ್ ಆ ಗೂಡೆ?
ಯಾರ್ ಹೇಳ್ದ್? ಯಾರ್ ಹೇಳ್ದೊ?
ಇವು ಮಹತ್ವರ್ಗಕ್ಕೆ ಸೇರ್ದ್ ರೂಪಗ, ಅಮಹತ್ ವರ್ಗಲಿ ಯಾದ್–ಯಾದ್ ಆಹೈದ? ಯಾದ್ ಆ ಗೂಡೆ.
ವಿಶೇಷಣ ರೂಪುಲಿ <u>ಯಾವ</u>
<u>**ಉದಾ:**</u> ಯಾವ ಮೊಂಯಿಸ? ಯಾವ ಊರು?

7.1.1 <u>ಪ್ರಶ್ನಾರ್ಥಕ ವಿಶೇಷಣ:</u>

ಒಂದು ವಸ್ತುನ ಪರಿಮಾಣ, ಕೆಲೊವು ಸಿರ್ತಿ ಉದ್ದೇಶಗಳ ಕುರಿತು ಹೇಳ್ದೆ.

ಅದಿಕೆ ಏನ್, ಏಕೆ, ಎಷ್ಟೆಂತ್ ಅರ್ಥಗ ಒಳೊ.

<u>**ಉದಾ:**</u> ಏನ್ ಬೆಲೆ = ಎಷ್ಟ್ ಬೆಲೆ? ಏನ್ ಕೆಲ್ಸ. ಏನ್ ತಿಂದ?


ಏನ್ – ಸಹಜ ಅಕರ್ಮಕ ಪದಗಳೆದ್‌ರ್ ಪ್ರಯೋಗ ಆದರೆ ಅದಿಕೆ ಯಾಕೆಂತಲೂ ಅರ್ಥ ಬಂದದೆ.

<u>**ಉದಾ**</u>: <u>ಏನ್</u> ಬಂದ = <u>ಯಾಕೆ</u>–ಬಂದ; <u>ಏನ್ ಓಡ್ತ್</u> = <u>ಯಾಕೆ ಓಡ್ತ್ ?</u> ತರ್ಬೇಡಂತ ಹೇಳಿದ್ದೆ, <u>ಏನ್ ತಂದ</u> = <u>ಯಾಕೆ ತಂದ.</u>

7.2 ದರ್ಶಕ ವಿಶೇಷಣಗಳ ರೂಪುಗಾದ, ಅ–,ಇ,ಎ–ಗëಳಿಗೆ ಸಪ್ತಮಿನ ಪ್ರತ್ಯಯ–ಲಿ ಸೇರ್‌ಕನ ಈ ರೂಪುಗ ಕಂಡವೆ.

ಅ+ಲಿ → ಅಲ್ಲಿ;   ಇ+ಲಿ → ಇಲ್ಲಿ;   ಎ+ಲಿ → ಎಲ್ಲಿ.

8. <u>**ವಚನ :**</u>



<u>**ಉದಾ:**</u> ಅಂವ, ಅದ್
ಇಂವ, ಇದ್

8.1 ನಪುಂಸಕ ವರ್ಗಕ್ಕೆ ಸೇರ್ದ ನಾಮ ಪದಗಳಿಗೆ –ಅಂತೇಳ್ವ ಪುಲ್ಲಿಂಗ ಪ್ರತ್ಯಯ ಸೇರಿ (ಪುಲ್ಲಿಂಗ ತದ್ಧಿತ ರೂಪಗ ಉಂಟಾದವೆ.)

ಉದಾ: ಕುರುಡು + ಅ → ಕುರುಡ

ಕುಂಟು + ಅ → ಕುಂಟ

ತುಂಟು + ಅ → ತುಂಟ

ಕುಳ್ಳು + ಅ → ಕುಳ್ಳ

ಕಳ್ + ಅ → ಕಳ್ಳ

(ಕಳ್ಳಂತೇಳ್ವ ಪದ ಶಿಷ್ಟಕನ್ನಡಂದ ನೇರವಾಗಿ ಎರವಲಾದ ರೂಪ ಆಗಿರ್ದು)

8.2 ಮೇಲೆ ಹೇಳ್ದ ನಾಮರೂಪಗಳಿಗೆ –ಇ ಪ್ರತ್ಯಯ ಸೇರಿ ಸ್ತ್ರೀಲಿಂಗ ನಾಮಪದಗ ಬಂದವೆ.

ಉದಾ:

ಕುರುಡು + ಇ ಕುರುಡಿ

ತುಂಟು + ಇ ತುಂಟಿ

ಕುಳ್ಳು + ಇ ಕುಳ್ಳಿ

(ಕಳ್ಳ ಪದಕೆ ಸಂವಾದಿಯಾಗಿ ಬಾವ ಸ್ತ್ರೀಲಿಂಗ ರೂಪ ಕಳ್ಳೆ. ಶಿಷ್ಟ ಕನ್ನಡಲಿ ಕಳ್ಳಿಂತಳೂ ಉಟ್ಟು).

8.3 ಶಿಷ್ಟ ಕನ್ನಡಂದ ಭಿನ್ನವಾದ ಕೆಲೊವು ಪದಗಳ ಇದರ್ಲಿ ಕಾಣಕ್ :–

ಮಗ(ನು) ಶಿ.ಕ. ಮಜ್ಜ (ಅರೆಬಾಸೆ)

ಮಗಳು ಶಿ.ಕ. ಮಗ (ಅರೆಬಾಸೆ)

ಮಗಂತೇಳ್ವ ಅಕಾಂತ ಸ್ತ್ರೀಲಿಂಗ ಪದಕ್ಕೆ ಬೇರೆ ಸ್ವರ ಪ್ರತ್ಯಯಗ ಪರವಾದರೆ (ಸ್ತ್ರೀಲಿಂಗ ಸೂಚಕ/ಬಹುವಚನ ಸೂಚಕ 'ಳ' ಆಗಮ ಆದೆ.)

ಉದಾ: ಮಗ+ಏ → ಮಗಳೇ, ಮಗ+ಅ → ಮಗಳ (ಮಗಳ ಮಕ್ಕ).

8.4 ಮಾನವ ವರ್ಗಲಿ ಗೌರವ ಬಹುವಚನ: –ರ್/–ಅವು

ಉದಾ: ಹಿರಿ+ಅರ್ → ಹಿರಿಯರ್; ಶ್ರೀಮಂತ+ಅರ್ → ಶ್ರೀಮಂತ:ರ್

ಬಡವ+ಅರ್ → ಬಡವರ್; ಕಿರಿಯ+ಅರ್ → ಕಿರಿಯರ್

ಹಿರಿಯ+ಅವು → ಹಿರಿಯೊವು; ಕಿರಿಯ+ಅವು → ಕಿರಿಯೊವು

ದೊಡ್ಡ+ಅವು → ದೊಡ್ಡೊವು; ಬಡ+ಅವು → ಬಡೊವು

9. ಕ್ರಿಯಾಪದ :

9.1 ಹಳಗನ್ನಡಅಲಿ ಕ್ರಿಯಾ ಮೂಲರೂಪಕ್ಕೆ (Verbal root)–ಕುಂ ಅಥವಾ –ಗುಂತೇಳ್ವ ಪ್ರತ್ಯಯಗ ಸೇರಿ ಪೂರ್ಣಕ್ರಿಯಾ ಪದಗಳ (Finite Verb) ರಚನೆ ಆವ ಕ್ರಮ ಇತ್ತ್. ಈ ಪ್ರತ್ಯಯಗ ಎಲ್ಲ ಕಾಲಗಅಳಿಗೂ, ಎಲ್ಲ ಲಿಂಗ, ವಚನಗಅಳಿಗೂ ಸಮಾನವಾಗಿತ್ತ್. ಈ ತರದ ಕ್ರಿಯಾಪದ ರಚನೆ ಈಗ ಮಲೆಯಾಳಂ ಭಾಷೆಲಿ ಮಾತ್ರ ಕಂಡದೆ. ಈಗನ ಕನ್ನಡಅಲಿ ಇದರ ಕೆಲವೇ ಕೆಲೊವು ಅವಶೇಷಗ ಮಾತ್ರ ಒಳ್ಡೊಳೊ.

ಉದಾ: ನಂಗೆ
ನಿಂಗೆ
ನಾವ್ಗೆ
ನೀವ್ಗೆ
ಅವಂಗೆ
ಅದಿಕೆ
ಅವ್ಕೆ
ಎಲ್ಲೊವ್ಕೆ
} ಸಾಕ್*
ಬೇಕ್*

* ಸಾಲ್ಗುಂ > ಸಾಕ್
* ವೇಳ್ಕುಂ > ಬೇಕ್

9.2 ಶಿಷ್ಟ ಕನ್ನಡರೂಪುಲಿ ಮೂರು ಕಾಲಗ, ಭೂತ, ವರ್ತಮಾನ, ಭವಿಷ್ಯತ್‌ಂತೇಳ್ವ ಕಾಲವಿವಕ್ಷೆ ಉಟ್ಟು. ವಾಕ್ಯದ ಆಖ್ಯೆರಿಲಿ ಯಾವ ನಾಮಪದ ಉಟ್ಟೋ ಅದಿಕೆ ಸಂವಾದಿಯಾದ ಕ್ರಿಯಾಪದಗಅಳಿಗೆ ಸಂವಾದಿಯಾದ ಆಖ್ಯಾತ ಪ್ರತ್ಯಯ (ಸರ್ವನಾಮ ಪ್ರತ್ಯಯ–Pronominal Termination) ಕ್ರಿಯಾ ಪದದ ಕೊನೆಗೆ ಬಂದ್ ಪೂರ್ಣ ಕ್ರಿಯಾಪದಂದ ಕೂಡ್ದ ವಾಕ್ಯ ರಚನೆ ಆದೆ. ಶಿಷ್ಟ ಕನ್ನಡಅಲಿ ಭೂತ ಮತ್ತು ಭವಿಷ್ಯತ್ಕಾಲದ ಕ್ರಿಯೆಗಅಳಿಗೆ ಒಂದೇ ತರದ ಸರ್ವನಾಮ ಪ್ರತ್ಯಯಗ ಒಳೊ. ವರ್ತಮಾನ ಕಾಲಕ್ಕೆ ಬೇರೆಯೇ ಆದ ಸರ್ವನಾಮ ಪ್ರತ್ಯಯ ಉಟ್ಟು.

9.2.1 ಅರೆಬಾಸೆಲಿ ಸರಳವಾದ ಪೂರ್ಣಕ್ರಿಯಾಪದದ ರಚನೆಂತೇಳ್ದು ಭವಿಷ್ಯತ್ಕಾಲದ ಕ್ರಿಯೆಲಿ ಮಾತ್ರ ಕಂಡದೆ.

ಅದರ ರಚನೆ ಹೀಂಗುಟ್ಟು:

St±Cs+T+pt =(st=Stemಕ್ರಿಯಾಮೂಲ± (=Plus/Minus)

Cs= causative (= ಪ್ರೇರಣಾರ್ಥಕ ಪ್ರತ್ಯಯ) +T

Tense, ಕಾಲವಾಚಕ=ವ್–ಭವಿಷ್ಯತ್ಕಾಲ ವಾಚಕ)

Pt=ಸ.ನಾ.ಪ್ರತ್ಯಯ

ಉದಾ: ಬರ್; ಬರ್+ಸ್+ವ್+ಎ → ಬರ್ಸುವೆ

ಬಾ+ವ್+ಎ ಬಾವೆ; ಬಾ+ವ್+ಅ → ಬಾವ

ನೀ ಬರ್ಸುವ; ಬಾ+ವ್+ಅ → ಬಾವ; (ಬರುವ)

ನಾ ಕೊಡ್+ಸ್+ವ್+ಎ → ನಾ ಕೊಡ್ಸುವೆ.

ನಾ ಕೊಡ್+ವ್+ ಎ → ನಾ ಕೊಡುವೆ.

ನಾ ಕೊಡ್+ಸ್+ವ → ನೀ ಕೊಡ್ಸುವ.

ನಾ ಹೊಡಿ+ಸ್+ವ್+ಎ → ನಾ ಹೊಡ್ಸುವೆ.

ನಾ ಹೊಡಿ+ವ್+ಎ → ನಾ ಹೊಡಿವೆ.

ನಾವು ಕೊಡ್+ಸ್+ವ್+ಎ → ನಾವು ಕೊಡ್ಸುವೆ/ಕೊಡ್ಸುವೊ

ನೀವು ಕೊಡ್+ಸ್+ವ್+ಅರಿ → ನೀವು ಕೊಡ್ಸುವಁರಿ

ನೀವು ಕೊಡ್+ವ್+ಅರಿ → ನೀವು ಕೊಡುವಁರಿ

9.2.3 ಅರೆಬಾಸೆಲಿ ವರ್ತಮಾನ, ಭೂತ ಮತ್ತೆ ಭವಿಷ್ಯತ್ಕಾಲದ ಕ್ರಿಯೆಗಳ ರಚನೆಲಿ, ಕ್ರಿಯಾಪದದ ಮೂಲರೂಪ ಕಾಂಬೊದು ಭವಿಷ್ಯತ್ಕಾಲದ ಕ್ರಿಯೆಗಳ್ಲಿ ಮಾತ್ರ. ವರ್ತಮಾನ ಕ್ರಿಯಾರೂಪಕ್ಕೆ ಭೂತಕಾಲವೇ ಮೂಲವಾಗುಟ್ಟು, ಇದೊಂದು ಸಂಯುಕ್ತ ರೂಪದ ಕ್ರಿಯಾಪದವಾಗಿ ಕಂಡದೆ.

ಉದಾ:

	ವರ್ತಮಾನ	ಭೂತಕಾಲ	ಭವಿಷ್ಯತ್ಕಾಲ
ನಾ	ಬನ್ನೆ(ಬಂದನೆ)	ಬಂದೆ	ಬಾವೆ
ನೀ	ಬಂದಿಯ	ಬಂದ	ಬಾವ
ನಾವು	ಬಂದವೆ	ಬಂದೆ(ಬಂದೊ)	ಬಾವೊ
ನೀವು	ಬಂದರೆ	ಬಂದಁರಿ	ಬಾವೊರಿ
ನಾ	ಕೊಟ್ಟನೆ	ಕೊಟ್ಟೆ	ಕೊಡುವೆ
ನಾವು	ಕೊಟ್ಟವೆ	ಕೊಟ್ಟೊ	ಕೊಡುವೊ
ನಾ	ಹೋನೆ	ಹೋದೆ	ಹೋವೆ
ನಾವು	ಹೋದವೆ	ಹೋದೊ	ಹೋವೊ
ನೀ	ಹೋದಿಯ	ಹೋದ	ಹೋವ
ನೀವು	ಹೋದರೆ	ಹೋದಁರಿ	ಹೋವಁರಿ
ಅಂವ	ಬಂದದೆ	ಬಾತ್	ಬಾದು
ಅದ್	ಬಂದದೆ	ಬಾತ್	ಬಾದು
ಅವು	ಬಂದವೆ	ಬಂದೊ	ಬಾವೊ

ಪ್ರಥಮ ಪುರುಷ ಸರ್ವನಾಮ ರೂಪುಲಿ ಪುಲ್ಲಿಂಗ, ಪುಲ್ಲಿಂಗೇತರಂತ ವ್ಯತ್ಯಾಸ ಇದ್ದರೂ ವಾಕ್ಯಲಿಬಾವ ಕ್ರಿಯಾಪದಣಲಿ ಆ ವ್ಯತ್ಯಾಸ ಇಲ್ಲೆ. ಪೂರ್ಣ ಕ್ರಿಯಾಪದ ನಪುಂಸಕ ಲಿಂಗನ ಮಾತ್ರ ತೋರ್ಸಿದೆ.

9.2.4 ಬನ್ನೆ, ಹೋನೆ: ಈ ಎರ್ಡ್ ಕ್ರಿಯಾಪದಗ ವಿಶೇಷವಾಗಿ ಕಂಡವೆ. ಶಿಷ್ಟ ಕನ್ನಡಣಲಿ ಬರುತ್ತೇನೆ, ಹೋಗುತ್ತೇನೆಂತ ಇದ್ದ್, ಕ್ರಿಯಾ ಮೂಲ, ಕಾಲವಾಚಕ ಮತ್ತೆ ಸರ್ವನಾಮ ಪ್ರತ್ಯಯಗಳ ಪ್ರತ್ಯೇಕ ಪ್ರತ್ಯೇಕವಾಗಿ ಗುರ್ತಿಸಿಕೆ ಸಾಧ್ಯ ಉಟ್ಟು. ತರ್-ಂತೇಳ್ವಧಾತು ಕೂಡ ತನ್ನೆಂತ ಆದೆ. ತರ್-ಬರ್-ಂತೇಳುವ ಧಾತುಗಳ ಭೂತರೂಪ ಧಾತುಗ ತನ್-, ಬನ್-ಂತ ಆದವೆ. ಈ ಮೂರರ‍್ಲೂ ಧಾತು+ಕಾಲವಾಚಕ+ಸರ್ವನಾಮ ಪ್ರತ್ಯಯಂತ ಬೇರೆ ಬೇರೆ ವಿಂಗಡ್ಸಿಕೆ ಸಾಧ್ಯ ಆದುಲೆ. ಅವೆಲ್ಲವೂ ಸೇರಿರುವ ಸಂಶ್ಲಿಷ್ಟ (Inflected)ರೂಪುಗ ಆಗಿ ಸೇರಿಹೋಗೊಳೊಂತ ಕಂಡದೆ. ಬಂದನೆ>ಬನ್ನೆ, ಹೋದನ>ಹೋನೆ; ತಂದನೆ>ತನ್ನೆಂತ ಆಗಿರೊಕೂಂತ ಹೇಳೊಕಾದೆ.

ವಿಶೇಷಂತೇಳಿರೆ, ಬನ್ನೆ, ಹೋನೆಂತೇಳುವ ಕ್ರಿಯಾಪದಗ ಅರೆಬಾಸೆಲಿದ್ದಾಂಗೇ ನೀಲಗಿರಿನ ಬಡಗರ ಮಾತ್‌ಲೂ ಬಳಕೆ ಆದೆ. ಬಡಗರೂ ಸಾ ತಮ್ಮ ಜಾತಿನ 'ಗೌಡ'ಂತೇ ಕರ್ಕಂಡವೆ. ನಮ್ಮ ಇತ್ತನ ಗೌಡರಿಗೂ, ಇವ್ಕೂ ಏನಾರ್ ಸಾಂಸ್ಕೃತಿಕ ಸಂಬಂಧ ಉಟ್ಟೋಂತ ನೋಡುವ ಒಂದು ಶಾಸ್ತ್ರೀಯ ಅಧ್ಯಯನದ ಅಗತ್ಯ ಉಟ್ಟು.

9.2.5 ಮೇಲೆ ಪೊಟ್ಟಿ ಮಾಡಿಕೊಟ್ಟ ಕ್ರಿಯಾಪದಗಳ ವಿಶ್ಲೇಷಣೆ ಮಾಡಿರೆ ಈ ಕೆಳಗೆ ತೋರ್ಸಿದ ವಿನ್ಯಾಸ ಕಂಡದೆ.

<u>**ಬಂದವೆ:**</u> ಬನ್$_1$-ದ್$_2$-ಅವೆ$_3$(1.ಭೂತ ಮೂಲ-2 ಭೂತಕಾಲವಾಚಕ-3.ಉ.ಪು.ಬ.ವ. ಪ್ರತ್ಯಯ)

(ಭೂತ ಕಾಲ ರಚನೆ ಆಗಿದ್ದರೂ ಪ್ರಯೋಗ ಆದು ವರ್ತಮಾನ ಕಾಲದ ಅರ್ಥಣಲಿ).

<u>**ಬಂದಿಯ:**</u> ಬನ್$_1$-ದ್$_2$-ಇಯ$_3$ (ಭೂ.ಮೂಲ-2 ಕಾಲವಾಚಕ-3ಮ.ಪು.ಏ.ವ).

<u>**ಬಂದರೆ:**</u> ಬನ್$_1$+ದ್$_2$+ಅರೆ$_3$(1ಭೂತಮೂಲ-2 ಕಾಲವಾಚಕ-3ಮ.ಪು.ಸ.ನಾ)

<u>**ಕೊಟ್ಟನೆ:**</u> ಕೊಡ್$_1$ +ಟ್$_2$ +ಅನೆ$_3$ (ಕ್ರಿಯಾಧಾತು$_1$ - ಕಾಲವಾಚಕ, ಭೂತಕಾಲ$_2$- ಉ.ಪು.ಏ.ವ$_3$)

<u>**ಕೊಟ್ಟವೆ:**</u> ಕೊಡ್$_1$ +ಟ್$_2$ +ಅವೆ$_3$ (ಕ್ರಿಯಾಧಾತು$_1$ + ಭೂತಕಾಲವಾಚಕ$_2$- ಉ.ಪು.ಬ.ವ$_3$)

<u>**ಹೋದವೆ:**</u> ಹೋ$_1$ +ದ್$_2$ +ಅವೆ$_3$ (1ಕ್ರಿ.ಧಾ$_1$ + ಭೂ.ಕಾಲವಾಚಕ$_2$- ಉ.ಪು.ಬ.ವ$_3$)

<u>**ಹೋದಿಯ:**</u> ಹೋ$_1$ +ದ್$_2$+ಇಯ$_3$ (1.ಕ್ರಿ.ಧಾ+ ಭೂ.ಕಾಲವಾಚಕ$_2$- ಮ.ಪು.ಏ.ವ$_3$)

<u>**ಹೋದರೆ:**</u> ಹೋ$_1$ +ದ್$_2$+ಅರೆ$_3$ (ಕ್ರಿ.ಧಾ$_1$ + ಭೂ.ಕಾಲವಾಚಕ$_2$- ಮ.ಪು.ಬ.ವ$_3$)

<u>ಬಂದದೆ:</u> ಬನ್$_1$+ದ್+ಅದೆ$_3$ (ಕ್ರಿ.ಧಾ$_1$ + ಭೂತಕಾಲವಾಚಕ$_2$– ಮ.ಪು.ಏ.ವ$_3$)
<u>ಬಂದವೆ:</u> ಬನ್$_1$+ದ್+ಅವೆ(ಕ್ರಿ.ಧಾ$_1$ + ಭೂತಕಾಲವಾಚಕ$_2$–ಪ್ರ.ಪು.ಬ.ವ$_3$)

9.5.6 ಅರೆ ಬಾಸೆಲಿ ವರ್ತಮಾನ ಪೂರ್ಣಕ್ರಿಯೆಲಿ ತೋರ್ಸಿಕೆ ಯಾವ ಪ್ರತ್ಯಯ ರೂಪೊನೂ ಇಲ್ಲೆ. ಭೂತಕಾಲದ ಮೂಲಕವೇ ವರ್ತಮಾನ ಕಾಲಾರ್ಥನ ತಿಳಿಯಾಕಾದೆ. ಸರ್ವನಾಮ ಪ್ರತ್ಯಯ ರೂಪಗಾಂತ ಹೇಳ್ದ ರೂಪಗಳ ಯಾದೋ ಪದಖಂಡಗಾಗಿರ್ದುಂತ ವಿಶ್ಲೇಷಣೆ ಮಾಡಿಕೆ ಸಾಧ್ಯ ಉಟ್ಟು. ಆ ತರ ವಿಶ್ಲೇಷಣೆ ಮಾಡಿಕೆ ಹೊರ್ಟರೆ ಫಲಿತಾಂಶ ತುಂಬ ಜಿಗ್‌ಟಾದೆ. ಹಾಂಗೆ ಈ ಸುಲಭ ಮಾರ್ಗನ ಅನುಸರ್ಸುದು ಮೇಲ್‌ಂತ ಕಂಡದೆ. ಸ್ವತಂತ್ರವಾದ ವರ್ತಮಾನ ಕಾಲಸೂಚಕ ಪ್ರತ್ಯಯ ಈ ಬಾಸೆಲಿ ಇಲ್ಲೇ ಇಲ್ಲೆಂತ ಹೇಳಿಕೆ ಸಾಧ್ಯ ಇಲ್ಲೆ. ಒಂದು ಕ್ರಿಯೆ ನಡ್ಕಣಂಡೇ ಉಟ್ಟೊಂತ (ಕ್ರಿಯೆನ ನಿರಂತರತೆನ) ಹೇಳುವ ಸಂದರ್ಭಣಲಿ, –ತ್ತಾ–ಂತ ಹೇಳುವ ರೂಪ ಉಟ್ಟು.

<u>ಉದಾ:</u> ಓದುತ್ತಾ ಕುದ್ದುಟು;
ಆಡ್‌ತ್ತಾ ಉಟ್ಟು;

ಈ ತರದ ರಚನೆಗ ಪ್ರತ್ಯಯಾತ್ಮಕವಾದ್ದ್, (Morphological).

ಇದೇ ಅರ್ಥನ ವಾಕ್ಯಾತ್ಮಕವಾಗಿ(Syntactical) ಒಂದು ಪದನ್ನೋ ಪದಖಂಡನ್ನೋ ಬಳಸಿ ತೋರ್ಸಿಕೆ ಸಾಧ್ಯ ಉಟ್ಟು.

<u>ಉದಾ:</u> ಓದಿ + ಕಣಂಡ್ ಕುದ್ದುಟು; ಆಡಿಕಣಂಡ್ ಉಟ್ಟು.

9.5.7. ಬಾ$_1$ ಹೋಗು. ತಾಂತೇಳ್ವ ಕ್ರಿಯಾದಾತುಗಳ ರಚನೆ ಒಳ್ದ ಕ್ರಿಯಾ ರಚನೆಗಳ್‌ಂದ ಭಿನ್ನ ರೀತಿಲಿ ಕಂಡದೆ. ಹಾಂಗೆ ಇವರ ಪ್ರತ್ಯೇಕ ಗುಂಪಾಗಿ ವಿವರ್ಸುವ ಅಗತ್ಯ ಉಟ್ಟು.

ಧಾತು ರೂಪದ ಮೂಲರೂಪದ ದೀರ್ಘ ಸ್ವರ ಹ್ರಸ್ವ ಆದೆ. 'ನ್' ಅನುನಾಸಿಕದ ಆಗಮ ಆದೆ. ಆ ಮೇಲೆ ಕಾಲವಾಚಕಾದಿ ಪ್ರತ್ಯಯಗ ಸೇರುವೆ.

ಉದಾ: ತಾ → ತನ್ + ದ್ + ಎ → ತಂದೆ (ಉ.ಪು.ಏ.ವ)
ಬಾ → ಬನ್+ ದ್ + ಅ → ಬಂದ (ಮ.ಪು.ಏ.ವ)

ಹೋಗು – ಂತೇಳ್ವ ಧಾತುಗೆ, ಅನುನಾಸಿಕ ಆಗಮ ಇಲ್ಲೆ. ಹೋ–ಂತೇಳ್ವ ಉಪರೂಪಕ್ಕೆ ಕಾಲವಾಚಕ ಪ್ರತ್ಯಯ ಸೇರ್ದೆ.

ಹೋ–ದ್–ಎ → ಹೋದೆ.

ಹೋಗು– ಬಾ–ಂತೇಳ್ವ ಧಾತುಗಳ, ವರ್ತಮಾನ, ಭವಿಷ್ಯದ್ ಆಶಯ ಕ್ರಿಯಾ ಸೂಚನೆ (ಉ.ಪು.ಏ.ವ) ಹೋನೆ, ಬನ್ನೆಂತ ಪ್ರಯೋಗ ವೈಶಿಷ್ಟವೂ ಉಟ್ಟು. ಆ ಬಗ್ಗೆ ಹಿಂದನೇ ಸೂಚಿಸಿ ಆಗುಟ್ಟು–

9.6 ಅಪೂರ್ಣ ಕ್ರಿಯಾಪದ:

ಒಂದು ವಾಕ್ಯಲಿ ಪೂರ್ಣ ಕ್ರಿಯಾಪದ, ಆ ವಾಕ್ಯನ ಪೂರ್ತಿ ಮಾಡ್ದೆ. ಪೂರ್ಣ ಕ್ರಿಯಾಪದದ ಅಂತ್ಯಲಿ, ಸರ್ವನಾಮ ಪ್ರತ್ಯಯ ಇದ್ದದೆ. ಅಪೂರ್ಣ ಕ್ರಿಯಾಪದಲಿ ಅದ್ ಇಲ್ಲೆ. ವಾಕ್ಯನ ಪೂರ್ತಿ ಮಾಡಿಕೆ ಅಪೂರ್ಣ ಕ್ರಿಯಾಪದನ ಹಿಂದೆಕಂಡ್ ಒಂದು ಪೂರ್ಣ ಕ್ರಿಯಾಪದ ಬಂದೇ ತೀರೊಕು. ಉದಾ:ಅಂವ ಬಂದ್ ಹೋತು. ಈ ವಾಕ್ಯದ ಹಿನ್ನೆಲೆಲಿ ಎರ್ಡ್‌ವಾಕ್ಯಗ ಅಂತರ್ಗತ ಆಗಿ ಒಳೊ. ಅಂದರೆ ಅಂವ ಬಾತ್ (1). ಅಂವ ಹೋತು (2).

9.6.1 ಇದರ ಭೂತ ಕೃದ್ವಾಚಿಂತ ಕರ್ದವೆ(Part Adverbial Participle)

ಈ ಕೆಳಗೆ ಕೆಲೊವು ಉದಾಹರಣೆಗ:

ಆಗ್ + ಇ → ಆಗಿ – ಹಾಳಾಗಿ ಹೋತು.

ಕೇಳ್ + ಇ → ಕೇಳಿ – ಕೇಳಿ ಹೇಳ್

ಕಟ್ಟ್ + ಇ → ಕಟ್ಟಿ – ಕಟ್ಟಿ ಹೊತ್ತತ್

ಕೀಳ್ + ತ್ → ಕಿತ್ತ್ ಹಾಕಿತ್.

ಕೇಳ್ + ಇ → ಕೇಳಿ, ಕೇಳಿ ಹೇಳ್ನೆ.

ಕೂಡ್ +ಟ್ಟ್ → ಕೊಟ್ಟ್, ಕೊಟ್ಟ್ ಬನ್ನೆ.

9.6.2 ಕ್ರಿಯಾ ವಿಶೇಷಣ (Adjectival Participle)

ಅಪೂರ್ಣ ಕ್ರಿಯಾಪದದ ಕಾಲವಾಚಕ ಪ್ರತ್ಯಯಕ್ಕೆ – ಅಂತೇಳುವ ಪ್ರತ್ಯಯ ಬಂದ್ ಅದರ ಹಿಂದೆಕಂಡ್ ಒಂದು ನಾಮಪದ ಬಂದದೆ. ಈ ನಾಮಪದದ ಪೂರ್ವಲಿ ಬಾವ ಕ್ರಿಯಾರೂಪ ಇದಿಕೆ ವಿಶೇಷಣ ಆಗಿ ಕಾರ್ಯ ನಿರ್ವಹಿಸಿದೆ.

ಉದಾ:

ಹೇಳ್ದ + ಕೆಲ್ಸ, ಹೇಳ್ದ ಕೆಲ್ಸ ಆತೋ?

ಕಳ್ಸಿದ + ಹಣ, ಕಳ್ಸಿದ ಹಣ ಸಿಗ್ತೋ?

ಹೇಳ್ + ವ+ ಕೆಲ್ಸ, ಹೇಳ್ವ ಕೆಲ್ಸನ ಮಾಡುವನೋ?

10. ನಿಷೇಧ ಕ್ರಿಯಾಪದ: –ಇಲ್ಲೆ, ಅಲ್ಲ;

ಇದ್ ವಾಕ್ಯಾತ್ಮಕ ರಚನೆ.(Syntactic Construction)

ನಪುಂಸಕ ಏಕವಚನ, ಪ್ರಥಮ ಪುರುಷ ಪ್ರತ್ಯಯಂದ ಅಂತ್ಯ ಆವ ಪೂರ್ಣ ಕ್ರಿಯಾಪದಕ್ಕೆ 'ಇಲ್ಲೆ'ಂತೇಳ್ವ ರೂಪ ಸೇರಿ ನಿಷೇಧ ಕ್ರಿಯಾ ರಚನೆ ಆದೆ. ಇದ್ ಎಲ್ಲ ವಚನ, ಲಿಂಗ, ಪುರುಷಗಳಿಗೆ ಸಮಾನವಾಗಿ ಉಟ್ಟು.

ಉದಾ:

ನಾ ಕೊಟ್ಟತ್ ಇಲ್ಲೆ → ನಾ ಕೊಟ್ಟತ್ಲೆ.

ನಾ ಹೇಳ್‌ಎತ್ ಇಲ್ಲೆ → ನಾ ಹೇಳ್‌ತ್ಲೆ.
ನಾವು ಕೊಟ್ಟಎತ್ ಇಲ್ಲೆ → ನಾವು ಕೊಟ್ಟಎತ್ಲೆ.
ನೀವು ಕೊಟ್ಟಎತ್ ಇಲ್ಲೆ → ನೀವು ಕೊಟ್ಟಎತ್ಲೆ.
ಅಂವ ತೀಂತ್ ಇಲ್ಲೆ → ಅಂವ ತೀಂತ್ಲೆ.
ಅವು ತೀಂತ್ ಇಲ್ಲೆ → ಅವು ತೀಂತ್ಲೆ.

10.1 ಅಲ್ಲಂತ ಹೇಳ್ದು ಯಾದಾರ್ ವ್ಯಕ್ತಿ, ವಿಷಯನ ಅಲ್ಲಗಳ್ದ್, ಅದಿಕೆ ಬೇರೊಂದು ವ್ಯಕ್ತಿ ಅಥವಾ ವಿಷಯನ ಪರ್ಯಾಯವಾಗಿ ಸೂಚಿಸುದು.

ಉದಾ: ಇಂವ ಅಲ್ಲ, ಅಂವ ಬರ್ಲಿ, ಚಾ ಅಲ್ಲ, ಕಾಫಿ ಕೊಡಿ.
ಇದರ ಅಲ್ಲ, ಅದರ ಕೊಡಿ, ತಿಂಡಿ ಅಲ್ಲ, ಊಟ ಕೊಡಿ.

ಕ್ರಿಯಾ ಮೂಲಗಎಳಿಗೆ, –ಇಕೆ,–ಕೆ ಸೇರ್ಸಿದ ಕೃನ್ನಾಮ ರೂಪಗಎಳಿಗೆ,–ಇಲ್ಲೆಂತೇಳ್ದರ ಸೇರ್ಸಿಯೂ ನಿಷೇಧ ರೂಪ ರಚನೆ ಆದು ಉಟ್ಟು. ಇದೂ ಎಲ್ಲ ಪುರುಷ ಲಿಂಗ, ವಚನಗಎಳಿಗೆ ಸಾಮಾನ್ಯ.

ಉದಾ: ನಾ, ನಾವು, ನೀ, ನೀವು, ಅಂವ, ಅವು ಕೊಡಿಕೆ | ತಿಂಬಕೆ | ಹೇಳಿಕೆ | ಕೇಳಿಕೆ | + ಇಲ್ಲೆ.

10.2 ಕಾಂಕ್ಷಿತ ಕ್ರಿಯಾರೂಪ:

ಒಂದು ಕ್ರಿಯೆ ಹೀಂಗೆ ನಡಿಯಎಲಿಂತ ತನ್ನ ಆಕಾಂಕ್ಷೆ (ಬಯಕೆ)ನ ಹೇಳುವ ಕ್ರಿಯಾ ರೂಪಗಳ ಕಾಂಕ್ಷಿತ ಕ್ರಿಯಾರೂಪಂತ ಕರ್ದೊಳೆ. ಇದರ ನಮ್ಮ ಬಾಸೆಲಿ ನಿರ್ದಿಷ್ಟವಾಗಿ ಹೇಳಿಕೆ ಕಷ್ಟ. ಇಂಗ್ಲೀಷಲಿ 'Obligative'ಂತ ಸುಲಭಲಿ ಹೇಳಿಕೆ ಆದೆ. ಇದ್ ನಮ್ಮ ಆಸೆನ (ಬಯಕೆನ ಅಥವಾ ಇಚ್ಛೆನ) ವ್ಯಕ್ತಪಡ್ಸುವ ರೀತಿನ ಕ್ರಿಯೆ. ಈ ಕೆಳಗೆನ ಎರ್ಡ್ ಪ್ರತ್ಯಯಗ ಇದರ ತೋರ್ಸುವೆ.

–ಒಕು, –ಕು:

ಕ್ರಿಯಾಧಾತು + ಪ್ರೇರಣಾರ್ಥಕ ಪ್ರತ್ಯಯದ ನಂತರ ಈ ಪ್ರತ್ಯಯಗ ಬಂದವೆ.

(1) ವ್ಯಂಜಾನಂತ ಧಾತುಗಳಿಗೆ –ಒಕು ಸೇರ್ದೆ.

ಉದಾ: ಆಗ್+ಸ್+ಒಕು → ಆಗ್ಸೊಕು, ಮುಗಿ+ಸ್+ಒಕು → ಮುಗ್ಸೊಕು;
'ಒಂದು ತಿಂಗಳೊಳಗೆ ಆ ಕೆಲ್ಸನ ಮುಗ್ಸೊಕು'
ಕೊಡ್+ಒಕು → ಕೊಡೊಕು, ಸೋದರಕೆ ಹೆಣ್ಣ್ ಕೊಡೊಕು'
ತರ್ + ಒಕು → ಹೆಣ್ಣ್ ಹಕ್ಕಲೆಂದ ತರೊಕು,
ಎತ್ತ್‌ನ ದೂರಂದ ತರೊಕು'
ಬರಿ–ಯ್–ಒಕು → ಬರಿಯೊಕು. 'ಬಾವಂಗೆ ಕಾಗದ ಬರಿಯೊಕು'

(2) ಇತರ ಕಡೆಗಳಲ್ಲಿ –ಕು ಪ್ರಯೋಗ ಆದೆ.

ಆ+ಕು → 'ಅವು ನಿಂಗೆ ಏನಾಕು?'

ಹೋ+ಕು → ಹೋಕು, 'ನಾಳೆ ಮಂಗ್ಳೂರಿಗೆ ಹೋಕು'

10.3 ಆಶಯ ಕ್ರಿಯಾಪದ

ಕ್ರಿಯಾ ಮೂಲಕ್ಕೆ –ಅಲಿ, ಲಿ (ಪ್ರಥಮ ಪುರುಷ, ಸರ್ವನಾಮ) –ಒನೊ (ಉತ್ತಮ ಪುರುಷ ಸರ್ವನಾಮ) ರೂಪುಲಿ ಪ್ರಯೋಗ ಆದೆ.

ಉದಾ: ಹೆರ್–ಅಲಿ → ಹೆರ್ಎಲಿ, 'ಅದ್ ಗಎಂಡ್ ಕೂಸುನ ಹೆರಎಲಿ'.

ಹೊರ್–ಅಲಿ → ಹೊರ್ಎಲಿ, 'ಈ ಹೊರೆನ ಅಂವ ಹೊರಎಲಿ'.

ಬರ್–ಸ್–ಅಲಿ → ಬರ್ಸಎಲಿ; ಅವ್ಕೆ ಕಾಗದ ಬರ್ಸಎಲಿ'.

ಇರ್–ಅಲಿ → ಇರ್ಲಿ. 'ಇದ್ ನಿಂಗೆ ಇರ್ಲಿ'

'ಅವು ಇಲ್ಲಿ ಇರ್ಲಿ'

ಪ್ರಥಮ ಪುರುಷ ಬಹುವಚನ

–ಒನೊ, ಉದಾ: ಬಾ–ಒನೊ → ಬಾವೊನೊ, 'ನಾಳೆ ಬೊಳ್ಪಿಗೆ ಬಾವೊನೊ'

ಹೋಗು–ಒನೊ → ಹೋವೊನೊ

ತಿಂಬ್–ಒನೊ → ತಿಮ್ಮೊನೊ, 'ಹಣ್ಣ್ ತಿಮ್ಮೊನೊ'

ಉಂಬ್–ಒನೊ → ಉಮ್ಮೊನೊ, 'ಹೊಸ್ತ್ ಉಮ್ಮೊನೊ'

10.4 ವಿಧ್ಯರ್ಥಕ ಕ್ರಿಯೆ :

ಮಧ್ಯಮ ಪುರುಷ, ಏಕವಚನಎಲಿ, ಕ್ರಿಯಾಧಾತುಗಎಳಿಗೆ ಯಾವ ಪ್ರತ್ಯಯವೂ ಸೇರದೆ ಪ್ರಯೋಗವಾಗುವ ಕ್ರಿಯಾಪದಗಳ ವಿಧ್ಯರ್ಥಕ ಕ್ರಿಯಾಪದಗಂತೇಳುವೆ.

ಉದಾ: ಕೊಡು, ಬುಡು; ಹೋಗು, ಹಾರ್, ಹತ್ತ್ ಇತ್ಯಾದಿ.

ಕ್ರಿಯಾಧಾತುಗಎಳಿಗೆ ಮಧ್ಯಮಪುರುಷ, ಬಹುವಚನ ಪ್ರತ್ಯಯ ಸೇರಿರೆ ಅದರ ಗೌರವಾರ್ಥಕ ವಿಧ್ಯರ್ಥಕ ಕ್ರಿಯಾಪದಂತ ಹೇಳುವೆ. ಏಕವ್ಯಕ್ತಿ ಇರ್ಕನ ಇದರ ಗೌರವಾರ್ಥಕಂತ ಕರ್ದವೆ. ಒಬ್ಬರಿಗಿಂತ ಹೆಚ್ಚಿಗಿರ್ಕನ ಅದ ಕೇವಲ ಬಹುವಚನದ ಕ್ರಿಯೆಂತಹೇಳುವೆ.

ತರ್–ಬರ್–ಂತೇಳುವ ಕ್ರಿಯಾದಾತುಗಳ್ಲಿ ಬದಲಾಣೆಗ ಆದ ಮೂಲರೂಪ ಕಂಡದೆ.

ತಂ+ಬಾ (ತಕಎಂಡ್ ಬಾ) ಬರ್ → ಬಾ (ಏಕ ವಚನ)

ತನ್+ಇತನ್ನಿ; → 'ಅಂಗ್ಡಿಂದ ಬಾಕನ ನಂಗೊಂದು ಅಂಗಿ ತನ್ನಿ'

ಬನ್+ಇ → ಬನ್ನಿ; 'ಮಗಳ ಕರ್ಕಂಡ್ ಬನ್ನಿ'

ನಿಷೇಧಾರ್ಥಕ ವಿಧ್ಯರ್ಥ ಕ್ರಿಯೆ:

ಕ್ರಿಯಾಧಾತುಗಳಿಗೆ 'ಬೇಡ' ಎಂಬ ನಿಷೇಧ ಪದನ ಸೇರ್ಸಿ ಈ ಕ್ರಿಯೆನ ರಚನೆ ಆದೆ.

ಕೊಡ್+ಬೇಡ → ಕೊಡ್ಬಡ; ಬರ್+ಬೇಡ → ಬರ್ಬಡ (ಏಕವ)

ಕೊಡ್+ಬೇಡಿ → ಕೊಡ್ಬಡಿ; ಬರ್+ಬೇಡಿ → ಬರ್ಬಡಿ (ಬಹು.ವ)

ಅರ್ಥ ತುಣುಕುಗ

11.0 ವಿಭಕ್ತಿ ಪ್ರತ್ಯಯಗಾಗಳಲೀ, ಕ್ರಿಯಾ ಪ್ರತ್ಯಯಗಾಗಲೀ ಸೇರದ, ಬೇರೆ ಅರ್ಥ ಘಟಕಗಳೊಟ್ಟಿಗೆ ಸೇರಿಕಂಬ ಅರ್ಥಘಟಕಗಳ ಅರ್ಥ ತುಣುಕುಗಂತ ಹೇಳುವೆ. ಇಂಗ್ಲಿಷ್‌ಲಿ ಇವುಗಳ Cliticoಂತ ಕರಿದು.

(1) **ದರ್ಶಕ ತುಣುಕು**(Demonstrative Clitic)

(a) **ಸಮೀಪಾರ್ಥಕ:**

ಈ–ಈಗ; ಹೀ–ಗೆ → ಹೀಂಗೆ ಇವ್ –ಅ → ಇಂವ

ಇ–ಲ್ಲಿ → ಇಲ್ಲಿ, ಇ–ತ್–ಅ → ಇತ್ತ; ಇಂ–ತ, ಇ–ಷ್ಟ್, ಇ–ದ್; ಇಂ–ದ್;

(b) **ದೂರಾರ್ಥಕ:** ಆ; ಹಾ; ಅ

ಆ; ಆ–ಗ, ಹಾ–ಗೆ → ಹಾಂಗೆ, ಅ–ಂವ; ಅಲ್ಲಿ, ಅ–ತ್ತ, ಅ–ಷ್ಟ್; ಅಂದ್; ಅ–ದ್;

(c) **ಪ್ರಶ್ನಾರ್ಥಕ:** ಯಾ–ರ್, ಯಾ–ದ್, ಯಾ–ಂವ;

ಹೇ–ಗೆ → ಹೇಂಗೆ; ಏ–ಕೆ; ಎ–ಲ್ಲಿ, ಎ–ತ್ತ, ಎಂತ, ಎಷ್ಟ್, ಎಂದ್

(d) **ಅಧಿಕರಣಾರ್ಥಕ:** –ಅ

ಉದಾ: ಇ–ಲ್ಲಿ, ಅ–ಲ್ಲಿ; ಇ–ಲ್ಲಿ–ಗೆ, ಅ–ಲ್ಲಿ–ಗೆ.

(e) **ಸ್ಥಾನಾರ್ಥಕ:** –ತ್ತ

ಉದಾ: ಇ–ತ್ತ → ಇತ್ತ, ಅ–ತ್ತ ಅತ್ತ, ಎ–ತ್ತ ಎತ್ತ

–ಇತ್ತಂದ (ಪಂ.ವಿ) ಅತ್ತಂದ, ಎತ್ತಂದ

(f) **ರೀತಿ ವಾಚಕ:**

–ನ್ತ → ಇ–ನ್ತ → ಇಂತ (ಇಂತಪ್ಪ → ಇಂತಹ → ಇಂಥ → ಇಂತ)

ಅ–ನ್ತ, ಎ–ನ್ತ, ಅಂತದ್, ಎಂತದ್, ಅಂತಂವ, ಇಂತಂವ

ಅನ್ತೊವು, ಇನ್ತೊವು, ಎನ್ತೊವು.

(g) **ಪರಿಮಾಣವಾಚಕ:**–ಸ್ಟ್,

ಉದಾ: ಅ–ಷ್ಟ್, ಇ–ಷ್ಟ್, ಎ–ಷ್ಟ್

(h) **ಕಾಲವಾಚಕ:** –ಕನ, –ನ್ದ್, –ಗ, –ಗಳೂ,

ಉದಾ: ಆ–ಕನ, ಹೋ–ಕನ, ಕೊಡ್–ಕನ
ಅ–ನ್ದ್, ಇ–ನ್ದ್, ಎ–ನ್ದ್ ಅಂದ್‌ನ, ಇಂದ್‌ನ, ಎಂದ್‌ನ (ಷ, ಪ್ರ)
ಆ–ಗ, ಈ–ಗ, ಯಾ–ಗ
ಆ–ಗಳೆ, ಈ–ಗಳೆ; ಯಾ–ಗಳು
ಆಗಳೊ, ಈಗಳೊ; ಯಾ–ಗಳೊ

(i) ಕಿರಿಯತನಾರ್ಥಕ:

ಹಿರಿಯೊವು ಸಣ್ಣವರೊಟ್ಟಿಗೆ ಮಾತಾಡ್‌ಕನ ತಮ್ಮ ಆಪ್ತತನ ತೋರ್ಸುವ ಸಲುವಾಗಿ –ನೆ#ಂತೇಳುವ ಪ್ರತ್ಯಯನ ಬಳ್ಸುದು ಉಟ್ಟು.

ನನ್ನ ಕಾವ್ಯಕೃತಿ ಮಾನಸ ಮಹಾಭಾರತ (ಪುಟ100)ಲಿ, ಬಲರಾಮ ತನ್ನ ಅಧಿಕಾರವಾಣಿಂದ ಮಾತಾಡ್‌ಕನ 'ನೀ ಬಾಯಿ ಮುಚ್ಚುನೇ'ಂತ ಹೇಳುವಾಂಗೆ ಪ್ರಯೋಗ ಮಾಡಿಯೊಳೆ. ಅಂವ ತನ್ನ ತಮ್ಮ ಅಲ್ಲದಿದ್ದರೆ ಹಾಂಗೆ ಹೇಳಿಕಿತ್ತ್‌ಲೆ.

ಬೇರೆ ಉದಾಹರಣೆಗ ಹೀಂಗೊಳೊ:ಇತ್ತ–ನೆ; ಎಷ್ಟ್–ನೆ; ಅಂವ–ನೆ; ಯಾರ್–ನೆ, ಅಂದ್–ನೆ; ಬನ್ನೆ–ನೆ; ಕೊಡುವೆ–ನೆ; ಬಾ–ನೆ; ಅಕ್ಕ–ನೆ, ಮರ–ನೆ; 'ಅದಾಕಿಲೆನೆ ಗೂಡೆ' (ಪುಟ24)

(j) ಗಡಾರ್ಥಕ:

ಒಂದು ವಿಷಯನ ಹೇಳ್ದರ ಪೂರ್ಣ ತಿಳಿವಳಿಕೆ ಹೇಳುವಂಗೆ ಇರುದು ಸಂಶಯಂತೇಳ್ವ ಅರ್ಥನ ಮಾತ್‌ನ ಕಡೆಲಿ ಬಾವ 'ಗಡ'ಂತ ಹೇಳುವ ರೂಪು ತೋರ್‍ಸಿದೆ. ಹಳಗನ್ನಡ ಕಾವ್ಯಗಳ್ಲಿ ಈ ಪ್ರಯೋಗ ತುಂಬ ಸಱ್ತಿ ಕಂಡದೆ. ಹೊಸಗನ್ನಡಱಲಿ ಇದರ –ಅಂತೆಂತೇಳುವ ರೂಪುಲಿ ತೋರ್ಸುದು ರೂಢಿ. ಅವನು ಸೈನ್ಯಕ್ಕೆ ಸೇರಿದನಂತೆ –ಇತ್ಯಾದಿ.

'ಗತಕಾಲಂ ಲಯಕಾಲಮಾಯ್ತು. ಆಯ್ತು ನಿನಗಿನ್ನಂತ್ಯ ಕಾಲಂ–ಗಡಾ!– –ರನ್ನ ಕವಿ. ಸಾಹಸಭೀಮ ವಿಜಯ ಕಾವ್ಯಲಿ.

'ಕಾಲಪುರುಷಂಗೆ ಗುಣಮಣಂ ಇಲ್ಲಂಗಡ, ಒಡಲೊಳ್ ಗುಡುಗುಟ್ಟುಗುಂ ಗಡ! ಜಡಂ ಗಡ;'

– ಮುದ್ದಣ, ರಾಮಾಶ್ವಮೇಧ.

ಈ ಕಾಲದ ಕನ್ನಡದ ಕೆಲೊವು ಉಪಭಾಷೆಗಳಲ್ಲಿ ಮಾತ್ರ ಇದರ ರೂಪಗಳ ಕಾಣಱ್,

ಉದಾ: ಹವ್ಯಕರ ಕನ್ನಡ, 'ಅಂವ ಬತ್ತಡ;' 'ಕೂಸಿಂಗೆ ಕೊಡೇಕೊಡ'
ಅರೆಬಾಸೆಲಿ: 'ಅಂವ ಬಾತ್‌ಗಡ' 'ಗೂಡೆಗೆ ಕೊಡೊಕಡ'.

ಗಡಂತೇಳುವ ರೂಪಕೆ ಬರೇ–ಡಂತೇಳುವ ಉಪರೂಪಗ ಕೆಲೊವು ಕಡೆ ಬಂದವೆ.

ಗಡಂತೇಳುವ ರೂಪು ಸ್ವತಂತ್ರ ಪದಗಳನಂತರ ಬಂದದೆ.

ಉದಾ: ತಂಬ ಗಡ; ಕೊಡುದು ಗಡ; ಅಂವ ಗಡ; ಅಪ್ಪ ಗಡ;

ಕೆಲೊವು ಸಂದರ್ಭಲಿ, ಒಂದು ಕ್ರಿಯಾಪದನ್ನೇ ಈ ಅರ್ಥಲಿ ಬಳಸುದೂ ಉಟ್ಟು.

ಉದಾ: ಅಂವ ಬಂದದೆ ಗಡಂತ ಹೇಳುವ ಬದ್‌ಲಿಗೆ ಅಂವ ಬಾದು ಕಂಡದೆಂತನೂ ಹೇಳಕ್;

ಅಂವ ಕೊಡುದು ಗಡ; ಅಂವ್ ಕೊಡುದು ಕಂಡದೆ.

(k) ನಿಷೇಧಾರ್ಥನ ಹೇಳ್‌ಕನ ಬೊತ್ತ್‌ಂತ ಒಂದು ಪದನ ಹೇಳುವೆ.

ಉದಾ: ನನ್ನಂದ ಬೊತ್ತ್; ನಂಗೆ ಬೊತ್ತ್.

ನಿನ್ನಂದ ಬೊತ್ತ್; ನಿಂಗೆ ಬೊತ್ತ್.

ನಂಗೆ ಏನೂ ಬೊತ್ತ್.

(l) ಪ್ರೀತಿ ಸೂಚಕ: ಇದ್ ಯಾಗೋಳು ಮಧ್ಯಮ ಪುರುಷ ಏಕವಚನಲೇ ಇದ್ದದೆ.

ಉದಾ: ಅಂವ ನಿನ್ನ ಬಾವ ಬಲ;

ನಿನ್ನ ಅಕ್ಕ ಬಲ; ಅಕ್ಕ ಬಲ; ಸರಿ ಬಲ ಇತ್ಯಾದಿ.

12. ಧಾತು (ಮೂಲ) ರೂಪ ವ್ಯತ್ಯಯ

ಕ್ರಿಯಾಧಾತು ಅಥವ ಮೂಲರೂಪಗಳ್ಲಿ ಕೆಲೊವು ಪ್ರತ್ಯಯಗ ಸೇರ್‌ಕನ ಧ್ವನಿಮಾ ರೂಪದ ಕೆಲೊವು ಬದಲಾವಣೆಗ ಕಂಡ್ ಬಂದವೆ. ಇದರ ಇಂಗ್ಲೀಷ್‌ಲಿ, Stem Alternatesಂತ ಕರ್ದವೆ.

12.1 ಕೀಳ್–, ಕಿಳ್;

ಕೀಳ್ –ಸ್ವರಪ್ರತ್ಯಯಗಳೆದ್‌ರ್, ಉದಾ: ಕೀಳ್–ಉವೆ; ಆ ಮುಳ್ಳುದ್ಯೆನ ಕೀಳ್– ಕಿಳ್–ವ್ಯಂಜನ ಪ್ರತ್ಯಯಗಳೆದ್‌ರ್–ಳ್ ತ್ತ್ ಆಗಿ ಪರಿವರ್ತನೆ ಆದೆ.

ಕಿತ್–ತ್–ಹಾಕ್ → ಕಿತ್ತ್ ಹಾಕ್.ಕಿತ್–ತ–ಅವೆ → ಕಿತ್ತವೆ –ನೇಜಿನ ಹಳು ಕಿತ್ತವೆ.

12.2 ಸಾಯ್–, ಸಾ–, ಸಯ್–

ಸಯ್–ವ್ಯಂಜನ ಪ್ರತ್ಯಯದೆದರ್, ಯ್ → ತ್–

ಉದಾ:

ಸತ್‌-ತೊ → ಸತ್ತೊ, ಯುದ್ಧೆಲಿ ಎಷ್ಟೋಜೆನ ಸತ್ತೊ.
ಸಾ-, -ವು, -ಯು ಪ್ರತ್ಯಯಗಳೆದ್‌ರ್‌,
ಉದಾ: ಸಾವು; ಸಾಯುವ, ಸಾಯಿ;

12.3 ಬೇಯ್‌-, ಬೇಂ-, ಬೇ-, ಬೆನ್‌-

ಬೆನ್‌-ಭೂತಕಾಲವಾಚಕ-ದದ ಎದರ್‌, **ಉದಾ:** 'ಒಲೆಮೇಲೆ ಹುಗ್ಗ ಬೆಂದದೆ'. ಬೆಣ್ತೆಕ್ಕಿ ಬೇಗ ಬೆಂದದೆ.

ಬೇ-, ತ್‌,-ಸ್‌,ಂತೇಳ್ವ ಪ್ರತ್ಯಯಗಳ ಎದ್‌ರ್‌.

ಉದಾ: 'ಗೆಂಜಿ ಬೇತೋ?'
'ನಾ ಎಷ್ಟ್‌ಂತ ಬೇಸಿ ಹಾಕುದು? ನಂಗೆ ಸಾಕಾದೆ.
ಬೇಂ—ಕೆ ಪ್ರತ್ಯಯದೆದರ್‌

ಉದಾ: ಕಿಚ್ಚಿನ ಬೇಂಕೆ ತಡಿಯಕೆ ಆದ್‌ಲೆ.
'ನಟ್ಟಬೇಸಗೆಲಿ ಬಿಸ್‌ಲ್‌ನ ಬೇಂಕೆ ಜಾಸ್ತಿ'.
ಬೇಯ್‌- ಇತರ ಕಡೆಗಳಲ್ಲಿ, ಬೇಯು-ಉವ; ಬೇಯದ,
'ಒಲೆಲಿಸಿದ್‌ ಬೇಯಕನ ಮುಟ್ಟ ಕಿಚ್ಚಿ ಮೊಟ್ಟ್‌ಕೆಂಡೇ ಕುದ್ದುರು'
'ಆ ಕೆಲ್ಸ ನಿನ್ನಂದ ಬೇಯಕಿಲೆ'
'ಬೇಯದರ ತಿಂಬಕೆ ಆಕಿಲೆ'

12.4 ಸಲ್ಲ್‌-, ಸನ್‌-

ಸನ್‌ -ದಕಾರದ ಎದ್‌ರಿಗೆ.

ಉದಾ: 'ಸಾಲ ಸಂದಾಯ ಆತೋ?'
'ಸಾಲದ ಬಾಬ್ತು ಸಂದ ಹಣ ಎಷ್ಟ್?'
ಸಲ್ಲ್‌-ಬೇರೆ ಕಡೆಗೆ.
ನನ್ನಂದ ನಿಂಗೆ ಏನಾರ್‌ ಸಲ್ಲಿಕೆಉಟ್ಟೊ
ದೇವ್ರಿಗೆ ಹರಿಕೆ ಸಲ್ಲ್‌ಸೂಕು
'ಸಲ್ಲದ ಕಾರ್ಯನ ಮಾಡಿಕೆ ಆಗೆದ್‌'

'ತೊಪ್ಪುಗಳ ಒಪ್ಪಾಗಿ ಸಲ್ಲ್‌ಸಿಕೆಂಡ್‌, ದನ ಕೆರ್‌ಗೆ ಮುಕ್ಕ ಮೊರಿಗೆ, ಕುಟುಂಬದ ಬಂಧುಗೆಳಿಗೆ ಒಳ್ಳೆದ್‌ ಮಾಡುವ ಪುಣ್ಯಕೀರ್ತಿ ಆ ಗುರು ಕಾರ್ನೋರಿಗೆ ಸೇರ್‌ದ್‌.

12.5 ತಿನ್‌-; ತೀನ್‌-

ತಿನ್‌ ವಿಧ್ಯರ್ಥಕ ಕ್ರಿಯೆ (ಮ.ಪು)ನೀ ತಿನ್‌; ನೀವು ತಿನಿ;
ಭೂತಕಾಲವಾಚಕದ ಎದ್‌ರ್‌, ತಿಂದ, ತಿಂದೆರಿ

ತೀನ್–ತ್ (ಭೂ,ಕಾ,ವಾ,ಪ್ರ,ಪು,ಏ,ವ)
ಅಂವ ಅದರ ತೀನ್ತ್.

12.6 ಕಾಯ್– ಕಾ–

ಕಾ–ವ್ಯಂಜನಗಳ ಎದ್‌ರಿಗೆ; ಉದಾ: ಕಾ–ದ, ಕಾದ ಕಲ್ಬಿಣ ಮೆತ್ತಂಗಾದೆ.
'ಕಾವ್ಲಿ ಕಾದ ಮೇಲೆ ಹಿಟ್ಟ್ ಹೊಯ್ಯೊಕು'
ತುಂಬ ಕಿಚ್ಚಿ ಹಾಕಿದರ್‌ಂದ ನೀರ್ ಬೇಗ ಕಾತ್.
ಕಾಯ್–ಸ್ವರಾದಿ ಪ್ರತ್ಯಯಗಳ ಎದ್‌ರ್.
'ಹಾಲ್ ಕಾಯುವ ವರೆಗೆ ಕಾಫಿಗೆ ಕಾಯೊಕು'

12.7 ನಿಷೇಧ ರೂಪ: ಬೇಡ; –ಬಡ

–ಬಡ ಸಂಯುಕ್ತ ಕ್ರಿಯಾ ರೂಪುನ ಒಂದು ಅಂಗವಾಗಿ ಬಾಕನ;
ಒಮ್ಮೊಮ್ಮೆ ಬೇಡ ಎಂಬ ಸ್ವತಂತ್ರ ರೂಪುನೊಟ್ಟಿಗೆ ಸ್ಥಾನ ಪಲ್ಲಟ ಆದೂ ಉಟ್ಟು (free Variation) ಕೊಡ್ಬಡ–ಕೊಡ್‌ಬೇಡ; ಹೇಳ್ಬಡ/ಹೇಳ್ಬೇಡ.
ಒಂದು ವಾಕ್ಯಲಿ ಆಖ್ಯಾತವಾಗಿ ಬಾಕನ 'ಬೇಡ' ಎಂಬೊದಿಕೆ ಪಲ್ಲಟ ಕ್ರಿಯೆ ಇಲ್ಲೆ. 'ನಂಗೆ ಅದ್ ಬೇಡ'
'ನೀ ಇದರ ಹಿಂದೆ ಕೊಡುದು ಬೇಡ'

12.8 ಇಲ್ಲೆ; –ಇಲೆ; –ಲೆ.

–ಲೆ ಭೂತಕಾಲದ ಪೂರ್ಣ ಕ್ರಿಯಾಪದ, (ನಪುಂ,ಏ.ವ)
ಅನಂತರ ಬಂದದೆ.
ಉದಾ: ಆತ್–ಲೆ, ಹೋತ್ –ಲೆ, ಕೊಟ್ಟಲ್–ಲೆ,ತೀಂತ್‌ಲೆ.
–ಇಲೆ ಕ್ರಿಯಾ ನಾಮಪದದ ಅನಂತರ ಬಂದದೆ
ಉದಾ: ಮಾಡಿಕೆ+ಇಲೆ → ಮಾಡಿಕಿಲೆ
ಕೊಡಿಕೆ+ಇಲೆ → ಕೊಡಿಕಿಲೆ
ಹೋಕೆ+ಇಲೆ → ಹೋಕಿಲೆ
– ಇಲ್ಲೆ ವಾಕ್ಯಲಿ ಆಖ್ಯಾತ ರೂಪಲಿ ಬಂದದೆ
ಉದಾ: 'ಅದ್ ಇಲ್ಲೆ; ಆ ಪುಸ್ತಕ ನನ್ನ ಹಕ್ಕಲೆ ಇಲ್ಲೆ.

12.9 ಕೊಲ್ಲು; ಕೊನ್–

ಕೊನ್–ಭೂತಕಾಲ ಪ್ರತ್ಯಯ–ದದ ಎದ್‌ರ್
ಉದಾ:– ಕೊಂದಲ್ 'ಹುಲಿನ ಕೊಂದಲ್'

ಕೊಲ್ಲ್ –ಇತರ ಕಡೆಗಳ್ಲಿ

ಉದಾ: ಕೊಲ್ಲುವ ಕೆಲ್ಸ ಕೆಟ್ಟëದ್.

ಕೊಲ್ಲು (ವಿಧ್ಯರ್ಥಕ, ಮ,ಪು,ಏ,ವ)

ಕೊಲ್ಲಿ (ವಿಧ್ಯರ್ಥಕ, ಮ,ಪು,ಬ,ವ)

12.10 ತರ್–, ತಾರ್–, ತಾ– ತನ್–

ತನ್– –ದ–ನ್, ಮತ್ತೆ –ಇನ ಎದ್‌ರ್

ಉದಾ:

ತನ್ –ದ ತಂದ; ತನ್–ನೆ ತನ್ನೆ, ತನ್ನಿ

ತಾ– –ಕೆ, ಮ ಭವಿಷ್ಯತ್ಕಾಲ ವಾಚಕದ ಎದುರಿಗೆ,

ತಾಕೆ 'ಆ ಪುಸ್ತಕ ತಾಕೆ ಹೇಳ್'

ತಾವೆ: 'ನಾಳೆ ನಾ ಆ ಪುಸ್ತಕ ತಾವೆ'

ತಾದು: ಅಂವ ಬಾಕನ ತಾದು.

ತ–ಮದ ಎದ್‌ರಿಗೆ:

ಉದಾ: ತಂಬ. 'ಅದರ ಬೇಗ ತಂಬ'

ತಾರ್– ನಿಷೇಧ ಕ್ರಿಯಾ ವಿಶೇಷಣದ ಎದ್‌ರಿಗೆ:

ಉದಾ:

ತಾರದ, 'ನೀ ಅದರ ತಾರದ ಕಾರಣ ಏನ್?'

ತರ್–ಬೇರೆಡೆಗಳ್ಲಿ, ಉದಾ: ತರ್‌ಬಡ; ತರëಕ್; ತರೊಕು.

12.11 ಬರ್–ಬಂ–, ಬಾ–, ಬ–

ಬ, ತಂ–ನ ನಂತರ ಬಂದದೆ.

ಉದಾ: ತಂ –ಬ

(a) ಬಾ–ವಿದ್ಯರ್ಥ ಕ್ರಿಯೆಲಿ (ಮ.ಪು.ಏ.ವ)

ಉದಾ: ನೀ ಬಾ

(b) ಬಾ–ನಪುಂಸಕ ಲಿಂಗ ಏಕವಚನ (–ದು) ಮುಂದೆ.

ಉದಾ: ಅಂವ ನಾಳೆ ಬಾದು

(c) ಬನ್–, –ದ್, –ನ್, –ಇಗಳ ಎದ್‌ರಿಗೆ.

ಉದಾ: ಬಂದ, ಬನ್ನೆ, ಬನ್ನಿ;

(d) ಬಾರ್– ಅದ ಎದ್‌ರಿಗೆ,

ಉದಾ: ಬಾರದ;

(e) ಬೇರೆ ಕಡೆಗಳ್ಲಿ,

ಉದಾ: ಬರ್‌ಬಡ; ಬರëಕ್, ಬರೊಕು.

12.12 ಆಗ್, ಆ– –ಅ

ಅ–, ಕ್ಕಂತೇಳ್ವ ಒಪ್ಪಿಗೆನ ಸೂಚಿಸುವ ಪ್ರತ್ಯಯದೆದ್ರ್.

ಉದಾ: 'ಅಕ್ಕ, ನಂಗೆ ಒಪ್ಪಿಗೆ'

ಆ–ಸ್ ಅಲ್ಲದ ಇತರ ವ್ಯಂಜನ ಪ್ರತ್ಯಯಗಳ ಎದ್ರ್.

ಉದಾ: ಆ–ಕು; ಆದ, ಆನೆ, ಆತ್.

ಆಗ್–ಬೇರೆ ಕಡೆಗೆ.

ಉದಾ: ಆಗದ 'ಆಗದ ಊರಿಗೆ ಹೋಗದ ಓಲೆ'

ಆಗಿ :'ಆಗಿ ಹೋದ ಮೇಲೆ ಏನ್ ಮಾಡುದು?'

ಆಗ್‌ಸ್: 'ಗುದ್ದಿ ಹಣ್ಣ್ ಆಗ್‌ಸಿಕೆ ತೀದ್ರೋ?'

13. ಹೋಗ್ –ಹೋ

ಹೋಗ್–ಇ, **ಉದಾ:** 'ಬೇಗ ಹೋಗಿ ತಂಬ'

ಹೋಗ್–ಅಲಿ. ಉದಾ: ಅಂವ ಹೋಗಲಿ'

